
ಪುಸ್ತಕ ಪ್ರಪಂಚ

ಮಾರ್ಚಿ-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಮುಖ ಚಿತ್ರಕ್ಕೆ ವಿವರಣೆ—

ಕೇಂದ್ರದಲ್ಲಿರುವ ಬಿಳಿ ವೃತ್ತ 'ಸೂರ್ಯ.' ಇದರ ಸುತ್ತ ಅಪ್ರದಕ್ಷಿಣ ದಿಶೆಯಲ್ಲಿ ಸುತ್ತುತ್ತಿರುವ ಅರೆನೆರಳುಮಾಡಿದ ಕಿರಿವೃತ್ತ 'ಭೂಮಿ.' ಭೂನಿವಾಸಿಗಳಾಗಿರುವ ನಮಗೆ ನಮ್ಮ ವಾರ್ಷಿಕ ಚಲನೆ ಎಂದೂ ನೇರ ವಾಗಿ ನಮ್ಮ ಅರಿವಿಗೆ ಬರದು. ಬದಲು, ಸೂರ್ಯನೇ ನಮ್ಮ ಸುತ್ತ ಪರಿಭ್ರಮಿಸುತ್ತಿರುವಂಥ (ಮಿಥ್ಯಾ) ಅನುಭವವಾಗುತ್ತದೆ. ಆಕಾಶದ ಅಗಾದ ಆಳಗಳಲ್ಲಿ ಬೀಕಾಬಿಟ್ಟಿ ಹರಡಿಹೋಗಿರುವ ನಕ್ಷತ್ರಗಳು ನಮ್ಮ ಅತಿ ಸೀಮಿತ ಕಲ್ಪನೆಯಲ್ಲಿ ಕುಂಚಿಸುವ ಚಿತ್ರಗಳೇ ನಕ್ಷತ್ರ ರಾಶಿಗಳು ನಮ್ಮ ಗೋಚರಾಕಾಶದಲ್ಲಿ—ಮೇಷದಿಂದ ಮೀನದವರೆಗೆ. ಈ ರಾಶಿ ಗಳು ಪಶ್ಚಿಮ–ಪೂರ್ವ ದಿಶೆಯಲ್ಲಿ ಇಕ್ಕಟ್ಟಾದ ನಾಕ್ಷತ್ರಿಕ ಪಟ್ಟಿಗೆ ಸೀಮಿತವಾಗಿವೆ. ನಿಜ ಯುಗಾದಿಯಂದು (೨೧–೩–೧೯೯೬) ಸೂರ್ಯ ಮೀನ-ಮೇಷ ಸಂಧಿ ವಲಯದಲ್ಲಿದ್ದು ಕರಾರುವಾಕ್ಕಾಗಿ ಪೂರ್ವ ಬಿಂದುವಿನಲ್ಲಿ ಮೂಡಿ ಪಶ್ಚಿಮ ಬಿಂದುವಿನಲ್ಲಿ ಕಂತುತ್ತದೆ. ಅಂದು ಹಗಲು ಇರುಳು ಸಮ ಅವಧಿಯವು, ತಲಾ ೧೨ ಗಂಟೆಗಳು. ತರುವಾಯದ ದಿನಗಳಂದು ಸೂರ್ಯನ ಉದಯಾಸ್ತ ಬಿಂದುಗಳು ಉತ್ತರಾಭಿಮುಖವಾಗಿ ಜಾರುತ್ತವೆ, ಒಂದಿಗೇ ಹಗಲಿನ ಅವಧಿ ಅಧಿಕಾಧಿಕವಾಗುವುದು, ಎಂದೇ ಇರುಳಿನ ಅವಧಿ ೧೨ ಗಂಟೆಗಿಂತ ಕಡಿಮೆ ಕಡಿಮೆ ಆಗುವುದು.

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೬ ಸಂಚಿಕೆ ೬

ಮಾರ್ಚ್-೧೯೯೬

ಪರಿವಿಡಿ

೧. ಎಷ್ಟು ಯುಗಾದಿಗಳು ?
—ಪ್ರೊ॥ ಜಿ.ಟಿ. ನಾರಾಯಣರಾವ್... ೩

೨. ಮೇಘನಾದ ಸಹಾ
—ರೋಹಿಣಿಶರ್ಮ ೭

೩. ಸಸ್ಯಗಳು ಏಕೆ ವಾಸನೆ ಬೀರುತ್ತವೆ ?
—ಸಿ. ನಾಗಣ್ಣ ೧೧

೪ ಬೇಸರ–ಶಾಪವೋ ? ವರವೋ ?
—ಡಿ. ರಾಮಚಂದ್ರ ೧೭

೫. ನಮ್ಮಪ್ಪನ ಉತ್ಕೃಷ್ಟ ಉಡುಗೊರೆ
—ಜಿ. ಟಿ. ರಾಘವೇಂದ್ರ ೨೦

೬. ಅಳುಕು
—ಮಾಧವರಾವ್ ಮುಧೋಳ್ ೨೬

೭. ಮಗುವಿನ ಆಸಕ್ತಿ ಅರಳಲಿ
—ಗೋಪಾಲ ಅಶ್ರಿತ ೩೩

೮. ಕೃಷಿ ಅರಣ್ಯ, ಅರಣ್ಯ ಕೃಷಿ
ಸಂಗಮಿಸಿದಾಗ ಕೃಷಿ ಖುಷಿ
—ಎ. ಪಿ. ಚಂದ್ರಶೇಖರ್ ೩೯

೯. ಅಡುಗೆ ಅನಿಲ ದುರಂತ : ತಡೆಗಟ್ಟುವ
ಕ್ರಮಗಳು
—ಡಾ॥ ಕೃಷ್ಣ ಹಾಸನ ೪೯

೧೦. ಅಮ್ಮನ ಹಾಲು ಅಮೃತ
—ಡಾ॥ ಕರವೀರಪ್ರಭು ಕ್ಯಾಲಕೊಂಡ ೫೭

೧೧. ಕುಷ್ಠರೋಗ–ಪಾಪದ ಫಲವಲ್ಲ
—ಎಸ್. ಆರ್. ಪಾಟೀಲ ೬೩

೧೨. ಎರಡು ಹೆಣ್ಣು ಒಂದು ಗಂಡು
—ಡಿ. ಎಸ್. ಶ್ರೀನಾಥ್ ೬೮

ಪುಸ್ತಕ ಪರಿಚಯ
—ಬಿ. ಸುರೇಶ ೭೬
—ಎ. ಡಿ. ನಂಜುಂಡಸ್ವಾಮಿ ೭೭

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ: ರೂ. 6

ವಾರ್ಷಿಕ ಚಂದಾ: ರೂ. 60

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. 400

ಸಂಸ್ಥೆಗೆ: ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-570 006

ಎಷ್ಟು ಯುಗಾದಿಗಳು?

ಜಿ. ಟಿ. ನಾರಾಯಣರಾವ್

ಸಾಮಾನ್ಯ ಜನರ ಅರಿವಿಗೆ ಬಂದಿರುವಂತೆ ವರ್ಷದಲ್ಲಿ ಕನಿಷ್ಠ ಮೂರು ಯುಗಾದಿಗಳಿವೆ. ಅರಿವಿಗೆ ಬರದವು ಇನ್ನೂ ಎಷ್ಟೋ ಇವೆ. ಒಂದೊಂದು ಯುಗಾದಿಯನ್ನೂ "ಇದೇ ನಿಜವಾದ ಯುಗಾದಿ, ಮಿಕ್ಕವೆಲ್ಲವೂ ಮೂಢನಂಬಿಕೆಗಳು" ಎಂದು ಪ್ರಬಲವಾಗಿ ಸಮರ್ಥಿಸುವ, ತದನುಸಾರ ತಮ್ಮ ಧಾರ್ಮಿಕ-ಸಾಮಾಜಿಕ ಕ್ರಿಯಾಕಲಾಪಗಳನ್ನು ಅಳವಡಿಸಿಕೊಳ್ಳುವ ಮತ್ತು ಅವಶ್ಯವಾದರೆ "ನಮ್ಮ ಕೋಳಿಗೆ ಕೊಂಬು ಇರುವುದು ಖಾತ್ರಿ" ಎಂಬ ಕು-ವಾದವನ್ನು ಬೆಂಬಲಿಸಲು ಯುದ್ಧ ಸನ್ನದ್ಧರಾಗಲು ಕಾಲ್ಕೆರೆಯುತ್ತಿರುವ ಜನರು ಸಾಕಷ್ಟುಮಂದಿ ಇದ್ದಾರೆ. ಸಂಸ್ಕೃತಿ, ಧರ್ಮ, ನಂಬಿಕೆ, ಪವಿತ್ರಗ್ರಂಥ ಮುಂತಾದ ಅಸ್ಪಷ್ಟ ಆಧಾರಗಳ ಮೇಲೆ ಪರಂಪರೆ ಸಂಪ್ರದಾಯ ರೀತಿ ರಿವಾಜು ಮುಂತಾದ "ಗಾಣದೆತ್ತಿನ ನಡಿಗೆ ಜಾಡಿನ" ಮೇಲೆ ಇವರು ತಮ್ಮ ಬಾಳಗೂಡನ್ನು ಕಟ್ಟಿದ್ದಾರೆ. ಸರ್ಕಾರದ ವರಿಷ್ಠರಿಂದ (ರಾಜಕಾರಣಿಗಳೂ ಸೇರಿದಂತೆ) ಸಮಾಜದ ಕನಿಷ್ಠರವರೆಗೆ (ತೀರ ಬಡವರೂ ಸೇರಿದಂತೆ) ಯಾರನ್ನು ಬೇಕಾದರೂ ಒಂದು ಮೂಲಭೂತ ಪ್ರಶ್ನೆ ಕೇಳಿ: "ಯುಗಾದಿ ಎಂದರೇನು?"

ನಿಮಗೆ ದೊರೆಯುವ ಅಸಂಖ್ಯ ಉತ್ತರಗಳ ಪೈಕಿ ಆಯ್ದ ಕೆಲವು ಹೀಗಿರುತ್ತವೆ:

"ಪಂಚಾಂಗ ಅಥವಾ ದಿನಸೂಚಿ ನಿಗದಿಸುವ ಒಂದು ಹಬ್ಬ ಅದು."

"ನಮ್ಮ ಧಾರ್ಮಿಕ ನಾಯಕರು ಅಪ್ಪಣೆ ಕೊಡಿಸಿರುವ ಹಬ್ಬ."

"ಸರ್ಕಾರೀ ರಜೆ".

"ಪರಂಪರೆಯನ್ನು ಪ್ರಶ್ನಿಸಲು ನಾವು ಯಾರು? ಆಚರಣೆಯೊಂದೇ ನಮ್ಮ ನಿಜ ರಕ್ಷೆ."

"ಈ ಪ್ರಶ್ನೆಯೇ ಅಸಾಧು. ಪಾಶ್ಚಾತ್ಯ ವಿಜ್ಞಾನದ ದುಷ್ಪ್ರಭಾವ. ವಿಜ್ಞಾನದ ಈ ಅತಿಕ್ರಮ ಪ್ರವೇಶವನ್ನು ನಾನು ವಿರೋಧಿಸುತ್ತೇನೆ."

ಪರಿಕಲ್ಪನೆ ಮಸಕಾಗಿರುವಾಗ ಪದಗಳು ಶುಷ್ಕ ಅಕ್ಷರಪುಂಜಗಳಾಗುತ್ತವೆ! ಹಾಗಾದರೆ ಸ್ಪಷ್ಟ ಪರಿಕಲ್ಪನೆ ಏನು?

ಯುಗಾದಿ ಎಂದರೆ "ಯುಗದ ಆದಿ ದಿನ" ಎಂದರ್ಥ. ಇಲ್ಲಿ 'ಯುಗ'ವನ್ನು ವರ್ಷವೆಂದು ತಿಳಿಯಬೇಕು.

ವರ್ಷದ ಆದಿ ಎಂದರೇನು? ಹನ್ನೆರಡು ತಿಂಗಳುಗಳು ಸಂದು ಮತ್ತೆ ಒಂದನೆಯ ತಿಂಗಳು ಆರಂಭವಾಗುವ ದಿನವೇ ವರ್ಷದ ಆದಿ.

ಹೀಗೆಯೇ ಮುಂದುವರಿದರೆ ನಾವು ಅಂತಿಮವಾಗಿ ವಾಸ್ತವತೆಗೆ, ಅಂದರೆ ಪ್ರತ್ಯಕ್ಷ ಪ್ರಮಾಣಕ್ಕೆ, ಶರಣಾಗದೇ ವಿಧಿ ಇಲ್ಲ. ಇಲ್ಲಿಯ ವಾಸ್ತವತೆ: ಸೂರ್ಯ–ಭೂಮಿ ಸಂಬಂಧ.

ಸೂರ್ಯನ ಸುತ್ತ ಭೂಮಿ ನಿರಂತರ 'ಪರಿಭ್ರಮಣೆ'ಯಲ್ಲಿರುವುದು—ದೇವಾಲಯದ ಸುತ್ತ ಭಕ್ತ ಪ್ರದಕ್ಷಿಣೆ ಹಾಕುತ್ತಿರುವಂತೆ. ಜೊತೆಯಲ್ಲಿಯೇ ಭೂಮಿ ತನ್ನ ಸುತ್ತ ನಿರಂತರ 'ಆವರ್ತನೆ'ಯಲ್ಲಿಯೂ ಇರುವುದು—ಹರಿದಾಸರು ತಮ್ಮ ಸುತ್ತ ಗಿರಕಿಸುತ್ತ ದೇವಾಲಯದ ಸುತ್ತ ಪ್ರದಕ್ಷಿಣೆ ಗೈಯುವಂತೆ.

ಭೂಮಿಯಲ್ಲಿಯೇ ಹುಟ್ಟಿ ಬೆಳೆದು ಅರಳಿರುವ ನಾವು ಮತ್ತು ನಮ್ಮ ನಾಗರಿಕತೆ ಸಂಸ್ಕೃತಿಗಳು ಈ ಸರಳ ಸತ್ಯವನ್ನು ಗ್ರಹಿಸುವುದು ಅಸಾಧ್ಯ. ಏಕೆಂದರೆ ಆಕಾಶದ ಭೂಮವಿಸ್ತಾರ, ಕಾಲಪ್ರವಾಹದ ಅನಂತತೆಗಳಿಗೆ ಹೋಲಿಸಿದಾಗ ನಾವೂ ನಮ್ಮ ನಾಗರಿಕತೆಯೂ ಅತಿ ಕ್ಷುದ್ರ ಆಕಸ್ಮಿಕತೆಗಳು ಮಾತ್ರ. ನಮ್ಮ ದುರ್ಬಲ ಇಂದ್ರಿಯಗಳು ಈ ನೆಲದ ಮೇಲೆ ಈ ಅಲ್ಪಕಾಯವಾದ ತೊಗಲಗೊಂಬೆ ಸುರಕ್ಷಿತವಾಗಿ ಸುಪೋಷಿತವಾಗಿ ಬದುಕಿ ಉಳಿದಿರಲು ವಿಕಾಸಗೊಂಡವೇ ಹೊರತು ಆಕಾಶದ ಅಸೀಮ ವೈವಿಧ್ಯವನ್ನು ಪ್ರತ್ಯಕ್ಷ ದರ್ಶಿಸಿ ಅನುಭವಿಸಲೆಂದಲ್ಲ. ಎಂದೇ ನಮಗೆ ಗೋಚರಿಸುವ ದೃಶ್ಯ ಬೇರೆಯೇ:

ಸೂರ್ಯ ಮೂಡು ದಿಕ್ಕಿನಲ್ಲಿ ಹುಟ್ಟಿ ಬಾನಿನಲ್ಲಿ ಮೇಲೇರಿ ಪಶ್ಚಿಮಕ್ಕೆ ಹೊರಳಿ ಪಡುದಿಕ್ಕಿನಲ್ಲಿ ಕಂತುತ್ತದೆ. ಎರಡು ಕ್ರಮಾಗತ ಸೂರ್ಯೋದಯಗಳ ನಡುವಿನ ಅವಧಿ ಒಂದು ದಿವಸ (=೨೪ ಗಂಟೆಗಳು). ಇಂಥ ಸುಮಾರು ೩೬೫ ದಿವಸಗಳು ಸಲ್ಲುವಾಗ ಋತುಚಕ್ರದ ಒಂದು ಉರುಳಾಟ ಮುಗಿದು ಮುಂದಿನದು ತೊಡಗಿರುತ್ತದೆ. ಋತುಚಕ್ರದ ಈ ಪರಿಕ್ರಮಣದ ಅವಧಿಗೆ ವರ್ಷವೆಂದು ಹೆಸರು. ವರ್ಷದಲ್ಲಿ ಸುಮಾರು ೧೨ ಅಮಾವಾಸ್ಯೆಗಳು ಇರುವುವೆಂದು ಕ್ರಮೇಣ ಗೊತ್ತಾಯಿತು. ಹೀಗೆ ೧ ವರ್ಷ =೩೬೫ ದಿವಸಗಳು=೧೨ ತಿಂಗಳುಗಳು ಎಂಬ ಸ್ಥೂಲ ಸಂಬಂಧ ಮಾನವನ ತಿಳಿವಳಿಕೆಗೆ ಬಂದಿತು.

ಇದು ಹೇಗೂ ಇರಲಿ. ಋತುಚಕ್ರದ ಪರಿಕ್ರಮಣ, ವರ್ಷದ ಮುನ್ನಡೆಯನ್ನು ಭಾವನಾತ್ಮಕವಾಗಿ ಸೂಚಿಸುತ್ತದೆ. ಈ ಚಕ್ರದ ಒಂದು ಉರುಳಾಟ ಮುಗಿದು ಮುಂದಿನದು ತೊಡಗುವ ದಿವಸವೇ ಯುಗಾದಿ—ಇದು ಗಗನ ಸತ್ಯ, ಆಕಾಶ ನಮಗೆ ತಿಳಿಸುವ ವಾಸ್ತವ ಸಂಗತಿ. ಸರಿ, ಹಾಗಾದರೆ ಆ ಆರಂಭ ದಿನ ಯಾವಾಗ? ಅದನ್ನು ನಿರ್ಣಯಿಸುವುದು ಹೇಗೆ? ಅಥವಾ ಚಕ್ರದಲ್ಲಿ ಆರಂಭಬಿಂದು ಎಲ್ಲಿದೆ? ತಾತ್ತ್ವಿಕವಾಗಿ ಹೇಳುವುದಾದರೆ, ನಾವು ಅಪೇಕ್ಷಿಸಿದಲ್ಲಿ ಅದು ಇದೆ. ಈ ಅಪೇಕ್ಷೆಗೆ ಆಕಾಶದಲ್ಲಿ ಏನಾದರೂ ಸೂಚನೆ ಇದೆಯೇ ಎಂದು ತಪಾಸಿಸಬೇಕಾದದ್ದು ಮುಂದಿನ ಹೆಜ್ಜೆ.

ನಾವೆಲ್ಲರೂ ಉತ್ತರಗೋಳಾರ್ಧ ನಿವಾಸಿಗಳು. ಇಲ್ಲಿ ವಿಕಸಿಸಿದ ನಾಗರಿಕತೆಗಳು ಅನುಭವದಿಂದ ಕೆಲವು ತಥ್ಯಗಳನ್ನು ಅರಿತುಕೊಂಡುವು. ಇರುಳು–ಹಗಲು ಅವಧಿ ಸಮವಾಗಿಲ್ಲ. ಇರುಳಿನ ಅವಧಿ ಗರಿಷ್ಠವಾಗಿರುವ ಒಂದು ದಿನ ಇದೆ. ಅಂದು ಹಗಲಿನ ಅವಧಿ ಕನಿಷ್ಠ. ಮುಂದೆ ಇರುಳಿನ ಅವಧಿ ತಗ್ಗುತ್ತ ಹಗಲಿನ ಅವಧಿ ಹಿಗ್ಗುತ್ತ ಹೋಗಿ

ಯಾವುದೋ ಒಂದು ದಿನ ಉಭಯ ಅವಧಿಗಳೂ ಸಮವಾಗುತ್ತವೆ. ಮತ್ತೂ ಮುಂದೆ ಸಾಗಿದಾಗ ಇರುಳಿನ ಅವಧಿ ಕನಿಷ್ಠವಾಗುವ ದಿನ ಐದುತ್ತೇವೆ. ಅಂದು ಹಗಲಿನ ಅವಧಿ ಗರಿಷ್ಠ, ಅಲ್ಲಿಂದ ಮುಂದಕ್ಕೆ ಹಗಲಿನ ಅವಧಿ ತಗ್ಗುತ್ತ ಇರುಳಿನ ಅವಧಿ ಹಿಗ್ಗುತ್ತ ಯಾವುದೋ ಒಂದು ದಿನ ಉಭಯ ಅವಧಿಗಳೂ ಸಮವಾಗುತ್ತವೆ. ಮತ್ತೂ ಮುಂದೆ ಸಾಗಿದಾಗ ಪುನಃ ಇರುಳಿನ ಅವಧಿ ಗರಿಷ್ಠ (ಆದ್ದರಿಂದ ಹಗಲಿನ ಅವಧಿ ಕನಿಷ್ಠ) ಆಗಿರುವ ದಿನ ಐದುತ್ತೇವೆ. ಅಲ್ಲಿಗೆ ಋತುಚಕ್ರದ ಒಂದು ಉರುಳಾಟವೂ ಮುಗಿದಿರುತ್ತದೆ.

ಸಹಜವಾಗಿ ನಾಲ್ಕು ದಿನಗಳಿಗೆ ಪ್ರಾಮುಖ್ಯ ಒದಗಿತು. ಇರುಳು ಗರಿಷ್ಠ, ಹಗಲು ಕನಿಷ್ಠ—ತೀವ್ರ ಚಳಿಯ ದಿನ ಕೂಡ; ಹಗಲೂ ಇರುಳೂ ಸಮ ಅವಧಿಯವು—ಚಳಿ ಹೋಗಿ ವಸಂತ ಬರುವುದೆಂಬ ಸೂಚನೆಯ ದಿನ; ಹಗಲುಗರಿಷ್ಠ ಇರುಳು ಕನಿಷ್ಠ—ತೀವ್ರ ಸೆಖೆಯ ದಿನ ಕೂಡ, ಇರುಳೂ ಹಗಲೂ ಸಮ ಅವಧಿಯವು—ಸೆಖೆ, ಮಳೆ ಹೋಗಿ ಚಳಿಗಾಲ ಬರುವುದೆಂಬ ಸೂಚನೆಯ ದಿನ. ಯಾರು ಹಿತವರು ನಿಮಗೆ ಈ ನಾಲ್ವರೊಳಗೆ!

ಪ್ರಾಚೀನ ಮಾನವ ಅನುಭವಜನ್ಯ ವಿವೇಕದಿಂದ ಎರಡನೆಯದನ್ನೇ "ಯುಗಾದಿ =ವರ್ಷಾರಂಭ ದಿನ" ಎಂದು ಆಯ್ದ. ನಿಸರ್ಗಕ್ಕೆ ಅದೇ ನಿಸರ್ಗದ ಶಿಶುವಾದ ಮಾನವ ಸಹಜವಾಗಿ ಸ್ಪಂದಿಸಿದ ಬಗೆ ಇದು. ಇದಕ್ಕೆ ದೇವರು, ಧರ್ಮ ಎಂಬ ಮಾನವಕೃತ ಭಾವನೆಗಳು ಸೇರಿಕೊಂಡದ್ದು ಬೇರೆಯೇ ಕಥೆ.

ಆ ದಿನವನ್ನು ಗುರುತಿಸುವುದು ಹೇಗೆ? ಮತ್ತೆ ಬಾನಿಗೆ ಶರಣು.

ಆಕಾಶದ ಸ್ಥಿರ ನಕ್ಷತ್ರ ಚಿತ್ರಾಂಕಿತ ಪರದೆಯ ಮೇಲೆ, ಸೂರ್ಯ ನಮ್ಮ ಸುತ್ತ ವಾರ್ಷಿಕವಾಗಿ ಸರಿಯುವ ಸೀಮಿತ ಭಾಗವನ್ನು ಮಾನವ, ಪರೋಕ್ಷ ವಿಧಾನಗಳಿಂದ ಗುರುತಿಸಿದ ಇದೊಂದು ವೃತ್ತ. ಇದರ ಹೆಸರು ಕ್ರಾಂತಿವೃತ್ತ. ಇದರ ನೇರ ೩೦° ಅಂತರಗಳಲ್ಲಿ ೧೨ ನಕ್ಷತ್ರ ಚಿತ್ರಗಳನ್ನು ಗುರುತಿಸಿದ—೧೨ ತಿಂಗಳುಗಳನ್ನು ಸೂಚಿಸುವ ಸಲುವಾಗಿ. ಈ ಚಿತ್ರಗಳಿಗೆ, ಪಶ್ಚಿಮ–ಪೂರ್ವ ದಿಶೆಯಲ್ಲಿ, ಮೇಷ, ವೃಷಭ, ಮಿಥುನ, ಕರ್ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ, ಮೀನ ಎಂಬ ಹೆಸರುಗಳನ್ನಿಟ್ಟ. ಇವು ಹನ್ನೆರಡು ರಾಶಿಗಳು. ಇವು ನೆಲಸಿರುವ ಇಕ್ಕಟ್ಟುವಟ್ಟೆಗೆ ರಾಶಿಚಕ್ರವೆಂದು ಹೆಸರು ಇದರ ನಡುವೃತ್ತವೇ ಕ್ರಾಂತಿವೃತ್ತ—ಸೂರ್ಯನ ಕಕ್ಷೆ.

ಮೇಷ ರಾಶಿಯನ್ನು ಸೂರ್ಯ ಪ್ರವೇಶಿಸುವ ದಿನವೇ ಯುಗಾದಿ ಎಂದು ಅಂದು ಅರ್ಥಪೂರ್ಣವಾಗಿ ತೀರ್ಮಾನಿಸಿದ—ಗಗನ ಸಾಕ್ಷಿಯಾಗಿ. ಅಂದು ಹಗಲು–ಇರುಳು ಸಮ ಅವಧಿಯವು, ಸೂರ್ಯ ಕರಾರುವಾಕ್ಕಾಗಿ ಪೂರ್ವಬಿಂದುವಿನಲ್ಲಿ ಮೂಡಿ ಪಶ್ಚಿಮ ಬಿಂದುವಿನಲ್ಲಿ ಕಂತುವುದು ಮತ್ತು ಅಂದಿನಿಂದ ಮುಂದಕ್ಕೆ ಹಗಲಿನ ಅವಧಿ ವೃದ್ಧಿಸುತ್ತ ಹೋಗುವುದು.

ಅಂದಿಗೆ ಅದು ಸರಿ. ಇಂದಿಗೆ? ಮೇಷ ರಾಶಿಯನ್ನು ಸೂರ್ಯ ಪ್ರವೇಶಿಸುವುದಕ್ಕೆ ಹಲವಾರು ದಿವಸ ಮೊದಲೇ—ಅಂದರೆ

ಇನ್ನೂ ಮೀನರಾಶಿಯಲ್ಲಿರುವಾಗಲೇ— ದಿವಾರಾತ್ರಿ ಸಮತೆಯ ಸನ್ನಿವೇಶ ಘಟಿಸುತ್ತದೆ. ಇಂದಿನ ದಿನಾಂಕಗಳಲ್ಲಿ ಹೇಳುವುದಾದರೆ ಮಾರ್ಚ್ ೨೧/೨೨ರಂದು ಸೂರ್ಯ ಕರಾರುವಾಕ್ಕಾಗಿ ಪೂರ್ವ ಬಿಂದುವಿನಲ್ಲಿ ಮೂಡಿ ಪಶ್ಚಿಮ ಬಿಂದುವಿನಲ್ಲಿ ಕಂತುವುದು, ಅಂದು ಹಗಲು ಇರುಳು ಸಮ ಅವಧಿಯವು. ಅಂದಿನಿಂದ ಮುಂದಕ್ಕೆ ಹಗಲಿನ ಅವಧಿ ಇರುಳಿನ ಅವಧಿಗಿಂತ ಹೆಚ್ಚು ಹೆಚ್ಚು ಆಗುವುದು. ಆದ್ದರಿಂದ ಇಂದು ನಾವು ಯುಗಾದಿ ಎಂದು ಪರಿಗಣಿಸಬೇಕಾದದ್ದು ಮಾರ್ಚ್ ೨೧/೨೨ನ್ನು ಮಾತ್ರ. ಅಂದೇ ನಮ್ಮ ಹಬ್ಬ ಪೂಜೆ ಮುಂತಾದ (ನಂಬಿಕೆಗೆ ಸಂಬಂಧಿಸಿದ) ಧಾರ್ಮಿಕ ವಿಧಿಗಳನ್ನು ಆಚರಿಸಬೇಕು. ಬೇರೆ ಯಾವುದೇ ದಿನವನ್ನು ಯಾವುದೇ ಕಾರಣಕ್ಕಾಗಿ, ಯುಗಾದಿ ಎಂದು ಆಚರಿಸಿದರೆ ಗಗನ ಗಹಗಹಿಸಿ ನಗದಿರದು ಮಾನವನ ಬುದ್ಧಿ ಮೌಢ್ಯಕ್ಕಾಗಿ! ಈ ಕೆಳಗಿನ ಯಾದಿ ಗಮನಿಸಿ:

ಚಾಂದ್ರಯುಗಾದಿ	ಸೌರಯುಗಾದಿ	ನಿಜಯುಗಾದಿ
೧೧-೪-೧೯೯೪	೧೪-೪-೧೯೯೪	೨೨-೩-೧೯೯೪
೧-೪-೧೯೯೫	೧೫-೪-೧೯೯೫	೨೧-೩-೧೯೯೫
೨೦-೩-೧೯೯೬	೧೪-೪-೧೯೯೬	೨೧-೩-೧೯೯೬

ಚಾಂದ್ರಯುಗಾದಿ: ಚಂದ್ರನನ್ನು ಆಧರಿಸಿರುವ ಈ ಯುಗಾದಿ ಸರ್ವಥಾ ಗಗನ ಸಮ್ಮತವಲ್ಲ. ಸೌರಯುಗಾದಿ: ಪ್ರಾಚೀನ ದಿನಗಳಂದು ಸೂರ್ಯನ ಸ್ಥಾನಗಳನ್ನು ಆಧರಿಸಿ ನಿರ್ಧರಿಸಿದ ದಿನ. ಇಂದು ಇದು ಅಸಾಧು. ಗತವೈಭವದ ಪಳಿಯುಳಿಕೆಗೆ ವರ್ತಮಾನದಲ್ಲಿ ನೆಲೆ ಇಲ್ಲ. ನಿಜಯುಗಾದಿ: ಇಂದಿನ ಗಗನ-ಸೂರ್ಯ-ಭೂಮಿ ಸಂಬಂಧವನ್ನು ಆಧರಿಸಿರುವ ದಿನ. ಇದೊಂದೇ ಸಾಧು, ಆಚರಣಯೋಗ್ಯ.

ನಮ್ಮ ಹಬ್ಬಗಳಿಗೆ ಮೂಲ ಪ್ರೇರಣೆ ಮಾನವ-ನಿಸರ್ಗ ಸಂಬಂಧ. ಈ ಸಂಬಂಧ ಬದಲಾದಂತೆ ಹಬ್ಬಗಳ ಔಚಿತ್ಯವನ್ನು ತದನುಸಾರ ಮಾರ್ಪಡಿಸುವುದು ವಿವೇಕ. ಹೀಗಲ್ಲದೇ ಪರಂಪರೆಯ ಅಥವಾ ಧರ್ಮದ ಹೆಸರಿನಲ್ಲಿ ಹಳೆಯದಕ್ಕೆ ಅಂಟಿಕೊಂಡಿದ್ದರೆ ಅದು ನಮ್ಮ ಬೌದ್ಧಿಕ ದಾಸ್ಯಕ್ಕೆ ಸಾಕ್ಷಿ.

ಬುದ್ಧನೆಂಬವನೇನು ಸಾಮಾನ್ಯ ಪುರುಷನೇ? ಬುದ್ಧಿ ಸಂಸ್ಕಾರಕ್ಕೆ ಹೃದಯ ಸಂವೇದನೆಯು ಬದ್ಧಗೊಂಡಾಗ ಮೈದಳೆದ ಆದರ್ಶ ಪರಿಶುದ್ಧಾತ್ಮನೀತ ಕಾರ್ಲ್ ಅತ್ರಿಸೂನು!

ನಿನ್ನದೆಂಬುದನ್ನೆಲ್ಲ ದೇವರಿಗೇ ಅರ್ಪಿಸು. ಅವೆಲ್ಲವೂ ನೂರ್ಮಡಿಯಾಗಿ ನಿನಗೇ ತಿರುಗಿ ಬರುವುವು.

—ಪರಮಹಂಸ

ಆಧುನಿಕ ವಿಜ್ಞಾನದ ಹರಿಕಾರ

ಮೇಘನಾದ ಸಹಾ

ರೋಹಿಣಿಶರ್ಮ

ಮೇಘನಾದರು ಇಂದಿನ ಬಾಂಗ್ಲಾದೇಶದ ಡಾಕಾ ಜಿಲ್ಲೆಯಲ್ಲಿರುವ ಸಿಯೋರಟಾಲಿ ಎಂಬ ಸಣ್ಣಹಳ್ಳಿಯಲ್ಲಿ ವ್ಯಾಪಾರಿ ಮನೆತನಕ್ಕೆ ಸೇರಿದ ಬಡಕುಟುಂಬದಲ್ಲಿ ೧೮೯೩ ಅಕ್ಟೋಬರ್ ೬ರಂದು ಜನಿಸಿದರು. ಇವರು ಹುಟ್ಟಿದ ರಾತ್ರಿ ಭಯಂಕರ ಬಿರುಗಾಳಿ, ಗುಡುಗು–ಸಿಡಿಲು, ಮಳೆಯ ಆರ್ಭಟದಲ್ಲಿ ಪ್ರಸವ ಕೊಠಡಿಯ ಮೇಲ್ಛಾವಣಿಯೇ ಹಾರಿಹೋಯಿತಂತೆ. ಈ ಸಂದರ್ಭ ಗ್ರಹಿಸಿ ಅವರ ಅಜ್ಜ ಶಿಶುವಿಗೆ ಮೇಘನಾದನೆಂದೇ ನಾಮಕರಣಮಾಡಿದರು. ಇಬ್ಬರು ಅಣ್ಣತಮ್ಮಂದಿರು–ಇಬ್ಬರು ಅಕ್ಕಂದಿರನ್ನು ಹೊಂದಿದ ಮೇಘನಾದರಿಗೆ ಓದಿನಲ್ಲಿ ಅದಮ್ಯಬಯಕೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಕಿತ್ತುತಿನ್ನುವ ಬಡತನ. ಮನೆಯವರಿಂದ ವಿಶೇಷ ಪ್ರೋತ್ಸಾಹವೂ ಇರಲಿಲ್ಲ. ರಾತ್ರಿ ಕಣ್ಣಿಗೆಕಣ್ಣು ಹಚ್ಚಿ ಓದಲು ಕುಳಿತ ಸಹಾರವರನ್ನು ನೋಡಿ ತಂದೆಗೆ ಬಲುಸಿಟ್ಟು. ತಮ್ಮ ನಿದ್ರೆಗೆ ಭಂಗತಂದನಲ್ಲ ಎಂದು ಎಷ್ಟೋದಿನ ನಾಲ್ಕು ಬಾರಿಸಿದ್ದುಂಟು. ಸಿಯೋರಟಾಲಿಯಲ್ಲಿ ಮಾಧ್ಯಮಿಕ ಶಾಲೆಯೂ ಇರಲಿಲ್ಲ. ಶಾಲೆಯಾದರೋ ಹಳ್ಳಿಯಿಂದ ಹತ್ತುಮೈಲಿ ದೂರದಲ್ಲಿತ್ತು. ಇವರ ಓದಿನ ಹಂಬಲವನ್ನರಿತ ಊರಿನ ವೈದ್ಯರೊಬ್ಬರ ಸಹಾಯ ಸಹಕಾರದಿಂದ ದೂರದ ಪ್ರಾಥಮಿಕ ಶಾಲೆಯಲ್ಲೆ ವಿದ್ಯಾಭ್ಯಾಸ ಮುಗಿಸಿ ಜಿಲ್ಲೆಗೇ ಮೊದಲಿಗರಾಗಿ ಕೀರ್ತಿತಂದರು. ಅದಕ್ಕೆ ಪ್ರತಿಯಾಗಿ ೪ ರೂಪಾಯಿಯ ವ್ಯಾಸಂಗ ವೇತನವೂ ದೊರೆತು ಮುಂದಿನ ವಿದ್ಯಾಭ್ಯಾಸಕ್ಕೆ ದಾರಿಯಾಯಿತು. ಹಾಗೆಯೇ ಮುಂದಿನ ಪ್ರೌಢ ಶಾಲಾ ವಿದ್ಯಾಭ್ಯಾಸವನ್ನು ಡಾಕಾ ಸರ್ಕಾರಿ ಪ್ರೌಢಶಾಲೆಯಲ್ಲಿ ಮುಂದುವರಿಸಿದರು.

ಆಗ ಸ್ವಾತಂತ್ರ್ಯದ ಕಾವು ಎಲ್ಲೆಡೆಗೂ ಹರಡಿತ್ತು. ೧೯೦೫ ರಲ್ಲಿ ಬ್ರಿಟಿಷರು ಬಾಂಗ್ಲಾ ವಿಭಜನೆ ಮಾಡಿದಾಗ ರೊಚ್ಚಿಗೆದ್ದ ಜನ ಇದನ್ನು ಪ್ರತಿಭಟಿಸಿದರು. ಸ್ವಾತಂತ್ರ್ಯದ ಆಂದೋಲನದಲ್ಲಿ ಭಾಗವಹಿಸಿದ್ದರಿಂದ ಸಹಾರವರು ತಮಗೆ ದೊರೆತ ವ್ಯಾಸಂಗ ವೇತನವನ್ನು ಕಳೆದುಕೊಂಡರು.

೧೯೧೩ ರಲ್ಲಿ ಬಿ.ಎಸ್.ಸಿ. ಆನರ್ಸ್ ಪರೀಕ್ಷೆಯನ್ನು ಗಣಿತದಲ್ಲಿ ಅತಿಹೆಚ್ಚಿನ ಅಂಕಪಡೆದು ಪದವಿಗಳಿಸಿದರೆ ಮುಂದೆ ೧೯೧೫ ರಲ್ಲಿ ಎಂ.ಎಸ್.ಸಿ.ಯಲ್ಲಿ ವಿಶ್ವ

ವಿದ್ಯಾಲಯಕ್ಕೆ ಎರಡನೆಯವರಾಗಿ ಕೀರ್ತಿ ಭಾಜನರಾದರು. ಇವರು ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುತ್ತಿದ್ದಾಗ ಆಧುನಿಕ ಭಾರತದ ವಿಜ್ಞಾನ ಪಿತಾಮಹರಾದ ಪ್ರೊ|| ರಾಯ್ ಪ್ರಫುಲ್ಲಚಂದ್ರ, ಪ್ರೊ|| ಜಗದೀಶಚಂದ್ರಬೋಸರ ಪರಿಚಯವೂ ಆಗಿ ಅವರ ಪ್ರಭಾವಕ್ಕೆ ಒಳಪಟ್ಟರು. ಪ್ರೊ|| ರಾಯ್ ಪ್ರಫುಲ್ಲಚಂದ್ರರು ಇವರ ಕಾರ್ಯಚಟುವಟಿಕೆಯನ್ನು ಗುರುತಿಸಿ ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದ್ದರು.

ಕಲ್ಕತ್ತಾದ ಯೂನಿವರ್ಸಿಟಿ ಕಾಲೇಜ್ ಆಫ್ ಸೈನ್ಸ್ ಎಂಬ ಬಿಳಿಯರ ಆಡಳಿತಕ್ಕೆ ಒಳಪಟ್ಟ ಒಂದು ಹೊಸ ವಿಜ್ಞಾನ ಕಾಲೇಜಿಗೆ ಗಣಿತದ ಅಧ್ಯಾಪಕರಾಗಿ ನೇಮಕಗೊಂಡು ಅಲ್ಲಿಯೇ ಅಧ್ಯಯನ, ಅಧ್ಯಾಪನ, ಸಂಶೋಧನೆಯಲ್ಲಿ ಮುಂದುವರೆದು ೧೯೧೮ರಲ್ಲಿ ವಿದ್ಯುತ್ ಕಾಂತೀಯ ಸಿದ್ಧಾಂತ ಹಾಗೂ ವಿಕಿರಣಗಳ ಒತ್ತಡಗಳ ಬಗ್ಗೆ (ಅಯಸ್ಕಾಂತ ಮತ್ತು ಖಭೌತ ವಿಜ್ಞಾನ) ಕೆಲವು ಮೂಲ ಲೇಖನಗಳನ್ನು ಬರೆದರು. ಇವರ ಸಂಶೋಧನಾ ಲೇಖನಕ್ಕೆ ೧೯೧೮ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯ ಡಿ.ಎಸ್.ಸಿ. ಪದವಿ ನೀಡಿ ಪುರಸ್ಕರಿಸಿತು.

ಮುಂದೆ ತಮಗೆ ದೊರೆತ ವಿದ್ಯಾರ್ಥಿವೇತನದ ಮೂಲಕ ಲಂಡನ್ ಬರ್ಲಿನ್‌ಗಳ ಪ್ರಮುಖ ಪ್ರಯೋಗ ಶಾಲೆಗಳಲ್ಲಿ ಸಂಶೋಧನೆ ನಡೆಸಿದರು. ೧೯೨೧ರಲ್ಲಿ ಯೂನಿವರ್ಸಿಟಿ ಕಾಲೇಜ್ ಆಫ್ ಸೈನ್ಸ್‌ನಲ್ಲಿ ಭೌತವಿಜ್ಞಾನದ ಅಧ್ಯಾಪಕರಾಗಿಯೂ ೧೯೨೩ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಭೌತವಿಭಾಗದ ಮುಖ್ಯಸ್ಥರಾಗಿಯೂ ಮುಂದುವರೆದರು.

ಖಗೋಲ ವಿಜ್ಞಾನದಲ್ಲಿಯೇ ಹೆಚ್ಚಿನ ಆಸಕ್ತಿ ಇದ್ದ ಸಹಾರವರಿಗೆ ಅತಿಹೆಚ್ಚಿನ ಉಷ್ಣತೆಯಲ್ಲಿ ಪರಮಾಣುವಿನಿಂದ ಎಲೆಕ್ಟ್ರಾನ್ ಹೊರಬಿದ್ದಾಗ ಅದು ಅಯಾನು ಆಗುವುದು. ರಾಸಾಯನಿಕ ವಿಯೋಜನೆಯಂತೆಯೇ ಅಧಿಕ ಉಷ್ಣಶಕ್ತಿಯಿಂದ ಪರಮಾಣು ಒಡೆದು ಓಡಾಡುವಾಗ ಇಂಥ ಅಯಾನೀಕರಣ ಉಂಟಾಗುತ್ತದೆ. ಈ ಕ್ರಿಯೆಯೇ ದೂರದ ಮಂಡಲ ನಕ್ಷತ್ರಗಳಲ್ಲೂ ನಡೆಯುತ್ತದೆ ಎಂಬುದನ್ನು ಸಂಶೋಧಿಸಿದರು. ಇದಕ್ಕೆ ಶಾಖ ಅಯಾನೀಕರಣ ಸಿದ್ಧಾಂತ ಎಂದು ಹೆಸರು. ಛಿದ್ರಗೊಂಡ ಪರಮಾಣು ಹಾಗೂ ಎಲೆಕ್ಟ್ರಾನುಗಳು ಶೇಕಡ ಸಾಂದ್ರತೆ, ದ್ರವ್ಯರಾಶಿಯು ಶಾಖ ಪರಿಣಾಮ ಹಾಗೂ ಒತ್ತಡಗಳ ಸಂಬಂಧವನ್ನು ಸಮೀಕರಣ ಮೂಲಕ ಪ್ರತಿನಿಧಿಸಿ "ಸಹಾಸಮೀಕರಣ" ವೆಂತಲೇ ಪ್ರಸಿದ್ಧಿ ಪಡೆಯಿತು.

ಇವರ ಕೆಲವು ಮೂಲಭೂತ ಸಂಶೋಧನೆಗಳನ್ನಷ್ಟೇ ಅಲ್ಲದೆ ಸ್ಥಿತಿ ಸ್ಥಾಪಕತ್ವ ಜಡೋಷ್ಣ, ಸಂಖ್ಯಾ ಭೌತಶಾಸ್ತ್ರದ ಹೊಸ ವಿಷಯಗಳು, ರಾಸಾಯನಿಕ ವಸ್ತುಗಳ ಬಣ್ಣ ವಾತಾವರಣದ ಅಭ್ಯಾಸ, ವಾತಾವರಣದಲ್ಲಿ ವಿದ್ಯುತ್‌ಕಾಂತ ಅಲೆಗಳ ಚಲನೆ, ಪರಮಾಣುಬೀಜದ ಅಭ್ಯಾಸ ಹಾಗೂ ವಿಕಿರಣಪಟು ಮುಂತಾದ ವಿಷಯಗಳ ಬಗ್ಗೆಯೂ ಇವರ ಸಂಶೋಧನೆಗಳು ನೆರವಾದುವು.

ಪಂಚಾಂಗಗಳು ಸ್ವಲ್ಪ ಮಟ್ಟಿಗೆ ವಿಜ್ಞಾನವನ್ನು, ಸ್ವಲ್ಪ ಮಟ್ಟಿಗೆ ಸಂಪ್ರದಾಯ

ವನ್ನು ಆಧರಿಸಿವೆ. ವಿಜ್ಞಾನವನ್ನು ಉಲ್ಲಂಘಿಸಲು ಯಾರಿಗೂ ಸಾಧ್ಯವಿಲ್ಲ. ಸಂಪ್ರದಾಯಗಳು ಮಾನವ ನಿರ್ಮಿತವಾದ್ದರಿಂದ ಅವು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತವೆ.... ಎಂಬುದಾಗಿ ಪಂಚಾಂಗ ಪರಿಷ್ಕರಣ ಸಮಿತಿಯಲ್ಲಿ ತಮ್ಮ ವರದಿಯನ್ನು ಮುಂದಿಟ್ಟರಲ್ಲದೆ ೧೯೫೭ ರಲ್ಲಿ ಭಾರತ ಸರ್ಕಾರ ರಾಷ್ಟ್ರೀಯ ಪಂಚಾಂಗವನ್ನು ಆಚರಣೆಗೆ ತಂದಾಗ ಈ ಪಂಚಾಂಗವನ್ನು ಸಿದ್ಧಗೊಳಿಸುವುದರಲ್ಲಿ ಕಾರ್ಯನಿರ್ವಹಿಸಿ ಅದರಲ್ಲೂ ಯಶಸ್ಸು ಪಡೆದು "ಸರ್ವಮಾನ್ಯವಾದದ್ದೊಂದು ಪಂಚಾಂಗ"ವನ್ನು ರಚಿಸಿದ್ದರು.

ವಿಜ್ಞಾನವೆಂಬುದು ಸೀಮಿತವಾಗಬಾರದು; ಅದು ಎಲ್ಲ ವರ್ಗದ ಜನಕ್ಕೂ ಅನುಕೂಲವಾಗಬೇಕು ಎಂಬ ನಿಲುವಿನ ಸಹಾರವರು ನಮ್ಮ ದೇಶದ ನದಿ ಕಣಿವೆ ಯೋಜನೆಗಳಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಜೊತೆ ಕೆಲಸ ಮಾಡಿದ್ದರು. ಶಕ್ತಿ ಮೂಲಗಳ ಶೋಧನೆ, ಭೂ ವಿಜ್ಞಾನ ಶೋಧನೆ, ಪರಮಾಣುಶಕ್ತಿ ಸಂಶೋಧನೆಯಲ್ಲೂ ಸಹಭಾಗಿತ್ವ ಪಡೆದಿದ್ದರಲ್ಲದೆ ಆರ್ಥಿಕಾಭಿವೃದ್ಧಿಗೆ ಸಹಾಯವಾಗುವ ದಾಮೋದರ್ ನದಿ ಯೋಜನೆಯಲ್ಲೂ ಪ್ರತ್ಯಕ್ಷ ಭಾಗವಹಿಸಿದ್ದರು.

ಇವರ ಪ್ರತಿಭೆಗೆ ಪುಟವಿಟ್ಟಂತೆ ಇಂಗ್ಲೆಂಡಿನ ರಾಯಲ್ ಸೊಸೈಟಿಯು ೧೯೨೭ ರಲ್ಲಿ ತನ್ನ ಸದಸ್ಯರನ್ನಾಗಿ ಮಾಡಿಕೊಂಡಿತು. ಕೊಪನ್ ಹೇಗನ್ ನಲ್ಲಿ "ಪರಮಾಣು ವಿಜ್ಞಾನದ ವಿಷಯ"ದಲ್ಲಿ ನಡೆದ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಪ್ರತಿನಿಧಿಸಿದ್ದರು.

ವಿಜ್ಞಾನಿಗಳೆಂದರೆ ಸದಾ ಮೌನರಾಗಿದ್ದು ತಮ್ಮ ಸಂಶೋಧನೆಯ ಗುಂಗಿನಲ್ಲಿಯೇ ನಿರತರಾಗಿರುತ್ತಾರೆ ಎಂಬ ಮಾತಿಗೆ ವಿರುದ್ಧವಾಗಿದ್ದ ಸಹಾ ಸದಾ ಚಟುವಟಿಕೆಯ ವ್ಯಕ್ತಿ. ಪ್ರಗತಿಪರ ನಿಲವಿನ ವಿಜ್ಞಾನಿ ಎಂದೇ ಗುರುತಿಸಲ್ಪಟ್ಟಿದ್ದ ಸಹಾರವರು ಕಲ್ಕತ್ತ ವಾಯುವ್ಯ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಸುಲಭವಾಗಿ ಗೆದ್ದರು. ಭಾರತಕ್ಕೆ ಒಂದು ಯೋಜನಾ ಆಯೋಗ ವಿರಬೇಕು. ಅದರಲ್ಲಿ ವಿಜ್ಞಾನಿಗಳು, ತಂತ್ರಜ್ಞಾನಿಗಳು, ಅರ್ಥಶಾಸ್ತ್ರಜ್ಞರೂ ಇರಬೇಕು ಎಂದು ಮೊದಲು ಸೂಚಿಸಿದ್ದೇ ಸಹಾರವರು. ಎಲ್ಲ ಸದಸ್ಯರಂತೆ ಅಸೆಂಬ್ಲಿಯಲ್ಲಿ ಸುಮ್ಮನೆ ಕೂರಲಿಲ್ಲ. ವಿಶ್ವವಿದ್ಯಾಲಯಗಳ ಪರಿಸ್ಥಿತಿ, ಕೈಗಾರಿಕೆಗಳು, ಜಲಯೋಜನೆಗಳ ಖಚಿತ ನಿಲವನ್ನು ಸರ್ಕಾರ ಕೈಗೊಳ್ಳಬೇಕೆಂಬ ಬಗ್ಗೆ ಕಟುವಾಗಿ ಟೀಕಿಸಿ ಗಮನ ಸೆಳೆಯುತ್ತಿದ್ದರು. ಸಾರ್ವಜನಿಕರಿಗೆ, ಸಮಾಜಕ್ಕೆ ಅಹಿತಕರವಾದ ಯಾವುದೇ ವಿಷಯವಿದ್ದರೂ ಆ ಬಗ್ಗೆ ಅವರು ಖಂಡಿಸಿದಾಗ, ಕೆಲವು ವೇಳೆ ಪಟ್ಟು ಹಿಡಿದು ಕೂರುವ ದಿಟ್ಟನಿಲುವಿಗೆ ಸರ್ಕಾರವೂ ಗಮನಕೊಡುತ್ತಿತ್ತು.

ಒಮ್ಮೆ ತ್ರೈಲೋಧ್ಯಮವನ್ನು ವಿದೇಶಿ ಕಂಪನಿಗೆ ವಹಿಸಿಕೊಡುವ ಪ್ರಸ್ತಾಪ ಬಂದಾಗ ತೀವ್ರತರವಾದ ವಿರೋಧಕ್ಕೆ ಸರ್ಕಾರ ಮಣಿಯಿತೆಂದರೆ ಅವರ ಛಾಪು ರಾಜಕೀಯ ಕ್ಷೇತ್ರದಲ್ಲೂ ಅಷ್ಟೇ ದಕ್ಷತೆ ಪಡೆದಿತ್ತೆಂದೇ ಅರ್ಥ.

೧೯೫೦ ರಲ್ಲಿ ವೈಜ್ಞಾನಿಕ ತಳಹದಿಯ ಮೇಲೆ ಆಧುನಿಕ ಹಾಗೂ ಬಲಾಢ್ಯ ಭಾರತದ ನೀಲ ನಕ್ಷೆಯನ್ನು ಜವಹರಲಾಲ್ ನೆಹರೂರವರ ಸಹಭಾಗಿತ್ವದಲ್ಲಿ ತಯಾರಿಸಿದ್ದರು.

ಅಲಹಾಬಾದಿನ ನ್ಯಾಷನಲ್ ಅಕಾಡಮಿ ಆಫ್ ಸೈನ್ಸ್, ನವದೆಹಲಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮೊದಲಾದ ಸಂಸ್ಥೆಗಳಿಗಾಗಿ ಅಹರ್ನಿಶಿ ದುಡಿದರು.

೧೯೫೦ರಲ್ಲಿ ಕಲ್ಕತ್ತದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯ ಫಿಸಿಕ್ಸನ್ನು ಸ್ಥಾಪಿಸಿ ಆ ಸಂಶೋಧನಾ ಕೇಂದ್ರದಲ್ಲಿ ಎಲೆಕ್ಟ್ರಾನ್ ಸೂಕ್ಷ್ಮದರ್ಶನ, ರಾಶಿರೋಹಿತ ದರ್ಶನ, ನ್ಯೂಕ್ಲಿಯರ್ ರಸಾಯನ ವಿಜ್ಞಾನ, ವಿಕಿರಣ ರಸಾಯನ ವಿಜ್ಞಾನ, ಸ್ಪಟಿಕ ವಿಜ್ಞಾನ ಹಾಗೂ ಘನಸ್ಥಿತಿ ಭೌತ ವಿಜ್ಞಾನಗಳ ಬಗ್ಗೆ ಸಂಶೋಧನೆ ನಡೆಯುವಂತೆ ಮಾಡಿದರು. ಇವರ ಪ್ರಯತ್ನದ ಫಲವಾಗಿಯೇ ಸ್ಥಾಪಿತವಾದ ಈ ಸಂಶೋಧನಾ ಕೇಂದ್ರವು ಸಹಾ ಇನ್ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಫಿಸಿಕ್ಸ್ ಎಂಬ ಹೆಸರಿನಲ್ಲಿ ಇಂದೂ ಮುಂದುವರಿಯುತ್ತಿದೆ.

ಬಡತನದಲ್ಲಿಯೇ ಬೆಳೆದು ಮುಂದೆ ಬಂದ ಸಹಾರವರು ತಾವು ನಡೆದುಬಂದ ದಾರಿಯನ್ನೆಂದೂ ಮರೆಯದೆ ಬಡವರ ಪಕ್ಷಪಾತಿಯಾಗಿಯೇ ಬೆಳೆದರು. ವಿದ್ಯಾರ್ಥಿ ಜೀವನದಲ್ಲಿ ತಾವು ಅನುಭವಿಸಿದ ನೋವು ನಲಿವುಗಳನ್ನು ಎಂದೂ ಮರೆಯದೆ ಬಡವಿದ್ಯಾರ್ಥಿಗಳ ದುಃಖ ದುಮ್ಮಾನಕ್ಕಾಗಿ ಮಿಡಿಯುತ್ತಿದ್ದರಷ್ಟೇ ಅಲ್ಲದೆ ಅವರ ಮನೆ ಸದಾ ಬಡವಿದ್ಯಾರ್ಥಿಗಳಿಗೇ ಮೀಸಲಾಗಿರುತ್ತಿತ್ತು.

ವಿಜ್ಞಾನ, ವಿಜ್ಞಾನಿ, ಸಂಶೋಧನೆ—ಫಲಿತಾಂಶ–ಫಲಾಪೇಕ್ಷೆ ಎಂಬ ವರ್ತುಲದಲ್ಲೇ ಸುತ್ತುತ್ತಿರದ ಈ ವ್ಯಕ್ತಿ ಸಾಮಾಜಿಕ ಕಾರ್ಯಗಳಲ್ಲೂ ಮುಂಚೂಣಿಯಲ್ಲಿರುತ್ತಿದ್ದರು. ಇಂಥ ಚಟುವಟಿಕೆಯ ಚೇತನ ೧೯೫೬ರ ಫೆಬ್ರುವರಿ ಹದಿನಾರರಂದು ದಿಲ್ಲಿಯಲ್ಲಿ ಯೋಜನಾ ಆಯೋಗದ ಕಛೇರಿಗೆ ತೆರಳುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಹೃದಯಾಘಾತದಿಂದ ನಿಧನರಾದರು.



ಮಾನವನು ದೇವಾಂಶ ಸಂಭೂತ. ಶಿವನ ಒಂದು ಅಂಶ ಎಂದು ಭಾವಿಸಿ ಜನಸೇವೆ ಮಾಡಬೇಕು. ಅಂಥ ಸೇವೆ ದೇವರಿಗೆ ಸಲ್ಲುತ್ತದೆಂದು ಭಾವಿಸಬೇಕು.

—ಪರಮಹಂಸ

ಸಸ್ಯಗಳು ಏಕೆ ವಾಸನೆ ಬೀರುತ್ತವೆ?*

ಸಿ. ನಾಗಣ್ಣ

ತತ್ತ್ವಶಾಸ್ತ್ರದಲ್ಲಿಯ ಒಂದು ಪ್ರಸಿದ್ಧ ಅಭಿಗೃಹೀತವನ್ನು (assumption) ನ್ಯೂಟನ್ ಮಾರ್ಪಡಿಸಿ ವಿಜ್ಞಾನದ ಸಕಲ ವಿದ್ಯಮಾನಗಳಿಗೂ ಅದು ಸಾರ್ವತ್ರಿಕವಾಗಿ ಅನ್ವಯವಾಗುವಂತೆ ಮಾಡಿದ್ದಾರೆ:

ನೈಸರ್ಗಿಕ ವಿದ್ಯಮಾನಗಳು ಪ್ರಕಟವಾಗುವುದನ್ನು ವಿವರಿಸಲು ನಾವು ನಿಜವೂ ಸಾಕಾಗುವಂಥವೂ ಆದ ಕಾರಣಗಳಿಂದ ಹೆಚ್ಚಿನವೇನನ್ನೂ ಪ್ರವೇಶಗೊಳಿಸ ಬೇಕಾಗಿಲ್ಲ. ಎಂದೇ "ನಿಸರ್ಗ ಏನನ್ನೂ ವ್ಯರ್ಥವಾಗಿ ಎಸಗದು, ಕಡಿಮೆ ಸಾಕಾಗುವಲ್ಲಿ ಹೆಚ್ಚು ನಿಜಕ್ಕೂ ಪೋಲು-ಏಕೆಂದರೆ ನಿಸರ್ಗ ಸರಳತ್ವದಿಂದ ಸುಪ್ರೀತವಾಗುತ್ತದೆ."

ನಿಸರ್ಗದಲ್ಲಿ ಪ್ರತಿಯೊಂದು ವಸ್ತುವಿಗೂ ವಿದ್ಯಮಾನಕ್ಕೂ ಖಚಿತ ಪಾತ್ರ ಉಂಟು; ಇದು ಸಮಷ್ಟಿ ಸಂಗಿತದ ಒಂದು ಸ್ವರ ಮಾತ್ರ; ಇಂಥ ಸ್ವರಗಳ ಮೇಳನವೇ ನಿಸರ್ಗ! ಹೇಗೆ? ಓದಿ ಈ ಲೇಖನ.

—ಸಂ

ಶಾಲೆಯಲ್ಲಿ ಕಲಿಯುತ್ತಿರುವ ಮಗುವನ್ನು ಕೇಳಿ. ಥಟ್ಟನೆ ಉತ್ತರ ಬರುತ್ತದೆ: "ಪಕ್ಷಿಗಳನ್ನು ದುಂಬಿಗಳನ್ನು ಆಕರ್ಷಿಸುವುದು ಅವಕ್ಕೆ ಅನಿವಾರ್ಯ. ಹಾರಿ ಬಂದು ಪಕ್ಷಿಗಳು ಹಾಗೂ ಕೀಟಗಳು ಹೂವುಗಳ ಮೇಲೆ ಕುಳಿತು ಮಕರಂದ ಹೀರುತ್ತವೆ. ಹೀಗೆ ಮಕರಂದ ಹೀರುವ ಸುಖದಲ್ಲಿ ಅವು ಹೂವಿನಿಂದ ಹೂವಿಗೆ ಹಾರುವಾಗ ಪರಾಗ ಸ್ಪರ್ಶವಾಗಿ ಸಸ್ಯ ಸಂತಾನಾಭಿವೃದ್ಧಿಯಲ್ಲಿ ಸಹಾಯ ಮಾಡುತ್ತವೆ." ಶಾಲೆಯ ಮಗು ಹೇಳುವ ಈ ಪಕ್ಷಿ ಹಾಗೂ ದುಂಬಿಯ ಕಥೆ ಸತ್ಯವಾದದ್ದೆ; ಹಕ್ಕಿಗಳೂ, ದುಂಬಿಗಳೂ ಈ ಪ್ರಕ್ರಿಯೆಯಲ್ಲಿ ಭಾಗಿಗಳಾಗಿ ಹೆಚ್ಚು ಹೆಚ್ಚು ಸಸ್ಯಗಳು ಹುಟ್ಟಲು ಕಾರಣವಾಗುತ್ತದೆ.

ಇಷ್ಟೇ ಅಲ್ಲವೆಂಬುದು ಈಗ ಬೆಳಕಿಗೆ ಬಂದಿರುವ ಸ್ವಾರಸ್ಯ. ಸಂತಾನೋತ್ಪತ್ತಿಗೆ ಮಾತ್ರ ಸಸ್ಯಗಳು ಪರಿಮಳ ಬೀರದೆ, ಬೇರೆ ಅನೇಕ ಉದ್ದೇಶ ಅವಕ್ಕಿರುವುದು ಈಗ ಗೊತ್ತಾಗಿದೆ. ಜರ್ಮನಿಯ ಬಾನ್ ವಿಶ್ವವಿದ್ಯಾನಿಲಯದ ಸಾವಯವ ರಸಾಯನಶಾಸ್ತ್ರ ಹಾಗೂ ಜೀವ ರಸಾಯನಶಾಸ್ತ್ರ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊಫೆಸರ್ ವಿಲ್‌ಹೆಲ್ಮ್ ಬೋಲ್ಯಾಂಡ್

*ಮೂಲ: ಶ್ರೀ ಡಿ. ಬಾಲಸುಬ್ರಹ್ಮಣಿಯನ್, ಕೃಪೆ: ದ ಹಿಂದು, ಜನವರಿ ೪, ೧೯೯೬.

ಮತ್ತು ಅವರ ಗುಂಪಿನವರು ಈ ವಿಷಯವಾಗಿ ತುಂಬಾ ಕುತೂಹಲಕಾರಿಯಾದ ಅಂಶವನ್ನು ಹೊರಗೆಡಹಿದ್ದಾರೆ. ಜರ್ಮನ್ ಭಾಷೆಯಲ್ಲಿ ಅಚ್ಚಾಗುವ ರಸಾಯನ ಶಾಸ್ತ್ರಕ್ಕೆ ಸಂಬಂಧಿಸಿದ ಇತ್ತೀಚಿನ ನಿಯತಕಾಲಿಕೆಯಲ್ಲಿ (ಇಂಗ್ಲಿಷ್ ಭಾಷಾ ಆವೃತ್ತಿ ೧೯೯೫) ಸಸ್ಯಗಳ ಹಾರ್ಮೋನುಗಳು ಹಾಗೂ ರಕ್ಷಣಾ ರಾಸಾಯನಿಕಗಳ ವಿಷಯದಲ್ಲಿ ಪರಿಮಳಯುಕ್ತ ಸಂಯುಕ್ತಗಳಾದ ಜಾಸ್ಮಿನ್ ಆಮ್ಲ ಹಾಗೂ ಅದರಿಂದ ಉತ್ಪನ್ನವಾಗುವ ಮೀಥೈಲ್ ಜಾಸ್ಮೊನೇಟ್‌ಗಳು ಮುಖ್ಯ ಪಾತ್ರ ವಹಿಸುತ್ತವೆಯೆಂದು ತಿಳಿಸುತ್ತಾರೆ. ಅಕ್ಕಪಕ್ಕ ಸಸ್ಯಗಳಲ್ಲಿ ಇವು ಬೇರೆ ರೀತಿಯ ಪರಿಮಳವನ್ನುಂಟುಮಾಡುವುದರಲ್ಲೂ ತೊಡಗುತ್ತವೆ.

ವಿಚಾರ ಮಾಡಿ ನೋಡಿದರೆ ಇದು ಎಂಥವರಿಗೂ ಅರ್ಥವಾಗತಕ್ಕ ರೀತಿಯಾಗಿ ತೋರುತ್ತದೆ. ಯಾವುದೇ ರೀತಿಯ ಚಲನೆ ಸಾಧ್ಯವಾಗದೇ ಒಂದೇ ಸ್ಥಳದಲ್ಲಿ ನಿಲ್ಲಬೇಕಾದ ಪ್ರಮೇಯವುಂಟಾದಾಗ ಪರಿಸರವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಒಗ್ಗಿಸಿಕೊಳ್ಳುವ ಕುಶಲತೆ ಕರತಲಾಮಲಕವಾಗುತ್ತದೆ. ನಿಂತಲ್ಲೇ ನಿಂತು ತಮ್ಮ ಮೇಲೆ ವೃಷ್ಟಿಯಾಗುವ ಬೆಳಕನ್ನೇ ಆಹಾರೋತ್ಪತ್ತಿಗೆ ಉಪಯೋಗಿಸುವುದನ್ನು ಸಸ್ಯಗಳು ಕಲಿತಿಲ್ಲವೇ? ದ್ಯುತಿಸಂಶ್ಲೇಷಣೆಗೆ ಅಗತ್ಯವಾದ ವಂಶವಾಹಿನಿಯನ್ನು ಸಸ್ಯಗಳು ರಾಸಾಯನಿಕವಾದ ಹರಿತ್ತಿನ ಮೂಲಕ ಪಡೆದುಕೊಂಡುವು. ಈ ಹರಿತ್ತು ಕ್ಲೋರೋಪಾಸ್ಟ್‌ಗಳೆಂಬ ಏಕಾಣು ಜೀವಿಗಳ ಫಲಿತವಾದದ್ದಾಗಿದೆ. ಸಸ್ಯಗಳು ಆಹಾರವನ್ನು ಉತ್ಪತ್ತಿಮಾಡುವ ಕ್ರಮವನ್ನು ಕಲಿತದ್ದು ಈ ಮಾರ್ಗದಿಂದ. ಪ್ರಾಣಿಗಳು ಹಾಗೂ ಸೂಕ್ಷ್ಮ ಜೀವಿಗಳು ಆಹಾರವನ್ನು ಹುಡುಕಿಕೊಂಡು ಅಲೆಯುವಂತೆ ಸಸ್ಯಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಬೇಕಾದ ಪ್ರಮೇಯವಿಲ್ಲ. ಮೇಲುನೋಟಕ್ಕೆ ಅವು ನಿಂತಲ್ಲೇ ನಿಶ್ಚಲವಾಗಿ ನಿಂತಿರುವಂತೆ ಕಂಡರೂ ತಮ್ಮ ಬೇರುಗಳನ್ನು ನೆಲದಾಳಕ್ಕೆ ಬಿಟ್ಟು ಮಣ್ಣಿನಿಂದ ಅಗತ್ಯವಾದ ಪೋಷಕಗಳನ್ನು ಹೀರಿಕೊಳ್ಳುವುದು ನಿಜವಲ್ಲವೆ? ಸಸ್ಯವೊಂದು ಹೆಚ್ಚು ಹೆಚ್ಚು ಬೇರುಗಳನ್ನು ಇಳಿಸಿದಂತೆ ಅದು ಹೆಚ್ಚು ಹೆಚ್ಚು ನಿಶ್ಚಲವಾಗುತ್ತದೆ.

ಚಲಿಸುವ ಶಕ್ತಿ ಇದ್ದ ಪಕ್ಷದಲ್ಲಿ ಬೇಟೆಯನ್ನು ಅಟ್ಟಿಸಿಕೊಂಡು ಹೋಗಬಹುದು ಅಥವಾ ಬೇರೊಂದು ಪ್ರಾಣಿ ಆಕ್ರಮಣ ಮಾಡಲು ಬಂದಾಗ ತಪ್ಪಿಸಿಕೊಳ್ಳಬಹುದು. ಎರಗಲು ಸಾಧ್ಯವಾದರೆ ಎರಗಬಹುದು, ಆದಾಗದಿದ್ದರೆ, ರಕ್ಷಣೆ ಮಾಡಿಕೊಳ್ಳಲು ಉಪಾಯ ಹೂಡಬಹುದು. ಸ್ಪರ್ಧಿಸಿ ಎಲ್ಲರಿಗಿಂತ ಮೊದಲು ಆಹಾರ ಇರುವ ಜಾಗವನ್ನು ತಲುಪಬಹುದು, ಇಲ್ಲವೇ ಇತರರು ಅತ್ತ ಸುಳಿಯದಂತೆ ಓಡಿಸಬಹುದು. ಆದರೆ ಚಲಿಸಲಾಗದ ಸಸ್ಯವು ನೀವಾಗಿದ್ದ ಪಕ್ಷದಲ್ಲಿ ನೀವು ಮಾಡುವ ಉಪಾಯವಾದರೂ ಏನು?

ವಿಕಾಸದ ಹಾದಿಯಲ್ಲಿ ಎಷ್ಟು ಬಗೆಯ ಹುನ್ನಾರಗಳಿವೆಯೆಂಬುದನ್ನು ನೆನೆಯುವಾಗ ಇದೆಲ್ಲ ಇವೆಯೋ ಎಂದು ಆಶ್ಚರ್ಯವಾಗುತ್ತದೆ. ಜಗತ್ತಿನಲ್ಲಿ ಮೊದಲು ಜನ್ಮವೆತ್ತಿದ ಚರಾಚರಗಳ ಸಾಲಿಗೆ ಸಸ್ಯಗಳನ್ನು ಸೇರಿಸಬಹುದಾಗಿರುವ ಕಾರಣ ತಂತ್ರ

ವನ್ನು ಹೂಡುವುದರಲ್ಲಿಯೂ ಇವೇ ಮೊದಲೆಂದು ತಿಳಿಯತಕ್ಕದ್ದು. ಒಂದು ಹೂವಿನ ಆಸುಪಾಸಿನಲ್ಲಿ ಸಾಮಾನ್ಯವಾಗಿ ಕಾಣಸಿಕೊಳ್ಳುವ ಮುಳ್ಳುಗಳನ್ನೇ ಗಮನಿಸಿ. ಆ ಮುಳ್ಳುಗಳು ಅಲ್ಲಿ ಇರುವುದಾದರೂ ಏತಕ್ಕೆ? ಹೂ ಕೊಯ್ಯಲು ಮುಂದಾಗುವ ಕೈಗಳನ್ನು ಎಚ್ಚರಿಸಲು ಹೂವಿನ ಗಿಡಕ್ಕಿರುವ ಕಿರುರಕ್ಷಣಾ ತಂತ್ರವಿದಾಗಿದೆ. ಹೂವು-ಮುಳ್ಳಿನ ಜೋಡಿ ಇರುವುದು ದ್ವಂದ್ವಮಾದರಿ ಏರ್ಪಾಟು – ಪರಾಗಸ್ಪರ್ಶಕ್ಕೆ ಆಕರ್ಷಣೆ, ರಕ್ಷಣೆಗಾಗಿ ವಿಕರ್ಷಣೆ. ಮುಳ್ಳುಗಳು ವಿವಿಧ ಬಗೆಯಲ್ಲಿರುತ್ತವೆ–ಗಾತ್ರ, ಆಕಾರ ಹಾಗೂ ದೃಢತೆಯಲ್ಲಿ ವ್ಯತ್ಯಾಸವಿರುವುದುಂಟು. ತನ್ನನ್ನು ತಿನ್ನಲು ಬರುವ ಪ್ರಾಣಿಗಳಿಗೆ ಚುಚ್ಚಲು ಸಸ್ಯಕ್ಕಿರುವ "ಹಲ್ಲು"ಗಳಿವು ಎಂದು ತಿಳಿಯಬಹುದು. ಉಳಿದೆಲ್ಲ ಬಳ್ಳಿಗಳಂತೆ ಮೇಲೆ ಹಬ್ಬುವ ಸನ್ನಿವೇಶದಲ್ಲಿ ಸಸ್ಯಗಳು ಮುಳ್ಳುಗಳನ್ನೇ ಉಗುರುಗಳಾಗಿ ಬಳಸಿಕೊಳ್ಳುತ್ತವೆ.

ಭೂಮಿಯ ಮೇಲಿನ ಸಹಸ್ರಾರು ಬಗೆಯ ಸಸ್ಯಗಳನ್ನು ಗಮನಿಸುವಾಗ ಮನುಷ್ಯನಿಗೆ ಅವುಗಳಲ್ಲಿ ಬೇಕಾಗಿರುವುದು ಕೇವಲ ೨೦ ವಿಧದವು ಮಾತ್ರ. ಮನುಷ್ಯನ ನಾನಾ ಅಗತ್ಯಗಳಿಗಾಗಿ ಸುಮಾರು ೫೦೦ ಬಗೆಯ ಸಸ್ಯ ಜಾತಿಗಳ ಬಳಕೆಯಾಗುತ್ತಿರಬಹುದೆಂದು ಯಾರೋ ಒಬ್ಬರು ಲೆಕ್ಕ ಹಾಕಿರುವುದುಂಟು. ಮನುಷ್ಯನ ಅಗತ್ಯವೆಂದರೆ, ಆಹಾರ, ಔಷಧಿ, ಅಲಂಕಾರ ಸಾಮಗ್ರಿ ಹಾಗೂ ಸೌಂದರ್ಯ ಸಾಧನಗಳು. ಈ ಪ್ರಮಾಣದ ಸಸ್ಯಗಳಲ್ಲಿ, ನಾವು ಉಪಯೋಗಿಸುವುದು ಸುಮಾರು ೫೦ ಜಾತಿಗಳನ್ನು ; ಉಪಯೋಗಿಸುವುದಕ್ಕೆ ಮೊದಲು ನಾವು ಇವನ್ನು ನೆಲದಿಂದ ಬೇರು ಸಹಿತ ಹಿರಿದು ತೆಗೆಯುತ್ತೇವೆ. ಬತ್ತ, ಗೋದಿ, ಕಾಫಿ, ಟೀ ಮತ್ತು ತರಕಾರಿಗಳು ರಕ್ಷಣಾರಹಿತವಾಗಿರುವುದರಿಂದ ಮನುಷ್ಯ ಹಾಗೂ ಪ್ರಾಣಿಗಳು ಇವನ್ನೆ ಸುಲಭವಾಗಿ ಉಪಯೋಗಿಸಬಹುದಾಗಿದೆ. ಈ ಜಾತಿಯ ಸಸ್ಯಗಳೂ ವಿಚಿತ್ರವಾದ ರೀತಿಯಲ್ಲಿ ರಕ್ಷಣಾ ತಂತ್ರವನ್ನು ಬಳಸಲು ಪ್ರಯತ್ನಿಸುವುದನ್ನು ಕಾಣಬಹುದು. ಅನೇಕ ಬಗೆಯ ಬೀನ್ಸ್ ಹಾಗೂ ಹಸುರು ಸೊಪ್ಪುಗಳು ತಮ್ಮೊಳಗೆ ನಿರೋಧಕಗಳು ಎಂಬ ಹೆಸರಿನ ಸಂಯುಕ್ತಗಳನ್ನು ಹೊಂದಿರುತ್ತವೆ. ನಾವು ಸೇವಿಸಿದ ಆಹಾರ ಜೀರ್ಣವಾಗಲು ಅನುಕೂಲವಾಗುವಂತೆ ಕಿಣ್ವಗಳು ಕೆಲಸ ಮಾಡುವುದನ್ನು ಗಮನಿಸಿದ್ದೇವೆ. ಸೊಯಾಬೀನ್‌ನ ಒಳಗಿರುವ ಪ್ರೋಟಿಯಾನೇಸ್ ನಿರೋಧಕವು ಈ ಕಿಣ್ವಗಳ ಕಾರ್ಯವನ್ನು ಸ್ಥಗಿತಗೊಳಿಸಿ ನಮ್ಮ ಆಹಾರದಲ್ಲಿ ಶರ್ಕರಪಿಷ್ಟಾದಿಗಳು ಜೀರ್ಣವಾಗದಂತೆ ನೋಡಿಕೊಳ್ಳುತ್ತವೆ. ಸಸ್ಯಗಳಲ್ಲಿರುವ ಮತ್ತೊಂದು ನಿರೋಧಕವು ಜೀರ್ಣಕ್ರಿಯೆಯ ಸಂದರ್ಭದಲ್ಲಿ ಆಮ್ಲ-ಪ್ರತ್ಯಾಮ್ಲದ ಪ್ರಮಾಣವನ್ನು ವ್ಯತ್ಯಸ್ತಗೊಳಿಸಿ ಅನಿಲದ ಉತ್ಪತ್ತಿಯಾಗುವಂತೆ ಮಾಡುತ್ತದೆ (ಅದರಿಂದಲೇ ಹೊಟ್ಟೆಯೊಳಗೆ ಆರಾಮವಿಲ್ಲದಂತೆ ತೋರುವುದು.)

ರಕ್ಷಣೆಯ ಯಾವುದಾದರೊಂದು ತಂತ್ರವಾಗಿ ಸಸ್ಯದ ಬೇರೆ ಬೇರೆ ಭಾಗಗಳು ಕಾಣಿಸಿಕೊಳ್ಳುವುದುಂಟು. ಮರಗಳಿಂದ ಎಲೆಗಳೇಕೆ ಉದುರುತ್ತವೆ ಎಂಬ ವಿಚಾರವಾಗಿ ಕೆಲ ವರ್ಷಗಳ ಹಿಂದೆ ಒಂದು ಕುತೂಹಲಕರವಾದ ಚರ್ಚೆ ನಡೆಯಿತು. ಉಳಿದ

ಪದಾರ್ಥಗಳ ಜೊತೆಗೆ ಬೀಳುವ ಎಲೆಯಲ್ಲಿ ತ್ಯಾಜ್ಯಪದಾರ್ಥವೂ ಇರಬಹುದು ಎಂಬ ಅಂಶ ವ್ಯಕ್ತವಾಯಿತು. ಹಾಗಾಗಿ ಬ್ರಿಟನ್ನಿನ ಕಾರ್ಡಿಫ್ ವಿಶ್ವವಿದ್ಯಾನಿಲಯದ ಡಾ|| ಬ್ರಯನ್‌ಫೋರ್ಡ್ ಎಂಬುವವರು ಹೇಳುವಂತೆ ಎಲೆಯನ್ನು ತ್ಯಾಜ್ಯವಸ್ತು ವಾಹಕ ಎಂದು ಕರೆಯಬಹುದು. ಎಲೆಗಳು ಉದುರುತ್ತವೆ; ಅವು ನೆಲದ ಮೇಲೆ ಉದುರಿದಾಗ ಅವು ಹೊರಸೂಸುವ ರಾಸಾಯನಿಕ ವಸ್ತುಗಳು ಆಸುಪಾಸಿನಲ್ಲಿ ಇತರೆ ಸಸ್ಯಗಳು ಬೆಳೆಯದಂತೆ ಅಡ್ಡಿಪಡಿಸುತ್ತವೆ. ಈ ಜಾತಿಗೆ ಸೇರಿದ ಸಸ್ಯಗಳಲ್ಲಿ ಗಮನಾರ್ಹವಾದದ್ದು ನೀಲಗಿರಿ ಸಸ್ಯ. ಲಭ್ಯವಾಗುವ ಎಲ್ಲ ಸಂಪನ್ಮೂಲಗಳನ್ನು ತಾನೇ ಉಪಯೋಗಿಸಿಕೊಂಡು ಬೇರೆ ಯಾವುದೇ ಸಸ್ಯ ಸನಿಹ ಬೆಳೆಯದಂತೆ ತಡೆಗಟ್ಟುತ್ತದೆ. ಅಜುಬಾಜುವಿನಲ್ಲಿ ಇತರೆ ಸಸ್ಯಗಳು ಬೆಳೆಯದಂತೆ ಮಾಡುವ ರಾಸಾಯನಿಕಗಳನ್ನು ಇವು ನೀಲಗಿರಿ ಎಲೆಗಳಿಂದ ಸೂಸುವ ಇವುಗಳಿಗೆ ಅಲ್ಲೀಲೊಪಾತ್‌ಗಳೆಂದು ಹೆಸರು. ಯಾವುದಾದರೊಂದು ನಿರ್ದಿಷ್ಟವಾದ ಕ್ಷೇತ್ರದಲ್ಲಿ ಬೆಳೆಯುವ ಸಸ್ಯಗಳ ಸಾಂದ್ರತೆಯನ್ನು ಕೂಡ ಈ ಕೆಲವು ಅಲ್ಲೀಲೊಪಾತ್‌ಗಳು ನಿಯಂತ್ರಿಸುತ್ತವೆ. ನೈಸರ್ಗಿಕ ತೆಂಗಿನ ತೋಪಿನಲ್ಲಿ ಅಥವಾ ಪೈನ್‌ಮರದ ಕಾಡಿನಲ್ಲಿ ಇದು ಇರುವ ಸಂಪನ್ಮೂಲವನ್ನು ಸಮರ್ಪಕವಾಗಿ ಹಂಚಿಕೊಳ್ಳುವ ತಂತ್ರವಾಗುತ್ತದೆ.

ಬೋಲ್ಯಾಂಡ್ ಮತ್ತವರ ತಂಡದವರು ಈ ದಿಶೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಗಮನಾರ್ಹ ಪ್ರಯೋಗವನ್ನು ನಡೆಸಿದ್ದಾರೆ. ಇವರಿಗಿಂತ ಮೊದಲು ಜರ್ಮನಿಯ ಹಲ್ ವಿಶ್ವವಿದ್ಯಾನಿಲಯದ ಸಸ್ಯ ಜೀವ ರಸಾಯನಶಾಸ್ತ್ರ ಸಂಸ್ಥೆಯ ಡಾ|| ಗುಂತರ್ ಸೆಂಬ್ಡನರ್ ಹಾಗೂ ಡಾ|| ಬೆನೊಪಾರ್ತಿಯರ್ ಸಸ್ಯಗಳು ಹೊರಗೆಡಹುವ ಪರಿಮಳ ಹಾಗೂ ಬಾಷ್ಪಗುಣವುಳ್ಳ ರಾಸಾಯನಿಕಗಳ ಬಗ್ಗೆ ಪ್ರಯೋಗ ನಡೆಸಿದ್ದರು. ಮನಸೂರೆಗೊಳ್ಳುವ ಸುವಾಸನೆಯುಳ್ಳ ಮಲ್ಲಿಗೆ ಹೂ ಕೇವಲ ಪರಾಗಸ್ಪರ್ಶಕ್ಕಾಗಲೀ ಮಾನವನ ಭೋಗಕ್ಕಾಗಲೀ ಗೊತ್ತಾದುದಲ್ಲ. ಕ್ರಿಯಾಶೀಲವಾದ ಜ್ಯಾಸ್ಮೋನಿಕ್ ಆಮ್ಲ (ಮಲ್ಲಿಕಾಮ್ಲ, ಜೆಎ) ಮತ್ತು ಅದರ ಮೆಥೀಲೆಸ್ಟರ್ (ಎಂಜೆಎ) ಸಂಯುಕ್ತವನ್ನು ಅದು ಹೊಂದಿದ್ದು ಮಲ್ಲಿಗೆ ಗಿಡಕ್ಕೆ ಅತ್ಯಗತ್ಯವಾದ ತೈಲಾಂಶ ಇದಾಗಿರುತ್ತದೆ. ಒಂದು ಆಶ್ಚರ್ಯಕರ ಸಂಗತಿಯೆಂದರೆ ಈ ಜೆಎ, ಸಂಯುಕ್ತ ಕೇವಲ ಮಲ್ಲಿಗೆ ಗಿಡಕ್ಕೆ ಮಾತ್ರ ಸೀಮಿತವಾದುದ್ದಲ್ಲ; ವಾಸ್ತವವಾಗಿ ಅದು ಶಿಲೀಂಧ್ರಗಳಿಂದ ಉದ್ಭವವಾಗುತ್ತದೆ. ಇದರ ಇನ್ನೊಂದು ವಿಶೇಷತೆಯೆಂದರೆ ಎತ್ತರದ ಗಿಡಗಳು ಮೇಲು ಮೇಲೆ ಬೆಳೆಯದಂತೆ ತಡೆಗಟ್ಟುತ್ತದೆಯಲ್ಲದೆ, ವಯಸ್ಸಿನ ವೇಗವನ್ನು ವರ್ಧಿಸುತ್ತದೆ. ಸೆಂಬ್ಡನರ್ ಹಾಗೂ ಪಾರ್ತಿಯರ್ ಅವರು ಈ ಮಲ್ಲಿಕಾಮ್ಲದ ಪರಿಮಳದಿಂದ ಇತರ ಸಸ್ಯಗಳ ಮೇಲೆ ಏನೆಲ್ಲ ಸೂಕ್ಷ್ಮ ರೀತಿಯ ಪರಿಣಾಮವಾಗಬಹುದು ಎಂಬುದರ ಬಗ್ಗೆ ಒಂದು ದೀರ್ಘವಾದ ಪಟ್ಟಿಯನ್ನೇ ನೀಡಿದ್ದಾರೆ. ಬೇರುಗಳು, ಮೊಗ್ಗುಗಳು ಹಾಗೂ ಮೊಳೆಯುವ ಅವಸ್ಥೆಯ ಸಸಿಗಳ ಬೆಳವಣಿಗೆಯನ್ನು ಇದು ಕುಂಠಿತಗೊಳಿಸುತ್ತದೆ. ಇದು ದ್ಯುತಿ ಸಂಶ್ಲೇಷಣ ಚಟುವಟಿಕೆಯನ್ನು ನಿಲ್ಲಿಸುವುದಾಗಿಯೂ ತಿಳಿದು ಬಂದಿದೆ.

ಇದು ಹಣ್ಣುಗಳನ್ನು ಮಾಗಿಸುತ್ತದೆ, ಎಲೆಗಳು ಬೇಗ ಹಣ್ಣಾಗಿ ಉದುರುವಂತೆ ಮಾಡುವುದರ ಜೊತೆಗೆ ಪತ್ರಹರಿತ್ತಿನ ಪ್ರಮಾಣವನ್ನು ತಗ್ಗಿಸುತ್ತದೆ. ಬೀಜಗಳಲ್ಲಿಯ ಸುಪ್ತಾವಸ್ಥೆಯ ಅವಧಿಯನ್ನು ಇದು ಮುರಿಯುತ್ತದೆ. ಸಸ್ಯಗಳಿಗೆ ಇದು ಇಷ್ಟೆಲ್ಲಾ ರೀತಿ ಕಂಟಕ ಪ್ರಾಯವಾಗಿರುವಾಗ ಮನುಷ್ಯರಾದ ನಮ್ಮನ್ನು ಯಾವ ಬಗೆಯಲ್ಲಿ ಕಾಡಬಹುದೆಂದು ನೀವು ಲೆಕ್ಕ ಹಾಕುತ್ತಿರಬೇಕಲ್ಲವೆ? ದಿಗಿಲುಗೊಳ್ಳುವ ಪ್ರಮೇಯವಿಲ್ಲ. ಮಲ್ಲಿಗೆಯನ್ನು ಮನುಷ್ಯರು ಆಘ್ರಾಣಿಸುವುದರಿಂದ ವಿಪರೀತ ಪರಿಣಾಮವಾಗುವುದೆಂದು ಇದುವರೆಗಿನ ಪ್ರಯೋಗಗಳ ಫಲಿತಾಂಶದಿಂದ ತಿಳಿದು ಬಂದಿಲ್ಲ—ಇದನ್ನು ಮುಡಿದ ಸ್ತ್ರೀಯರ ಆಕರ್ಷಣೆಗೆ ಪುರುಷರು ಒಳಗಾಗುವರೆಂಬ ಸ್ಪಷ್ಟ ಸತ್ಯವನ್ನು ಕಳವಳಕಾರಿಯೆಂದು ತಿಳಿಯುವವರುಂಟೆ?

ಮಲ್ಲಿಕಾಮ್ಲವು ಕೇವಲ ಮಲ್ಲಿಗೆಗೇ ಸೀಮಿತವಾದದ್ದಲ್ಲ; ಇದೇ ಆಮ್ಲವನ್ನು ಇನ್ನೂ ಅನೇಕ ಸಸ್ಯಗಳೂ ಉತ್ಪತ್ತಿ ಮಾಡುತ್ತವೆ. ಕೊಬ್ಬಿನಿಂದ ಕೂಡಿದ ಲಿನೊಲಿಕ್ ಆಮ್ಲವೆಂಬ ಆಮ್ಲದಿಂದ ಇದು ಉತ್ಪತ್ತಿಯಾಗುತ್ತದೆ. ಕುತೂಹಲಕರವಾದ ಸಂಗತಿಯೆಂದರೆ ಮಲ್ಲಿಕಾಮ್ಲವನ್ನು ಹೋಲುವ ರಾಸಾಯನಿಕವೊಂದು ಸೂಕ್ಷ್ಮಾಣುಗಳಲ್ಲಿ ಗೋಚರವಾಗಿದ್ದು ಸಸ್ಯಗಳಿಗೆ ಹಾನಿಯುಂಟುಮಾಡುವ ರೋಗವನ್ನು ತರುತ್ತದೆ; ಕಾರೊನೆಲತಿನ್ ಎಂಬ ಹೆಸರಿನ ಈ ರಸಾಯನಿಕದ ಪರಿಣಾಮವಾಗಿ ಎಲೆಗಳ ಹಸುರು ಬಣ್ಣ ಮಾಯವಾಗಿ, ಸಸ್ಯಗಳು ಬಹಳ ಬೇಗ ಮುದಿಯಾಗುತ್ತವೆ; ಹಾಗಾಗಿ, ಇದಕ್ಕೆ ಉತ್ತರವಾಗಿ ಸಸ್ಯಗಳು ತಮ್ಮವೇ ಆದ ರಾಸಾಯನಿಕಗಳನ್ನು ರಕ್ಷಣೆಗಾಗಿ ಹೊರಹಾಕುತ್ತವೆ.

ಎರಡನೆಯದಾಗಿ 'ಮಲ್ಲಿಕಾಮ್ಲ'ವು ಸಸ್ಯಗಳಲ್ಲಿ ಅನೇಕ ವಂಶವಾಹಿನಿಗಳ ಉತ್ಪತ್ತಿಗೂ ಕಾರಣವಾಗಿರುವುದು ಕಂಡು ಬಂದಿದೆ. ಈ ಮಲ್ಲಿಕಾಮ್ಲದ ಸ್ಪಂದನೆಗನುಗುಣವಾಗಿ ಜೆಐಪಿಗಳು (ಜ್ಯಾಸ್ಮೊನೇಟ್ ಪ್ರೇರಿತ ಪ್ರೋಟಿನುಗಳು) ಉತ್ಪತ್ತಿಯಾಗುತ್ತವೆ; ಉತ್ಪತ್ತಿಯಾದ ಜೆಐಪಿಗಳು ಎಲೆ ಉದುರುವ, ಮುದಿಯಾಗುವ ಮತ್ತು ಹಣ್ಣುಗಳನ್ನು ಮಾಗಿಸುವ ಕ್ರಿಯೆಯನ್ನು (ಗ್ಯಾಸ್ ತಲೀನ್ ಎಂಬುದರಿಂದ ಉಂಟಾಗುತ್ತದೆ) ಅಲ್ಲದೆ, ಬಳ್ಳಿಗಳ ಕುಡಿ ಸುರುಳಿಯಾಗುವ ರೀತಿಯನ್ನು ಕ್ರಮಬದ್ಧಗೊಳಿಸುತ್ತವೆ. ಇದೆಲ್ಲಕ್ಕಿಂತ ವಿಸ್ಮಯಕಾರಿ ಚಟುವಟಿಕೆಯೆಂದರೆ ಸಸ್ಯಗಳನ್ನು ತಿಂದು ಹಾಕುತ್ತಿರುವ ಪ್ರಾಣಿಗಳನ್ನು ವಿಚಾರಿಸಿಕೊಳ್ಳುವಂತೆ ಕೊಂದುತಿನ್ನುವ ಪ್ರಾಣಿಗಳಿಗೆ 'ಕಾಪಾಡಿ' ಎಂದು ತುರ್ತುಕಾಲದ ಸೂಚನೆಯನ್ನು ಇವು ನೀಡುವುವು.

'ಮಲ್ಲಿಕಾಮ್ಲ'ವು ಉಕ್ಪತ್ತಿ ಮಾಡುವ ಬಾಷ್ಪಗುಣವುಳ್ಳ ರಾಸಾಯನಿಕಗಳ ಬಗ್ಗೆ ಅಧ್ಯಯನ ಮಾಡಲು ಪ್ರೊಫೆಸರ್ ಬೋಲ್ಯಾಂಡ್ ಅವರ ತಂಡ ನಿರ್ಧರಿಸಿತು. ಗಿಡವೊಂದರಿಂದ ಒಂದೆರಡು ಎಲೆಗಳುಳ್ಳ ಭಾಗವನ್ನು ಕತ್ತರಿಸಿ ಬೇರ್ಪಡಿಸಿ ಮಲ್ಲಿಕಾಮ್ಲ ಅಥವಾ ಕಾರೊನೇಟಿನ್ ಇರುವ ದ್ರಾವಣದಲ್ಲಿ ಅದ್ದಿ ಗಮನಿಸಲಾಯಿತು. ಕೆಲವು ಗಂಟೆಗಳ ಕಾಲ ಗಮನಿಸಿದಾಗ ಏನೂ ಬದಲಾವಣೆ ಕಾಣಲಿಲ್ಲ, ಆದರೆ ೨೦-೩೦ ಗಂಟೆಗಳವರೆಗೆ ಅದ್ದಿದ ನಂತರ

ಪರೀಕ್ಷಿಸಲಾಗಿ ಸಸ್ಯದ ಭಾಗ ತನ್ನದೇ ಆದ ವಿಶೇಷ ವಾಸನೆಯನ್ನು ಬೀರುವುದು ಗಮನಕ್ಕೆ ಬಂದಿತು. ಫಲಿತವಾದ ವಾಸನಾವಿಶೇಷವನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು – ಕೆಲವು ಟರ್ಪೀನ್‌ಗಳು ಕೆಲವು ಆಲ್ಕೊಹಾಲ್ ಮತ್ತು ಎಸ್ಟರ್‌ಗಳು ಮತ್ತು ಉಳಿದವು ಪರಿಮಳಯುಕ್ತ ಸಂಯುಕ್ತಗಳು. ಅನೇಕ ಸಸ್ಯಗಳ ಭಾಗಗಳನ್ನು ಹೀಗೆ ದ್ರಾವಣದಲ್ಲಿ ಅದ್ದಿ ಪರೀಕ್ಷೆ ನಡೆಸಲಾಯಿತು. ಪ್ರತಿಯೊಂದೂ ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಇದಕ್ಕೆ ಪ್ರತಿಕ್ರಿಯೆ ತೋರಿದವು; ಇದರಿಂದ ಸ್ಪಷ್ಟವಾಗುವ ಒಂದು ಮುಖ್ಯ ಸಂಗತಿಯೆಂದರೆ 'ಮಲ್ಲಿಕಾಮ್ಲ'ವು ಪ್ರಭಾವಗೊಂಡ ಸಸ್ಯಗಳಲ್ಲಿ ಬೇರೆ ವಾಸನೆಗಳನ್ನುಂಟುಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೆಲವು ಸಸ್ಯಗಳು ಇದರ ಪರಿಣಾಮವಾಗಿ ಕಂದು ಬಣ್ಣಕ್ಕೆ ತಿರುಗಿ ಒಣಗುತ್ತವೆ, ಕೆಲವು ಸಸ್ಯಗಳಲ್ಲಿ ಇನ್‌ಹಿಬಿಟರ್‌ಗಳು ಉತ್ಪತ್ತಿಯಾಗುತ್ತವೆ, ಮತ್ತೆ ಕೆಲವಲ್ಲಿ ಉತ್ಪತ್ತಿಯಾಗುವ ರಾಸಾಯನಿಕಗಳು ಶಿಲೀಂಧ್ರ ಬಾಧೆಗೆ ಉತ್ತರವಾಗಿ ಗೋಚರವಾಗುತ್ತವೆ.

ಈ ಪ್ರಯೋಗದ ಪ್ರಯೋಜನಗಳೇನು ಎಂಬುದರ ಬಗ್ಗೆ ಬೋಲ್ಯಾಂಡ್ ಚಿಂತನೆ ನಡೆಸಿದ್ದಾರೆ. ಬೆಳೆ ಬಂದ ಜಮೀನಿನಲ್ಲಿ ಪ್ರಾಯಶಃ ಮಲ್ಲಿಗೆ ಅಥವಾ ಇತರ ಪರಿಮಳಗಳನ್ನು ಉಪಯೋಗಿಸಿ ಪ್ರಯೋಜನಕಾರಿಯಾದ ಕೀಟಗಳನ್ನು ಆಕರ್ಷಿಸಬಹುದು; ಹಾಗೆಯೇ ಸಸ್ಯಗಳನ್ನು ತಿನ್ನಲು ಬರುವ ಪ್ರಾಣಿಗಳನ್ನು ಓಡಿಸುವ ರಾಸಾಯನಿಕಗಳನ್ನು ಉತ್ಪತ್ತಿ ಮಾಡಬಹುದು. ಈ ಕಾರಣದಿಂದಾಗಿಯೇ ಈ ಕಡೆಯ ಅಂಶ ನಮ್ಮ ಗಮನ ಸೆಳೆಯುತ್ತದೆ. ಪ್ರಾಯಶಃ ದನ ಮತ್ತು ಮೇಕೆಗಳು ಯಾವ ಎಲೆಗಳನ್ನು ತಿನ್ನಬೇಕು ಯಾವುದನ್ನು ಬಿಡಬೇಕು ಎಂದು ನಿರ್ಧರಿಸುವುದು ಈ ವಾಸನೆಯ ಆಧಾರದ ಮೇಲೆ ಎಂದು ತಿಳಿಯಬಹುದು. (ತಾನು ಹಿತಕರವಾದ ವಾಸನೆಯನ್ನೇನೂ ಬೀರದಿದ್ದರೂ) ಮೇಕೆ ಎಲೆಗಳನ್ನು ಮೂಸಿ ಮೂಸಿ ತಿನ್ನುತ್ತಾ ಕಣ್ಣು ಮುಚ್ಚಿ ಕಣ್ಣು ಬಿಡುವುದರೊಳಗೆ ಈ ಬೇಲಿಯನ್ನು ದಾಟಿ ಆ ಬೇಲಿಗೆ ಹಾರಿಬಿಟ್ಟಿರುತ್ತದೆ. ಒಂದೇ ಕಡೆ ನಿಂತು ತಿಂದರೆ ತನಗೆ ತೊಂದರೆ ತಪ್ಪುತ್ತದೆಯೆಂದು ದನಗಾಹಿ ಹಂಬಲಿಸುತ್ತಾನೆ. ಆದರೆ ಎಲ್ಲವನ್ನೂ ಭುಂಜಿಸಲಾಗದ ತನ್ನ ಪರಿಸ್ಥಿತಿಯನ್ನು ತಿಳಿಯ ಹೇಳಲು ಮೇಕೆಗೆ ಬಾಯಿ ಇರಬೇಕಲ್ಲ?

ಜೀವನವು ನಾವು ಎಣಿಸಿದಂತೆ ಹೂವಿನ ಹಾಸಿಗೆಯಲ್ಲ. ಮುಳ್ಳಿನ ಹಾಸಿಗೆಯೂ ಹೌದು. ಆದರೆ ಜೀವಿಸುವವನ ಆತ್ಮಶಕ್ತಿಗನುಗುಣವಾಗಿ ಆ ಹಾಸಿಗೆಯನ್ನು ಹೂವಾಗಿ ಅಥವಾ ಮುಳ್ಳಾಗಿ ಪರಿವರ್ತಿಸಿಕೊಳ್ಳಬಹುದಷ್ಟೆ.

—ವರ್ಡ್ಸ್‌ವರ್ಥ್

ಬೇಸರ-ಶಾಪವೋ? ವರವೋ!

ಡಿ. ರಾಮಚಂದ್ರ

ಬೋರು ಹೊಡೆದಾಗ ಅಂದರೆ ಬಿಡಿಚಲು ಬಡಿದಾಗ ನೀವು ಮೊತ್ತ ಮೊದಲು ಏನು ಮಾಡಬೇಕೆಂದರೆ 'ಏನೂ ಮಾಡಬೇಡಿ'. ಟಿ.ವಿ. ಹಾಕಬೇಡಿ, ಹವ್ಯಾಸ ಹುಡುಕಬೇಡಿ, ಯಾವುದೋ ಊರಿಗೆ ಓಡಬೇಡ, ಏನಾದರೂ ಕೊಳ್ಳಲು ಹೊರಡಬೇಡಿ, ಬದಲಾಗಿ ಹಿಂದೆ ರೈಲ್ವೆ ಕ್ರಾಸಿಂಗ್ ಬಳಿ ಇರುತ್ತಿದ್ದ "ನಿಲ್ಲಿ, ನೋಡಿ, ಆಲಿಸಿ" ಎಂಬ ಸೂಚನೆಯಂತೆ ನಡೆದುಕೊಳ್ಳಿ.

ಬೇಸರವಾದಾಗ ಏನೂ ಮಾಡದೇ ಸುಮ್ಮನಿದ್ದುಬಿಡುವುದು ಅತ್ಯಂತ ಸರಳವಾದ ಮಹತ್ವವಾದ, ಆದರೆ ಅಸಾಧ್ಯವೆನಿಸುವ ಉಪಾಯ. ನಮ್ಮಲ್ಲಿ ಬಹುಜನರಿಗೆ ಇದು ಅತ್ಯಂತ ಕಷ್ಟಕರವೆನಿಸುತ್ತದೆ. ಅವಕ್ಕಾಗಿಯೇ ಯಾವುದಾದರೂ ಚಟುವಟಿಕೆಯನ್ನು ಹುಡುಕುತ್ತಾರೆ. ಅವರನ್ನು 'ಸುಮ್ಮನೇ ಕೂರಬೇಡ, ಏನಾದರೂ ಮಾಡುತ್ತಿರು' ಎಂಬ ಸಲಹೆ ಬಹಳ ಆಕರ್ಷಿಸುತ್ತದೆ. ಆದರೆ ಇವಕ್ಕಿಂತ ಕೇಡಿನ ಸಲಹೆ ಇನ್ನೊಂದಿರಲಾರದು. ಮನಸ್ಸು ಕೊಂಚ ಮಂಕಾಯಿತೆಂದರೆ ಸಾಕು, ತತ್‌ಕ್ಷಣ ಏನಾದರೂ ಕೆಲಸ ಹಚ್ಚಿಕೊಂಡು ನೋಡಿ, ಕುಳಿತರೂ ನಿಂತರೂ ಕಸೂತಿ ಹಾಕಿ, ರೇಡಿಯೋಗೆ ಕಿವಿಗೊಡಿ, ಸದಾ ಏನಾದರೂ ಬಾಯಾಡಿಸುತ್ತಿರಿ ಇಲ್ಲವೇ ಮಾತಾಡುತ್ತಿರಿ ಹೀಗೇ ಏನಾದರೊಂದು ಮಾಡುತ್ತಲೇ ಇರಿ, ನಿಮಗೆ ತಲೆಚಿಟ್ಟು ಹಿಡಿದು ಖಿನ್ನರಾಗಿಬಿಡುತ್ತೀರಿ.

ನೀವು ನಿಜವಾಗಿಯೂ ಮಂಕುತನದಿಂದ ಪಾರಾಗುವ ಹಾದಿ ಹುಡುಕಬೇಕೆಂದಿದ್ದರೆ ಕೊಂಚ ಆಳವಾಗಿ ಯೋಚಿಸಿ. ಪೌರಸ್ತ್ಯ ತತ್ತ್ವಶಾಸ್ತ್ರ ಹಾಗೂ ಧ್ಯಾನವಿಧಾನಗಳ ಪ್ರಕಾರ ಬೇಸರಿಕೆ ಒಂದು ತೊಂದರೆಯೇ ಅಲ್ಲ. ಅದು ಹೊಸವಿಚಾರ, ಹೊಸಜ್ಞಾನ, ಹೊಸಬದುಕಿನ ಮೂಲ. ಪಾಶ್ಚಾತ್ಯರು ಈ ದೃಷ್ಟಿಕೋನವನ್ನು ಇತ್ತೀಚೆಗೆ ಗಮನಿಸಲಾರಂಭಿಸಿದ್ದಾರೆ.

ಬಹಳ ಸರಳಕ್ರಿಯೆಗಳಾದ ನೇರವಾಗಿ ಕುಳಿತುಕೊಳ್ಳುವುದು, ಉಸಿರು ಎಣಿಸುವುದು, ಮನಸ್ಸಿನ ಯೋಚನಾತರಂಗಗಳನ್ನು ಗಮನಿಸುವುದು, ಸಾಕ್ಷೀಭಾವದಿಂದಿರುವುದು ಇತ್ಯಾದಿಗಳಿಂದ ಪೌರಸ್ತ್ಯ ಆಧ್ಯಾತ್ಮಿಕ

೧೯೮೩ ರ ಜನವರಿ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಸ್ಯಾಂ ಕೀನ್ ಅವರ "ಹಿಡನ್ ಬ್ಲೆಸ್ಸಿಂಗ್ಸ್ ಆಫ್ ಬೋರ್‌ಡಮ್" ಎಂಬ ಲೇಖನದ ಅನುವಾದ.

ತಂತ್ರಗಳು ಆರಂಭವಾಗುತ್ತವೆ ಎಂಬುದನ್ನು ಗಮನಿಸುವುದು ಬಹಳ ಮುಖ್ಯ. ನೀವು ನಿಮ್ಮ ಮನಸ್ಸನ್ನು ಏಕೆ ಹೀಗೆ ಮುಚ್ಚಿಕೊಳ್ಳುತ್ತೀರಿ ಎಂದು ನೋಡಿಕೊಳ್ಳಿ ನೀವು ನಿಮ್ಮನ್ನು ಯಾವ ಯಾವ ರೀತಿಯಲ್ಲಿ ರಕ್ಷಿಸಿಕೊಳ್ಳಲು ಯತ್ನಿಸುತ್ತೀರಿ ಗಮನಿಸಿ, ಆಗ ಮನಸ್ಸನ್ನು ತೆರೆಯುವ ವಿಧಾನ ಗೊತ್ತಾಗುತ್ತದೆ. 'ನಿನ್ನನ್ನು ಅರಿತುಕೊ' ಎಂಬ ಸಾಕ್ರಟೀಸ್‌ನ ಸಲಹೆಗೆ ಕಿವಿಕೊಡಿ.

ಒಂದೆಡೆ ಕುಳಿತು ನಿಮ್ಮ ಮನೋಲಹರಿಗಳನ್ನು ಗಮನಿಸಿ. ನಿಮ್ಮೊಳಗೇ ನಡೆಯುವ ಸಂಭಾಷಣೆಗಳಿಗೆ ಕಿವಿಕೊಡಿ. ನಿಮ್ಮಲ್ಲಿಯ ಏಕತಾನತೆಯನ್ನು ಗುರುತಿಸಿ. ನೀವು ನಿತ್ಯವೂ ಅದೇ ಸಂಗತಿಗಳನ್ನು ಮತ್ತದೇ ರೀತಿಯಲ್ಲಿ ಯೋಚಿಸುವುದು, ಅದೇ ರೀತಿ ಮಾಡುವುದು, ಹೇಳಿದ್ದೇ ಹೇಳುವುದು, ಸದಾ ಅದೇ ಆಸೆ, ಕನಸುಗಳ ಸುತ್ತ ಸುತ್ತುವುದು, ನಿಮ್ಮ ಸಂಗಾತಿಯೊಡನೆ ಅದೇ ವಿಷಯಕ್ಕೆ ಬಾರಿ ಬಾರಿ ಜಗಳವಾಡುವುದು, ಮಕ್ಕಳಿಗೆ ಅದೇ ಉಪದೇಶ ದಿನಾ ಕೊಡುವುದು, ನಿಮ್ಮನ್ನು ಈಗಿನ ಸ್ಥಿತಿಗೆ ತಂದಿರುವ (ಹಾಗೆಂದು ನೀವು ನಂಬಿರುವ) ಅದೇ ಆ ಭಯಂಕರ ಅನುಭವಗಳನ್ನು ಸದಾ ನೆನೆಸುತ್ತಿರುವುದು, ಇದನ್ನೆಲ್ಲ ಗಮನಿಸಿ.

ಮನಶ್ಶಾಂತಿ ಕದಡುವುದು ಈ ರೀತಿ ಸದಾ ಮಾಡಿದ್ದೇ ಮಾಡುವುದರಿಂದ ಅದೇ ಅದೇ ಕ್ರಿಯೆ, ಯೋಜನೆಗಳಿಂದ ಮನಸ್ಸು ಖಿನ್ನವಾಗಿಬಿಡುತ್ತದೆ. ಸಾಮಾನ್ಯವಾಗಿ ನಾವೆಲ್ಲ ಯಾವುದೋ ಒಂದು ಏಕತಾನತೆಯಲ್ಲಿ ಮುಳುಗಿ ನಮ್ಮನ್ನು ಸೀಮಿತಗೊಳಿಸಿಕೊಳ್ಳುತ್ತೇವೆ. ನಾವು ಸದಾ ಏಕಾಂಗಿಯಾಗಿ, ಬೇರೆಯವರ ಮೇಲೆ ಅವಲಂಬಿತರಾಗಿ, ಸಿಡುಕರಾಗಿಬಿಡುತ್ತೇವೆ. ದಿನದಿನವೂ ಏನೂ ಹೊಸತಿರದೆ, ಹೊಸದಾಗಿ ಏನೂ ಮಾಡಹೋಗದೆ, ನಮಗೆ ನಾವೇ ಬೋರಾಗಿ ಬೇರೆಯವರಿಗೂ ಬೋರುಹೊಡೆಸಿ ಸಾಯುತ್ತಿರುತ್ತೇವೆ. ಬದುಕಿನಲ್ಲಿ ಡಾಕ್ಟರ್, ಲಾಯರ್, ಗಂಡ, ಕೂಲಿ ಇತ್ಯಾದಿಗಳೆಲ್ಲ ಒಂದೊಂದು ಪಾತ್ರ ಅಷ್ಟೆ. ಸದಾಸರ್ವದಾ ಅದೇ ಗುಂಗಿನಲ್ಲಿದ್ದು ಅದಕ್ಕೇ ಅಂಟಿಕೊಂಡು ಬಿಟ್ಟರೆ ಬದುಕು ದುಸ್ತರವಾಗಿಬಿಡುತ್ತದೆ.

ನಿಮ್ಮಲ್ಲಿ ಎಂಥ ಶಕ್ತಿಯಿದೆ, ನೀವು ಏನೇನು ಮಾಡಲು ಸಾಧ್ಯ ಎಂಬುದು ಗೊತ್ತಾಗಬೇಕೆಂದರೆ ಮೊಟ್ಟಮೊದಲು, ನೀವು ಏತಕ್ಕಾಗಿ ಯಾವುದರಿಂದ ಬೋರುಗೊಳ್ಳುತ್ತೀರಿ ಎಂಬುದನ್ನು ತಿಳಿದುಕೊಳ್ಳಬೇಕು. ನೀವು ಅಭ್ಯಾಸ ಬಲದಿಂದ ಅದೇ ರೀತಿಯಲ್ಲಿ ಮಾಡುವ ಕ್ರಿಯೆಗಳನ್ನು ಸೂಕ್ಷ್ಮವಾಗಿ ಗಮನಿಸಲಾರಂಭಿಸಿದಂತೆ, ನಿಧಾನವಾಗಿ ಹೊಸ ಹೊಸ ಅನುಭವಗಳು ತೆರೆದುಕೊಳ್ಳುತ್ತವೆ. ದುಸ್ತರವೆನಿಸಿದ ಬುದುಕು ಕುತೂಹಲ, ಸತ್ವಮಯವಾಗುತ್ತದೆ.


ಆದರೆ ಎಚ್ಚರವಿರಲಿ! ಬದುಕು ಸದಾ ಸರ್ವದಾ ಹೊಸತನದ ರೋಮಾಂಚನಗಳನ್ನು ನೀಡಲಾರದು. ಬದುಕಿನ ಏರಿಳಿತಗಳನ್ನು ಸಹಜವಾಗಿ ತೆಗೆದುಕೊಳ್ಳಬೇಕು. ಬರ್ಟ್ರೆಂಡ್ ರಸಲ್ ಹೇಳುತ್ತಾರೆ 'ಬದುಕು ಸಂತಸಮಯವಾಗಿರಲು ಸ್ವಲ್ಪ ಬೇಸರವನ್ನು ಸಹಿಸಿಕೊಳ್ಳುವ ಶಕ್ತಿಯೂ ಇರಬೇಕು. ಜಗತ್ತಿನ ಬಹುಪಾಲು ಮಹಾನ್ ವ್ಯಕ್ತಿಗಳ ಜೀವನವನ್ನು ಗಮನಿಸಿದರೆ, ಹಲವು ಮಹತ್ವದ ಸಂದರ್ಭಗಳನ್ನು ಬಿಟ್ಟರೆ ಉಳಿದಂತೆ ಅವರ ಬದುಕು ಸಾಮಾನ್ಯವಾಗಿರ

ವುದು ತೋರಿಬರುತ್ತದೆ. ಯಾವ ಸಮಾಜ ಬೇಸರವನ್ನು ಅರಗಿಸಿಕೊಳ್ಳಲಾರದೋ ಅದು ಮಾನಸಿಕವಾಗಿ ಕುಬ್ಜವಾಗಿ ಬಿಡುತ್ತದೆ.'

ಸುತ್ತಮುತ್ತ ನಡೆಯುವ ಎಲ್ಲಕ್ಕೂ ಗಮನಕೊಡಿ. ನಿಮ್ಮದೇ ಆದ ಜೀವಿತ ಪ್ರಪಂಚದಲ್ಲಿ ಹುದುಗಿ ಹಾಳಾಗದಿರಲು ಒಂದೇ ಒಂದು ಅತ್ಯುತ್ತಮ ಸಾಧನವೆಂದರೆ ಸದಾ ಜಾಗೃತವಾಗಿರುವುದು. ಏಕಾಗ್ರತೆಯನ್ನು ಕಲಿಯಿರಿ. ಎಲ್ಲವನ್ನೂ ಆಸ್ಥೆಯಿಂದ ಗಮನಿಸಿ. ನಿಮ್ಮ ಒಳಗಿನ, ಹೊರಗಿನ ಪ್ರಪಂಚದ ಕ್ರಿಯೆಗಳನ್ನೆಲ್ಲ ಗಮನವಿಟ್ಟು ಅಭ್ಯಾಸಮಾಡಿ.

ಬದುಕಿನಲ್ಲಿ ಏಕತಾನತೆ ಒಂದು ಅನಿವಾರ್ಯತೆ. ಈ ಸರಳವಾದ ಆದರೆ ಅತ್ಯಂತ ಕ್ಲಿಷ್ಟವಾದ ಸಲಹೆ ನಿಮ್ಮನ್ನು ಸದಾ ಸರ್ವದಾ ಬೇಸರಿಕೆಯಿಂದ ಮುಕ್ತಮಾಡಲಾರದು. ಆದರೆ ಈ ಅದ್ಭುತ ಪ್ರಪಂಚದಲ್ಲಿ ನೀವು ನಿಮ್ಮ ಹಳೆಯ ಮಿತಿಗಳನ್ನು ದಾಟಿ ಹೆಚ್ಚು ಸುಂದರವಾಗಿ, ಪೂರ್ಣವಾಗಿ ಜೀವಿಸಲು ಇದು ಸಹಾಯ ಮಾಡುತ್ತದೆ.

ಒಟ್ಟಿನಲ್ಲಿ 'ಏನೂ ಮಾಡದಿರುವ' ಕಲೆಯನ್ನು ಕರಗತಮಾಡಿಕೊಂಡರೆ ನೀವು ಅತ್ಯಂತ ಕ್ಷಮತೆಯಿಂದ ವ್ಯವಹರಿಸುವುದನ್ನು ಕಲಿಯುತ್ತೀರಿ. ಎಲ್ಲ ಸೃಜನಾತ್ಮಕ ಕ್ರಿಯೆಗೆ ಮೂಲವಾದ ಮಹತ್ವವಾದ 'ಏಕಾಂತ'ವನ್ನು ಅರಿಯುತ್ತೀರಿ. ಕ್ಯಾಟೋ ಬರೆಯುತ್ತಾರೆ 'ಏನೂ ಮಾಡದಿರುವಾಗಲೇ ಒಬ್ಬನು ಅತ್ಯಂತ ಚಟುವಟಿಕೆಯಿಂದಿರುತ್ತಾನೆ. ತಾನೇ ತಾನಾಗಿರುವಾಗಲೇ ನಿಜವಾದ ಏಕಾಂತ'ದಲ್ಲಿರುತ್ತಾನೆ.



ದೈವೀ ಕೃಪೆಯಿಂದ ಎಲ್ಲವನ್ನೂ ಸಾಧಿಸಿಕೊಳ್ಳಬಹುದು. ಆದರೆ ಸಾಧಕನ ಸಾಧನೆ ಮಾತ್ರ ಅದಕ್ಕೆ ಅವಶ್ಯ.

—ಶ್ರೀ ಅರವಿಂದ

ನಮ್ಮಪ್ಪನ ಉತ್ಕೃಷ್ಟ ಉಡುಗೊರೆ

ಜಿ. ಟಿ. ರಾಘವೇಂದ್ರ

ಆರು ತಿಂಗಳ ಹಿಂದೆ ಅವರು ನನಗೆ ಕೆಲವು ದಾಖಲೆ ಪತ್ರಗಳನ್ನು ಕೊಟ್ಟಿದ್ದರು. ಈಗ ಅದು ಅವರಿಗೆ ಬೇಕಾಗಿತ್ತು. ಅಂದು ಅವರು ನನಗೇಕೆ ಕೊಟ್ಟರು, ಈಗೇಕೆ ಕೇಳುತ್ತಿದ್ದಾರೆ ಎಂದು ನನಗರ್ಥವಾಗದೆ ನಾನು ಗೊಂದಲಕ್ಕೆ ಒಳಗಾದೆ. ಆಸ್ಪತ್ರೆಯ ಅಂಗಣದಲ್ಲಿ ಆ ಪತ್ರಗಳನ್ನು ಬಿಡಿಸಿ ನಿಧಾನವಾಗಿ ಓದ ತೊಡಗಿದೆ....

"ನನ್ನ ಸಂಸಾರಕ್ಕೆ, ವೈದ್ಯರಿಗೆ, ವಕೀಲರಿಗೆ ಮತ್ತು ಪಾದ್ರಿಗೆ ಹಾಗೂ ನನ್ನ ಆರೋಗ್ಯಕ್ಕಾಗಿ, ನನ್ನ ಹಿತಕ್ಕಾಗಿ ಅಹರ್ನಿಶಿ ದುಡಿದು ಸಹಕರಿಸಿದ ಪ್ರತಿಯೊಬ್ಬರಿಗೂ ತಿಳಿಸುವುದೇನೆಂದರೆ, ಕ್ಷಣಕ್ಷಣಕ್ಕೂ ನನ್ನ ಸಾವು ಸಮೀಪಿಸುತ್ತಿದೆ. ನನ್ನ ಭವಿಷ್ಯದ ಬಗ್ಗೆ ನಾನು ತೀರ್ಮಾನ ತೆಗೆದುಕೊಳ್ಳಲು ಅಸಾಧ್ಯ ಆಗುವ ಮೊದಲೇ, ನನ್ನ ಮಾನಸಿಕ ಸ್ಥಿತಿ, ಸುಸ್ಥಿತಿಯಲ್ಲಿ ಇರುವಾಗಲೇ ನನ್ನ ಮನಸ್ಸಿನ ಅಭಿಪ್ರಾಯಗಳನ್ನು ಈ ಮೂಲಕ ತಿಳಿಸಲು ಇಚ್ಛಿಸುತ್ತೇನೆ ...ನನಗೆ ಮುಂದೆ ಓದಲಾಗಲಿಲ್ಲ. ಪತ್ರಗಳನ್ನು ಮಡಿಚಿದೆ. ಕಿಟಕಿ ಬಳಿ ಹೋಗಿ ದಿಗಂತದೆಡೆಗೆ ನೋಡ ತೊಡಗಿದೆ. ಅಲ್ಲಿಯ ಮರಗಿಡಗಳು ನನ್ನ ದೃಷ್ಟಿಗೆ ಬೀಳಲಿಲ್ಲ, ಹೂಗಳನ್ನು ಕಾಣಲಿಲ್ಲ, ವಾಹನಗಳನ್ನು ನೋಡಲಿಲ್ಲ. ಅವರ ಮುಖವೇ ಮತ್ತೆ ಮತ್ತೆ ನನ್ನ ಸ್ಮೃತಿ ಪಟಲದಲ್ಲಿ ಕಾಣತೊಡಗಿತು.

ಮಂಗಳವಾರ ಶುಕ್ರವಾರ ಹಿರಿಯರನ್ನು ಭೇಟಿ ಮಾಡುವ ದಿವಸ—ಅವರೊಡನೆ ಮಾತು ಕಥೆ; ಬುಧವಾರ ನಿವೃತ್ತ ಅಧಿಕಾರಿಗಳ ಸಂಘದಲ್ಲಿ ಮನೋರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಅನಂತರ ಭೋಜನ; ವಾರಾಂತ್ಯದಲ್ಲಿ ನಗರದ ವಿಧವೆಯರನ್ನು ಕಂಡು ಅವರ ಕಷ್ಟಸುಖಗಳನ್ನು ವಿಚಾರಿಸುವುದು; ಸೋಮವಾರ, ಗುರುವಾರ ನನ್ನೊಡನೆ ಕಾಲಯಾಪನೆ. ಅವರು ೭೩ ವರ್ಷಗಳ ಅನಂತರ ವಿಧುರರಾಗಿದ್ದಾರೆ. ಈಗ ಸ್ವತಂತ್ರರು; ಬುದ್ಧಿವಂತರು. ಅವರು ನನ್ನೊಡನೆ ಯಾವಾಗಲೂ ಸಂತೋಷವಾಗಿರುತ್ತಾರೆ.

ಇವರೊಬ್ಬ ವಿಶೇಷ ವ್ಯಕ್ತಿ. ನಾನು ಕೊಂಡ ಸಾಮಾನುಗಳನ್ನು ಕಾರಿಗೆ ಹೊತ್ತು ತರುತ್ತಾರೆ. ನಾವು ಮಾಡುವ ಭೋಜನ

೧೯೮೮ರ ಫೆಬ್ರವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ನೆಲ್ಲಿ ಪಿಕ್ ರ್‍ಯಾಂಡೋ ಅವರ "ಮೈ ಫಾದರ್ಸ್ ಬೆಸ್ಟ್ ಗಿಫ್ಟ್" ಎಂಬ ಲೇಖನದ ಅನುವಾದ.

ಕೂಟದ 'ಬಿಲ್' ಅನ್ನು ತಾವೇ ಪಾವತಿಸುತ್ತಾರೆ. ನಾನು ಅವರ ತಲೆ ಕ್ಷೌರದಿಂದ ಹಿಡಿದು ಪ್ರತಿ ಬೇಕು ಬೇಡಿಕೆಗಳನ್ನು ಈಡೇರಿಸುತ್ತೇನೆ. ಅವರು ನನಗಾಗಿ ಪ್ರೀತಿಯಿಟ್ಟು ಬೇಯಿಸಿದ ಉಪ್ಪು ಮಿಶ್ರಿತ ಬಟಾಟೆಯನ್ನು ತುಂಬಾ ರುಚಿಯಾಗಿ ತಿನ್ನುತ್ತೇನೆ.

ಒಂದು ದಿನ, ಹಿರಿಯರ ಕೂಟದಿಂದ ಹಿಂತಿರುಗಿ ಬರುತ್ತಿರುವಾಗ, ವಕೀಲರ ಮೂಲಕ ಬರೆಸಿದ ಪತ್ರ ಒಂದನ್ನು ನನ್ನ ಕೈಗೆ ಕೊಡುತ್ತಾ ಅವರು ಕೇಳಿದಾಗ ಕೊಡಬೇಕೆಂದು ನನ್ನಿಂದ ವಾಗ್ದಾನ ತೆಗೆದುಕೊಂಡರು. ಇವರು ನಿಃಸ್ಸಂಶಯವಾಗಿ ಒಬ್ಬ ವಿಶೇಷ ವ್ಯಕ್ತಿ. ಇವರು ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು—ಇವರು ನನ್ನ ತಂದೆ.

ಹೌದು, ಇವರು ತುಂಬಾ ಬುದ್ಧಿವಂತರು—ಇದರಲ್ಲಿ ಸಂಶಯವಿಲ್ಲ. ಆದರೆ, ಶಿಥಿಲವಾಗುತ್ತಿರುವ ತನ್ನ ಆರೋಗ್ಯದ ಬಗ್ಗೆ ಗಮನಿಸದೆ ಉದಾಸೀನರಾಗಿದ್ದರು. ಅವರು ತನ್ನ ಊದಿದ ಪಾದಗಳನ್ನು ಪಾದರಕ್ಷೆಗಳೊಳಗೆ ತುರುಕಲು ತುಂಬಾ ಕಷ್ಟಪಡುತ್ತಿದ್ದರು. ಎಡೆಬಿಡದೆ ಹೊಟ್ಟೆನೋವು ಅನುಭವಿಸುತ್ತಿದ್ದರು. ಜೀರ್ಣಶಕ್ತಿ ಕುಂದುತ್ತಿತ್ತು. ತಿಂಡಿ ತಿನಸುಗಳ್ಯಾವುದೂ ರುಚಿಸುತ್ತಿರಲಿಲ್ಲ. ಕೆಲವು ಘಂಟೆಗಳ ಕಾಲ ಕಾರಿನಲ್ಲಿ ಸುತ್ತಿ ಬಂದಾಗ, ನಾನು ಕಾರಿನಿಂದ ಇಳಿಯುವ ಮೊದಲೇ ಅವರು ಬಚ್ಚಲುಮನೆ ತಲುಪುತ್ತಿದ್ದರು. ನಾನು ಚಿಂತಾತುರನಾಗಿ ವಿಚಾರಿಸಿದರೆ ಹಾರಿಕೆ ಉತ್ತರ ಕೊಡುತ್ತಿದ್ದರು. ಒಂದು ದಿನ ಹೊಟ್ಟೆನೋವು ತಡೆಯಲು ಅಸಾಧ್ಯವಾದಾಗ ಅನ್ಯಮಾರ್ಗವಿಲ್ಲದೆ ಮೂತ್ರತಜ್ಞ ವೈದ್ಯರನ್ನು ಕರೆಸಿದೆ. ಇದು ಅವರಿಗೆ ಸ್ವಲ್ಪವೂ ಇಷ್ಟವಾಗಲಿಲ್ಲ ಎಂಬುದು ಅವರ ವಿಷಣ್ಣವದನದಿಂದ ಅರಿವಾಯಿತು.

ಮೂತ್ರಶಾಸ್ತ್ರಜ್ಞ ಎಲ್ಲಾ ತರದ ಪರೀಕ್ಷೆ ನಡೆಸಿ ಜನನೇಂದ್ರಿಯದಲ್ಲಿ ಅತಿ ಮುಂದುವರಿದ 'ಕ್ಯಾನ್ಸರ್' ಆಗಿದೆಯೆಂದೂ ಮಾತ್ರವಲ್ಲ ಬಹಳ ರಭಸದಿಂದ ದೇಹದ ಇತರ ಭಾಗಗಳಿಗೆ ಹರಡುತ್ತಿದೆಯೆಂದು ತಿಳಿಸಿದರು. ನನ್ನ ತಂದೆ ತುಂಬಾ ಶಾಂತಚಿತ್ತದಿಂದ 'ಮುಂದೇನು?' ಎಂದು ಪ್ರಶ್ನಿಸಿದರು. ವೈದ್ಯಮಹಾಶಯರು 'ಹೇಳಲಾಗುವುದಿಲ್ಲ, ಶಸ್ತ್ರಕ್ರಿಯೆ ಮತ್ತು ಔಷಧ ಸೇವನೆ ರೋಗದ ಬೆಳವಣಿಗೆಯನ್ನು ಮತ್ತು ಹರಡುವಿಕೆಯನ್ನು ಕುಂಠಿತಗೊಳಿಸೀತು. ಏನೇ ಆದರೂ, ಆದಷ್ಟು ಬೇಗನೆ ಆಸ್ಪತ್ರೆ ಸೇರುವುದು ಒಳ್ಳೆಯದು. ಅಲ್ಲಿ ಹೆಚ್ಚಿನ ನಿಗಾವಹಿಸಿ ನೋಡಿಕೊಳ್ಳಲು ಸಾಧ್ಯ' ಎಂದು ತನ್ನ ಅಭಿಪ್ರಾಯವನ್ನು ತಿಳಿಸಿದರು. ಮುಂದಿನ ಒಂದು ವಾರದಲ್ಲಿ ಉಳಿದೆಲ್ಲಾ ಪರೀಕ್ಷೆ ಮಾಡಿ ನೋಡಿದಾಗ ಕ್ಯಾನ್ಸರ್ ಹೌದೆಂದು ದೃಢಪಟ್ಟಿತು. ಮಾತ್ರವಲ್ಲ ಒಂದು ಮೂತ್ರಕೋಶ ಸಂಪೂರ್ಣ ಹಾಳಾಗಿದ್ದು ಇನ್ನೊಂದಕ್ಕೂ ರೋಗ ಹರಡಿದೆ ಎಂದು ತಿಳಿಯಿತು.

ಎರಡು ವಾರಗಳಲ್ಲಿ ಮೂರು ಶಸ್ತ್ರಕ್ರಿಯೆಗಳಾದುವು. ಅನಂತರ ತಂದೆಯನ್ನು ಮನೆಗೆ ಕರೆದುತಂದೆವು. ಕ್ರಮೇಣ ಅವರು ಪೂರ್ಣ ಗುಣಮುಖರಾಗುತ್ತಾರೆ ಎಂಬ ನಂಬಿಕೆ ನಮಗಿರಲಿಲ್ಲ. ನನ್ನ ಸಹೋದರಿ ಮತ್ತು ನಾನು ಸರದಿ ಮೇಲೆ ಅವರನ್ನು ನೋಡಿಕೊಳ್ಳತೊಡಗಿದೆವು. ಒಂದು ರಾತ್ರಿ, 'ನೀವು ನೋಡಿಕೊಂಡದ್ದು ಸಾಕು. ಇನ್ನು ಹೋಗಿ

ಮಲಗಿಕೊಳ್ಳಿ. ನಾನು ಹುಷಾರಾಗಿದ್ದೀನೆ' ಎಂದು ಹೇಳಿದರು. ಈ ಹೇಳಿಕೆ ಅವರು ನನಗೆ ಪ್ರಥಮ ಬಾರಿಗೆ ಹೇಳಿದ ಅಸತ್ಯದ ನುಡಿ ಎಂದೆನಿಸಿತು. ಬಹುಶಃ, ನಮ್ಮನ್ನು ಬೇಗನೆ ಕಳುಹಿಸಿ ತಾನೊಬ್ಬನೇ ಏಕಾಂತದಲ್ಲಿ ತೃಪ್ತಿ ಆಗುವಷ್ಟು ಬೀರು ಹೀರಬೇಕು ಎಂದೆನ್ನಿಸಿರಬೇಕು! ನಾವಿದ್ದರೆ ನಮ್ಮ ಮನ ನೋಯಿಸಿ ಕುಡಿಯುವ ಮನಸ್ಸು ಅವರು ಮಾಡುತ್ತಿರಲಿಲ್ಲ. ಮಾತ್ರವಲ್ಲ, 'ಛೇ, ಹೀಗೆ ಮಾಡಬಾರದಿತ್ತು' ಎಂದು ಹೇಳಿಸಿಕೊಳ್ಳಲು ಸಿದ್ಧರಿರಲಿಲ್ಲ. ಏಕೆಂದರೆ ಅವರು ಬಲು ಸ್ವಾಭಿಮಾನಿಯಾಗಿದ್ದರು.

ಸಾಧ್ಯ ಆದಾಗಲೆಲ್ಲಾ ಸಣ್ಣ ನಿದ್ರೆ ಮಾಡುತ್ತಿದ್ದರು. ಅಡುಗೆಮನೆ ಮೇಜಿನ ಮೇಲೆ ಪದಬಂಧ ಬಿಡಿಸುತ್ತಿರುವುದು ಅವರ ಸಂತೋಷದ, ಸಮಯ ಕಳೆಯುವ ಹವ್ಯಾಸವಾಗಿತ್ತು. ತನ್ನ ಯಾವುದೇ ಭಾವನೆಗಳನ್ನು ತಾವೊಬ್ಬರೇ ಮೆಲುಕು ಹಾಕುತ್ತಿದ್ದರಲ್ಲದೆ ಬೇರೆಯವರಿಗೆ ಯಾವ ವಿಧದಲ್ಲೂ ತೊಂದರೆ ಕೊಡುತ್ತಿರಲಿಲ್ಲ, ರಗಳೆ ಮಾಡುತ್ತಿರಲಿಲ್ಲ!!

ಅವರನ್ನು ಸಂತೋಷ ಪಡಿಸಲು ಆಗಾಗ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದೆ. ಅವರು ಬಹಳ ಬೇಗ ಸುಸ್ತಾಗಿಬಿಡುತ್ತಿದ್ದರು. ಸಾಮಾನು ಕೊಳ್ಳಲೆಂದು ನಾನು ಕಾರು ನಿಲ್ಲಿಸಿದಾಗಲೆಲ್ಲಾ ಅಡ್ಡಾಡುವ ಪುಟಾಣಿ ಮಕ್ಕಳನ್ನು, ಅವರ ಅಜ್ಜಿಯಂದಿರನ್ನು ಮಾತಾಡಿಸುತ್ತಿದ್ದರು. ಅವರು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವುದನ್ನು ಗಮನಿಸುತ್ತಿದ್ದೆ. ಅವರು ಆಸ್ಪತ್ರೆಯಿಂದ ಬಂದ ಬಳಿಕ ಮೂವತ್ತೇಳು ದಿನಗಳ ಕಾಲ ಮನೆಯಲ್ಲಿದ್ದರು.

ಒಂದು ಸಂಜೆ, ಎಂದಿನಂತೆ ಅವರನ್ನು ವಿಚಾರಿಸಿಕೊಂಡು ಬರಲು ಹೋದೆ. ಅ ದಿನ ಅವರು ಹಾಡುತ್ತಲೂ ಇರಲಿಲ್ಲ, ಪದ ಬಂಧ ಬಿಡಿಸುತ್ತಲೂ ಇರಲಿಲ್ಲ. ಬದಲಾಗಿ ಸುಮ್ಮನೆ ಕುಳಿತಿದ್ದರು. ಅವರ ಆರೋಗ್ಯದ ಬಗ್ಗೆ ವಿಚಾರಿಸಿದೆ. ತಡಕೊಳ್ಳಲಾಗದೆ ತಮ್ಮ ಕಣ್ಣೀರನ್ನು ಒರೆಸಿಕೊಳ್ಳುತ್ತಾ '....ಇಲ್ಲ.... ಏನೇನೂ.... ಹುಷಾರಿಲ್ಲ....' ಎಂದು ಗದ್ಗದಿತರಾಗಿ ಹೇಳಿದರು. ಅವರು ಸಾಧಾರಣವಾಗಿ ತನ್ನ ಅನಾರೋಗ್ಯವನ್ನು ತೋರಿಸಿಕೊಳ್ಳಲು ಇಷ್ಟಪಡದವರು. ಕೇವಲ ಆಪ್ತರು ಕೇಳಿದಾಗಲೂ ತಾನು ಹುಷಾರಿದ್ದೀನೆ ಎಂದು ಹೇಳಿಕೊಳ್ಳುತ್ತಿದ್ದ ವರು 'ತಡಕೊಳ್ಳಲಾಗದೆ' ಹುಷಾರಿಲ್ಲ ಎಂದು ಒಪ್ಪಿಕೊಂಡದ್ದು ನನಗೆ ಆಶ್ಚರ್ಯ ವಾಯಿತಲ್ಲದೆ ಬಹಳ ಗಾಬರಿಯಾಯಿತು! ಆ ಸಂಜೆಯಿಂದ ಮಾರನೆ ದಿನ ಬೆಳಗ್ಗಿನ ವರೆಗೂ ಅವರು ಆಗಾಗ ವಾಂತಿ ಮಾಡಿ ಕೊಳ್ಳುತ್ತಿದ್ದರು. ಅವರ ಆರೋಗ್ಯ ಸಂಪೂರ್ಣ ಕೆಟ್ಟಿತ್ತು. ಬೆಳಗ್ಗಿನ ನಾಲ್ಕು ಘಂಟೆಗೆ ಆಸ್ಪತ್ರೆಗೆ ಹೋಗಲು ಒಪ್ಪಿದರು.

ಈ ಸರ್ತಿ ಏಳು ವಾರಗಳವರೆಗೆ ಆಸ್ಪತ್ರೆಯಲ್ಲಿರಬೇಕಾಯಿತು. ಮತ್ತೆ ಅವರು ಮೂರು ಶಸ್ತ್ರಕ್ರಿಯೆಗಳಿಗೆ ಒಳಪಟ್ಟರು. ಮೇಲಿಂದ ಮೇಲೆ ನಡೆದ ಶಸ್ತ್ರಕ್ರಿಯೆ ಗಳಿಂದಾಗಿ ಅವರು ಜರ್ಜರಿತರಾ ಹೋದರು. ಒಂದು ಕೈಯಲ್ಲಿ ಮಂಚದ ಅಡ್ಡಪಟ್ಟಿಯನ್ನು ಆಸರೆಯಾಗಿ ಹಿಡಿದು ಕೊಂಡು, ಇನ್ನೊಂದು ಕೈಯ್ಯಲ್ಲಿ ನನ್ನನ್ನು ಹಿಡಿದುಕೊಂಡು "ಮಗೂ, ನಿನ್ನೆ ನಿನ್ನ ಜನ್ಮ ದಿನವಲ್ಲವೇ? ನಾನು ನಿನಗೆ ಜನ್ಮ ದಿನ ಉಡುಗೊರೆ ಕೊಡಲಾರದವನಾಗಿಹೋದೆ ...." ಎಂದು ಬಿಕ್ಕಿದರು. ಬಹುಮಾನ?!

ಪ್ರತಿದಿನ ಪ್ರತಿಕ್ಷಣ ಅವರು ನನಗೆ ಬಹುಮಾನವಿತ್ತಿದ್ದಾರೆ, ಈಗಲೂ ಕೊಡುತ್ತಲೇ ಇದ್ದಾರೆ. ಅವರ ಮಾರ್ಗದರ್ಶನಕ್ಕೆ ಬೆಲೆ ಕಟ್ಟಲಾದೀತೇ? ಜೀವನದ ಮಿಂಚು ಸಿಡಿಲುಗಳಿಂದ ರಕ್ಷಿಸಲು ಅವರ ಮಡಿಲಲ್ಲವೇ ನನಗೆ ಆಶ್ರಯ ನೀಡಿದ್ದು? ಇನ್ನೇನು ಬೇಕು ಬಹುಮಾನ? ಪ್ರಾಯಪ್ರಬುದ್ಧಳಾದಾಗ, ಯಾವುದೋ ಕಾರಣಕ್ಕೆ ನನ್ನ ಮನಸ್ಸು ನೊಂದುಕೊಂಡಾಗ ಅವರು ನನ್ನನ್ನು ಸಾಂತ್ವನಗೊಳಿಸಿದ್ದನ್ನು ಮರೆಯಲಾದೀತೇ? ಅದು ಬಹುಮಾನವಲ್ಲವೇ? ಅವರ ಅಪಾರ ಬುದ್ಧಿಮತ್ತೆ, ತಿಳುವಳಿಕೆ ಇವೆಲ್ಲವನ್ನೂ ನನಗೆ ಬಳುವಳಿಯಾಗಿ ಕೊಟ್ಟು ನನ್ನನ್ನು ಪ್ರಬುದ್ಧಳಾಗಿ ಮಾಡಿದರಲ್ಲಾ ಇವೆಲ್ಲವೂ ಬಹುಮಾನಗಳೇ ತಾನೇ? ಅಪ್ಪಾ, ನಿಮ್ಮಿಂದ ನಾನು ಬೇರೆ ಯಾವ ಬಹುಮಾನನಿರೀಕ್ಷಿಸಲಿ? ವಸ್ತುರೂಪದ್ದೇ? ಅದಕ್ಕೆ ಅರ್ಥವಿದೆಯೇ? ನೀವು ನನಗೆ ಜನ್ಮ ಕೊಟ್ಟಿರಿ, ಸಮಾಜಕ್ಕೆ ಉಪಯೋಗಿಯಾಗಿ ಬದುಕಲು ಮಾರ್ಗದರ್ಶನ ಮಾಡಿದಿರಿ. ಇದನ್ನೆಲ್ಲಾ ನಾನು ಬಾಯಿಬಿಟ್ಟು ನಿಮಗೆ ಹೇಳಲೇ? ನನ್ನ ಗಂಟಲು ಕಟ್ಟಿತು. ಕಣ್ಣು ಬೀಗಿತು. ಆದರೆ, ನನ್ನ ಕಣ್ಣೀರು ಬೀಳುವ ಮೊದಲೇ ಅವರಿಗೆ ಮಂಪರು ಆವರಿಸತೊಡಗಿತು.

ವೈದ್ಯರು ಅವರ ಮೂತ್ರಕೋಶದ ದುಃಸ್ಥಿತಿಯಿಂದಾಗಿ ಇನ್ನೊಂದು ಶಸ್ತ್ರಕ್ರಿಯೆ ನಡೆಸುವುದು ಅಗತ್ಯವೆಂದೂ, ಇಲ್ಲದಿದ್ದಲ್ಲಿ ತತ್‌ಕ್ಷಣ ಮರಣ ಸಂಭವಿಸಬಹುದೆಂದೂ ತಿಳಿಸಿದರು. ತಡಮಾಡಿದರೆ, ಈಗಾಗಲೇ ರಕ್ತ ಒತ್ತಡ ಜಾಸ್ತಿ ಆಗುತ್ತಿದ್ದು ಯಾವುದೇ ಗಳಿಗೆಯಲ್ಲಿ ಜ್ಞಾನ ಹೋಗುವ ಸಂದರ್ಭ ಬರಬಹುದೆಂದೂ ಹಾಗೆ ಹೋದ ಜ್ಞಾನ ಮತ್ತೆ ಮರಳಿ ಬರಲಾರದೆ ಮರಣ ಸಂಭವಿಸಬಹುದೆಂದರು.

ನಾನು ಅವರ ಹತ್ತಿರ ಕುಳಿತುಕೊಂಡು ಅವರ ಮಾತನ್ನು ಕೇಳುತ್ತಿದ್ದೆ. ಅವರು ಹೇಳಿದರು, 'ನಾನು ಸಾಕಷ್ಟು ಅನುಭವಿಸಿದೆ ಆ ದಿನ ಹೇಳಿದ್ದು ಜ್ಞಾಪಕವಿದೆ ತಾನೇ? ನಾನು ಅಂದು ನಿನಗೆ ಕೆಲವು ದಾಖಲೆ ಪತ್ರಗಳನ್ನು ಕೊಟ್ಟಿದ್ದೆನಷ್ಟೆ.........' ನಾನು ಯೋಚಿಸುವ ಮೊದಲೇ.... 'ದಯವಿಟ್ಟು ನನಗಾಗಿ ಅವುಗಳನ್ನು ತರುತ್ತೀಯಾ?' ಎಂದು ಆಜ್ಞಾಪಿಸುವ ಬದಲು ವಿನಂತಿಸಿಕೊಂಡರು.

ಹೊರಗಿನ ಪ್ರಾಂಗಣದಲ್ಲಿ ನಾನು ಆ ದಾಖಲೆಗಳನ್ನು ಓದಿಕೊಂಡೆ—

> "ನನ್ನ ತೀವ್ರವಾಗಿ ಹದಗೆಡುತ್ತಿರುವ ಆರೋಗ್ಯದಿಂದಾಗಿ ನಾನು ಸಂಪೂರ್ಣವಾಗಿ ಪರಾವಲಂಬಿಯಾಗಬೇಕಾಗಿ ಬಂದಿದೆ. ಸಹಿಸಲು ಅಸಾಧ್ಯವಾದ ನೋವಿನಿಂದ ಬಳಲುವ ಬದಲು ನಾನು ಸಾವನ್ನು ಬಯಸುತ್ತೇನೆ. ಪ್ರಸ್ತುತ ಸ್ಥಿತಿಯಿಂದ ಸುಧಾರಣೆಗೊಳ್ಳುವ ಯಾವುದೇ ಆಶಯ ಉಳಿದಿಲ್ಲವಾದ್ದರಿಂದ ಸಂಬಂಧಪಟ್ಟ ವೈದ್ಯಾಧಿಕಾರಿಗಳಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದು ಏನೆಂದರೆ ನನಗೆ ದಯಾಮರಣವನ್ನು ದಯಪಾಲಿಸಿ ನನ್ನನ್ನು ಈ ಸಂಕಟದಿಂದ ಪಾರು ಮಾಡಿ. ಇದುವರೆಗೆ ನಾನು ಗೌರವಯುತವಾಗಿ ಬದುಕಿ-ಬಾಳಿದವನು; ಮರಣವನ್ನೂ ಅದೇ ತೆರನಾಗಿ ನಿರೀಕ್ಷಿಸುತ್ತೇನೆ. ಅನಾವಶ್ಯವಾಗಿ ಔಷಧಿಗಳನ್ನು ನೀಡಿ ಕೃತ್ರಿಮವಾಗಿ ನನ್ನ ಮರಣವನ್ನು ಉದ್ದ ಎಳೆದು ನನಗೆ 'ಸಾಹಸಿ' ಪಟ್ಟ ಕಟ್ಟಬೇಡಿ."

ನಾನು ಅತ್ಯಂತ ಪ್ರಯಾಸದಿಂದ ಅವರ ಸ್ಥಾನದಲ್ಲಿ ನಿಂತು ಯೋಚಿಸಿದೆ—ಅವರ ಮನಸ್ಸಿನ ಆಳ ಯಾವ ತೆರನದ್ದು ಎಂದು!! ಇದು ಅತ್ಯಂತ ಭೀಕರವಾದ ತೀರ್ಮಾನ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ, ಅವರಿಗಾಗಿ ತೀರ್ಮಾನಿಸಿಕೊಳ್ಳುವ ಹಕ್ಕು ಅವರದ್ದೇ ತಾನೇ?! ಅವರ ಜೀವ–ಅವರ ತೀರ್ಮಾನ. ಅದನ್ನು ತಡೆಯುವ ಹಕ್ಕು ಬೇರಾರಿಗೂ ಇಲ್ಲ!!

ತುಂಬಾ ಕಷ್ಟದಿಂದ, ನೋವಿನಿಂದ ಕೂಡಿದ, ಊದಿಹೋದ ಶೈತ್ಯಭರಿತ, ನೀಲಿ ಬಣ್ಣಕ್ಕೆ ತಿರುಗಿದ ಕಾಲುಗಳನ್ನು ಎಳೆದುಕೊಳ್ಳುತ್ತಾ ಮಂಚದ ಬದಿಯಲ್ಲಿ, ಇನ್ನೇನು ಬಿದ್ದು ಬಿಡುವರೋ ಎಂಬಂತೆ ಕಾಲುಚಾಚಿ ಕುಳಿತುಕೊಂಡರು. ಅವರ ಉಪಚಾರಕ್ಕಾಗಿ ಬರುತ್ತಿದ್ದ ದಾದಿಯರೆಲ್ಲಾ ಮೂಕವಿಸ್ಮಿತರಾಗಿ ಅವರ ಸುತ್ತ ನಿಂತುಕೊಂಡರು. ತಾನು ಸಹಿ ಹಾಕಬೇಕಾದ ಕಡೆಗಳಲ್ಲಿ ತುಂಬಾ ಕಷ್ಟದಿಂದ ಆದರೆ ಬಹಳ ಎಚ್ಚರಿಕೆಯಿಂದ ಸಹಿ ಹಾಕಿದರು. ಸಾಕ್ಷಿಗಾಗಿ ನಿಗದಿತರಾದವರಿಂದ ಸಹಿ ಹಾಕಿಸಲಾಯಿತು. ದಾದಿಯರೆಲ್ಲಾ ಗರಬಡಿದವರಂತೆ ನಿಂತೇ ಇದ್ದರು. ಅವರು ಒಪ್ಪಿಗೆಯನ್ನೂ ಸೂಚಿಸಲಿಲ್ಲ; ವಿರೋಧವನ್ನೂ ವ್ಯಕ್ತಪಡಿಸಲಿಲ್ಲ; ಕೇವಲ ಭಾವರಹಿತರಾಗಿ ಹೋಗಿದ್ದರು!!

ಆ ದಿನದಿಂದಲೇ ಅವರ ವಾಸಸ್ಥಳ ಯಾತ್ರಾಸ್ಥಳವಾಯಿತು. ಪ್ರತಿಯೊಬ್ಬರೂ "ಈ ಮಹಾನ್ ವ್ಯಕ್ತಿಯನ್ನು ಒಮ್ಮೆ ಸ್ಪರ್ಶಿಸಿ ಧನ್ಯರಾಗಬೇಕೆಂದು ಬಯಸುತ್ತಿದ್ದರು—ಸುದ್ದಿ ಹರಡಿತು. ಆದರೆ, ಕೇವಲ ಒಬ್ಬಳು ದಾದಿಗೆ ಮಾತ್ರ ಅವರ ಶುಶ್ರೂಷೆ ನಡೆಸುವ ಅನುಮತಿ ಸಿಕ್ಕಿತು. ಆಕೆ ಅವರ ಪ್ರೀತಿಯ ಸೊಸೆಯೇ ಆಗಿದ್ದಳು. ಆಕೆ ದಿನಕ್ಕೆರಡು ಬಾರಿ ಬರುತ್ತಿದ್ದಳು, ಉಪಚರಿಸುತ್ತಿದ್ದಳು. ಬಹಳ ಮೃದುವಾಗಿ ಅವರ ತಿರುಚಿಹೋದ ಮುಖವನ್ನು ಒರೆಸುತ್ತಿದ್ದಳು. ಅವರ ಹಲವಾರು ಪ್ರೀತಿಯ ಅಡ್ಡ ಹೆಸರುಗಳನ್ನು ಹಿಡಿದು ಕರೆದು ಸಂತೋಷಗೊಳಿಸುತ್ತಿದ್ದರು. ಅವರ ವೈದ್ಯರು ಪ್ರತಿದಿನ ವೈದ್ಯರಾಗಿ ಬರದೆ, ಸ್ನೇಹಿತರಾಗಿ ಬರುತ್ತಿದ್ದರು. ತುಂಬಾ ಹೊತ್ತು ಮಾತಾಡಿ ಅವರ ಬೇಸರವನ್ನು ಹೋಗಲಾಡಿಸುತ್ತಿದ್ದರು. ಅವರು ಅಪ್ಪನ ತೀರ್ಮಾನವನ್ನು ಒಪ್ಪಿದ್ದರು.

ಕ್ಯಾನ್ಸರ್ ವೈದ್ಯರು ಆಗಾಗ ಬರುತ್ತಿದ್ದರು. ಅವರು ಅಪ್ಪನ ಬಗ್ಗೆ ಹತಾಶರಾಗದೆ ಇನ್ನೂ ಭರವಸೆ ಇಟ್ಟುಕೊಂಡಿದ್ದರು. ಕ್ಯಾನ್ಸರ್ ರೋಗದ ಬಗ್ಗೆ ನಡೆಯುತ್ತಿದ್ದ ಹಲವಾರು ಪ್ರಗತಿಪರ ಸಂಶೋಧನೆಗಳ ಬಗ್ಗೆ ಅಪ್ಪನಿಗೆ ತಿಳಿಯಹೇಳುತ್ತಿದ್ದರು. ಬಹುಶಃ ಇನ್ನೊಂದು ಶಸ್ತ್ರಕ್ರಿಯೆ ನಡೆಸುವುದು ತುಂಬಾ ಅಗತ್ಯ ಎಂಬುದು ಅವರ ಅಭಿಪ್ರಾಯವಾಗಿತ್ತು. ಆದರೆ, ಅವರು ಎಷ್ಟೇ ಪ್ರಯತ್ನಪಟ್ಟರೂ ಅಪ್ಪನ ಮನಸ್ಸನ್ನು ಬದಲಾಯಿಸಲು ಸಾಧ್ಯವಾಗಲಿಲ್ಲ. ಅವರು ಹೇಳುವುದನ್ನೆಲ್ಲಾ ಅಪ್ಪ ಮನಸ್ಸಿಟ್ಟು ಕೇಳುತ್ತಿದ್ದರು. ಆದರೆ, ತಾನು ಎಷ್ಟೇ ನಿತ್ರಾಣಿಯಾಗಿದ್ದರೂ ತನ್ನ ನಿರ್ಧಾರವನ್ನು ಬದಲು ಮಾಡದ ದೃಢ ಮನಸ್ಸಿನವರಾಗಿದ್ದರು. ತಾನು ಸಹಿ ಹಾಕಿದ ಬಳಿಕ ಮನಸ್ಸಿನ ಬಲುದೊಡ್ಡ ಹೊರೆ ಇಳಿಸಿಕೊಂಡವರಂತೆ ನಿಶ್ಚಿಂತರಾಗಿದ್ದರು. ಅವರು ಸಾವನ್ನು ನಿರೀಕ್ಷಿಸುತ್ತಿದ್ದರು. ಅವರೆಷ್ಟು

ಅಂತರ್ಮುಖಿಯಾಗಿದ್ದರೋ ಹೊರಗಿನ ಆಗುಹೋಗುಗಳನ್ನು ತಿಳಿದುಕೊಳ್ಳುವುದರಲ್ಲೂ ಅಷ್ಟೇ ಕುತೂಹಲಿಯಾಗಿದ್ದರು. ಅವರ ಧೀಃಶಕ್ತಿ ಬಲು ದೊಡ್ಡದು.

ಅವರು ದಾಖಲೆ ಪತ್ರಗಳಿಗೆ ಸಹಿ ಹಾಕಿ ಮೂರು ವಾರಗಳು ಕಳೆದಿರಬಹುದು. ಒಂದು ಮಧ್ಯಾಹ್ನಾನಂತರದ ಸಮಯ. ನಾನು ಅನ್ಯ ಕಾರ್ಯನಿಮಿತ್ತ ಹೊರಹೋಗಬೇಕಾಗಿತ್ತು. ಅಪ್ಪನ ಕೈಯನ್ನು ಮೃದುವಾಗಿ ಚುಂಬಿಸಿ ಹೋಗಿಬರುತ್ತೇನೆ ಎಂದೆ. 'ಆಗಲಿ ಮಗು, ಮತ್ತೆ ನಿನ್ನನ್ನು ನೋಡುತ್ತೇನೆ" ಎಂದು ತಿಳಿನಗುವಿನೊಂದಿಗೆ ಬೀಳ್ಕೊಟ್ಟರು.

ಆ ಸಂಜೆ ನಾನು ಹಿಂತಿರುಗಿ ಬಂದಾಗ ಅಪ್ಪ ಅದೇ ಸ್ಥಿತಿಯಲ್ಲಿದ್ದಂತೆ, ಕಿಟಕಿಯನ್ನು ನೋಡುತ್ತಿದ್ದಂತೆ ಕಂಡಿತು. ಆಗ ತಾನೇ ಸೂರ್ಯಾಸ್ತವಾಗಿ ಪಶ್ಚಿಮ ಆಕಾಶವಿಡೀ ಹೊಂಬಣ್ಣಕ್ಕೆ ತಿರುಗುತ್ತಲಿತ್ತು. ನಾನು ಯೋಚಿಸಿದೆ, ಬಹುಶಃ ಅವರು ತನ್ನ ಸ್ವಾತಂತ್ರ್ಯವನ್ನು ಸವಿಯುತ್ತಿರಬೇಕೆಂದು. ದಾದಿ ಬಿಕ್ಕುತ್ತಾ ಹೇಳಿದಳು '....ಅವರ ....ಹೋಗಿಬಿಟ್ಟರು....' ಎಂದು. ನಾನು ಕಣ್ಣು ಮುಚ್ಚಿಕೊಂಡೆ.

ಒಂದು ನಿಮಿಷ ಹಾಗೆಯೇ ಯೋಚಿಸತೊಡಗಿದೆ. ಅವರು ನನಗಾಗಿ ಬಹಳ ಅಮೂಲ್ಯವಾದ ಪಿತ್ರಾರ್ಜಿತ ಆಸ್ತಿಯನ್ನೇ ಬಿಟ್ಟು ತೆರಳಿದ್ದರು. ಅವರ ತಿಳಿ ಹಾಸ್ಯಭರಿತ, ಮನಸ್ಸನ್ನು ಪ್ರಫುಲ್ಲಗೊಳಿಸುವ ಮಾತುಗಳು, ಜೀವನವನ್ನು ಪ್ರೀತಿಸುವ ಕ್ರಮ, ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸಲು ಬೇಕಾಗುವ ಮನೋಧೈರ್ಯ, ಇನ್ನೊಬ್ಬರ ಮೇಲಿರುವ ಕರುಣೆ, ಸದಾ ಇನ್ನೊಬ್ಬರಿಗಾಗಿ ಮರುಗುವ ಮನಸ್ಸು, ತ್ಯಾಗ ಮನೋಭಾವ ಇವೆಲ್ಲವೂ ಅನುಕರಣೀಯ. ಜೀವನದಲ್ಲಿ ಎಲ್ಲಕ್ಕೂ ಹೆಚ್ಚಾಗಿ ಅವರಿಂದ ನಾನು ತಿಳಿದದ್ದು ಎಂದರೆ, ಗೌರವಯುತವಾಗಿ ಜೀವನ ನಡೆಸುವ ಕ್ರಮ. ಇದರಿಂದಾಗಿ ನಿಶ್ಚಿತ ಉದ್ದೇಶ ಹೊಂದುವಂತಾದೆ. ಮಾತ್ರವಲ್ಲ, ಇದಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಲಾರಂಭಿಸಿದೆ.

ಅವರ ಖಚಿತ ನಿಲುವಿನ ಪರಾಕಾಷ್ಠೆ ಎಂದರೆ ಒಂದು ಸರ್ತಿ ನಿರ್ಣಯಿಸಿದ ನಂತರ ಸ್ವಲ್ಪವೂ ವಿಚಲಿತನಾಗದಿರುವುದು. ಅವರು ಹೇಗಿದ್ದರು ಎಂದು ಅವರ ಭೌತಿಕ ರೂಪವನ್ನು ನೆನೆಸಿಕೊಳ್ಳುವ ಬದಲು, ಹಸನ್ಮುಖರಾಗಿ ಬದುಕಿ, ಆದರ್ಶಪ್ರಾಯರಾಗಿ ಬಾಳಿದರು ಎಂಬುದನ್ನು ನೆನಪಿಸಿಕೊಳ್ಳಬೇಕು ಹಾಗೂ ಅದನ್ನು ಅನುಸರಿಸಲು ಅನುಕರಿಸಲು ಪ್ರಯತ್ನಿಸಬೇಕು.

ಅವರ ಅಂತಿಮ ನಿರ್ಣಯ ಅವರು ನನಗೆ ಕೊಟ್ಟ ಅಮೂಲ್ಯ ಬಹುಮಾನ. ಅವರು ಬದುಕಿ ಬಾಳಿದ ರೀತಿಯನ್ನು ನಾನು ಅತ್ಯಂತ ಹತ್ತಿರದಿಂದ ನೋಡಿದ್ದೇನೆ, ಅರ್ಥಮಾಡಿಕೊಂಡಿದ್ದೇನೆ. ಇವೆಲ್ಲವೂ ನನ್ನ ಮನಸ್ಸಿನಲ್ಲಿ ಸದಾ ಹಸಿರಾಗಿ ಉಳಿಯುತ್ತದೆ. ಅವರು ತಾನು ನಿರ್ಣಯಿಸಿಕೊಂಡಂತೆಯೇ ಬದುಕಿ ಬಾಳಿದರು, ಮಾತ್ರವಲ್ಲ—'ತನಗೆ ಬೇಕಾದ ರೀತಿಯಲ್ಲಿಯೇ ಮರಣವನ್ನು ಬರಮಾಡಿಕೊಂಡರು."

ಅಳುಕು

ಮಾಧವರಾವ್ ಮುಧೋಳ್*

ನನಗೆ ಶೋಭಾಳ ಪರಿಚಯ ಅಷ್ಟೇನು ಇಲ್ಲ. ನಾನು ಮನೆಯಲ್ಲಿ ಕೆಲಸ ಮಾಡುತ್ತ ಕುಳಿತುಕೊಳ್ಳುವ ಕಿಡಿಕೆಯ ಎದುರಿನ ಮನೆಯಲ್ಲಿ ಅವಳು ಇರುತ್ತಾಳೆಂಬುದಷ್ಟು ಗೊತ್ತು. ಅವಳ ಮನೆಯ ಬಾಗಿಲು ನನ್ನ ಮನೆಯ ಕಿಟಕಿಯ ಎದುರಿಗೇ ಇದೆ. ಬಾಗಿಲು ತೆರೆದಾಗಲೆಲ್ಲ ದಿವಸಕ್ಕೆ ಎರಡು ಮೂರು ಸಲ ಕಣ್ಣಿಗೆ ಬೀಳುತ್ತಾಳೆ. ಆ ಮನೆಯ ಹಿಂದಿನ ಭಾಗವನ್ನು ಅವರು ಬಾಡಿಗೆಗೆ ತೆಗೆದುಕೊಂಡಿದ್ದಾರೆ. ನನ್ನ ಅಂದಾಜಿನಲ್ಲಿ ಅವಳು ಸ್ಕೂಲ್ ಟೀಚರ್ ಇರಬೇಕು. ಬೆಳಿಗ್ಗೆ ಸಾಯಂಕಾಲ ಬಾಗಿಲು ತೆರೆದು ಒಂದು ಬೋರ್ಡ್ ಹೊರಗೆ ಇಡುತ್ತಾಳೆ. ಅದರಲ್ಲಿ ಹೀಗೆ ಬರೆದಿರುತ್ತದೆ:

ಹೌಸ್ ಆಫ್ ಕಾಮರ್ಸ್
ಹುಡುಗರು ಹುಡುಗಿಯರಿಗೆ
ಮ್ಯಾಟ್ರಿಕ್ಕಿನಿಂದ ಬಿ.ಎ.ವರೆಗೆ
ಟ್ಯೂಷನ್ ಹೇಳುವ ಒಳ್ಳೆಯ
ವ್ಯವಸ್ಥೆ ಇದೆ.

ಶೋಭಾ ಅಷ್ಟೇನು ಚೆಲುವೆಯಲ್ಲ. ಸುಶಿಕ್ಷಿತಳಾದುದರಿಂದ ಅಚ್ಚುಕಟ್ಟಾಗಿ ಇರುತ್ತಾಳೆ. ಅದರಿಂದ ಆಕರ್ಷಕವಾಗಿ ಕಾಣುತ್ತಾಳೆ. ಮನೆಯಿಂದ ಹೊರಗೆ ಹೊರಡುವಾಗಲೆಲ್ಲ ವಿಧವಿಧವಾದ ಬಟ್ಟೆಗಳನ್ನು ತೊಡುತ್ತಾಳೆ. ಶಲ್ವಾರ್ ಕಮೀಜು ಒಮ್ಮೆ ಹಾಕಿಕೊಂಡರೆ ಇನ್ನೊಮ್ಮೆ ನೀಟಾದ ಸೀರೆ ಬ್ಲೌಜ್ ಧರಿಸುತ್ತಾಳೆ. ಒಮ್ಮೊಮ್ಮೆ ಫ್ರಾಕ್ ಚುನ್ನಿ ಹಾಕಿಕೊಳ್ಳುತ್ತಾಳೆ. ಅವು ಅವಳ ಬಾಬ್‌ಕಟ್ ಕೂದಲಿನ ಮೇಲೆ, ಅಂದವಾಗಿ ಕಾಣುತ್ತವೆ. ಅವಳಿಗೆ ತನ್ನ ಪತಿ–ಪ್ರಾಣ್ ಸುಭ್ರವಾಲ್‌ನ ಮೇಲೆ ಬಹಳ ಪ್ರೀತಿಯಿದೆ ಎಂದು ನನಗನಿಸುತ್ತದೆ. ಏಕೆಂದರೆ ಸಂಜೆಯ ಮಬ್ಬುಗತ್ತಲಿನಲ್ಲಿ ಅನೇಕ ಬಾರಿ ಅವಳು ಮನೆಯ ಹೊರಗಿನ ಓಣಿಯ ಕೊನೆಯಲ್ಲಿ ಪ್ರಾಣ್ ಜೊತೆಗೆ ಕೈಕೈ ಹಿಡಿದುಕೊಂಡು ಹೋಗುವ ಬರುವವರನ್ನೂ ಲೆಕ್ಕಿಸದೆ ಅದೆಷ್ಟೋ ಹೊತ್ತಿನವರೆಗೆ ಹರಟೆ ಹೊಡೆಯುತ್ತಿರುತ್ತಾಳೆ.

ಈ ಓಣಿಯಲ್ಲಿ ಅವಳು ಮನೆ ಬಾಡಿಗೆಗೆ ತೆಗೆದುಕೊಂಡು ಬಹಳ ದಿವಸಗಳಾಗಿಲ್ಲ. ಅವಳು ಪಾಠ ಹೇಳುವುದರಲ್ಲಿ ಚೆನ್ನಾಗಿರಬಹುದು. ಏಕೆಂದರೆ ಇಲ್ಲಿಗೆ ಬರುತ್ತಲೂ ಟ್ಯೂಷನ್ ಕೆಲಸ ಸಿಕ್ಕು ಬಿಟ್ಟಿದೆ. ಅವಳ ಮನೆಗೆ ಹುಡುಗರು ಬಂದು ಹೋಗುವುದು ಕಾಣುತ್ತಿರುತ್ತದೆ.

ಆಧಾರ: ಶ್ರೀ ಎಂ. ಕೆ. ಮೆಹ್‌ತಾಬ್ ಅವರ "ಅಂಕಲ್ ಮೈ ಕ್ಯಾ ಕರೂಂ?" ಎಂಬ ಉರ್ದು ಕಥೆಯ ಅನುವಾದ.

ಅವರ ಮನೆ ಎರಡು ರೂಮಿನದು. ಅವರ ಅವಶ್ಯಕತೆಗೆ ಇಷ್ಟು ಸ್ಥಳ ಸಾಲದು. ಪ್ರಾಣನ ತಂದೆ ತಾಯಿಗಳೂ ಇವರ ಜೊತೆಗೇ ಇರುತ್ತಾರೆ. ಸಂಜೆ ಹುಡುಗರು ಓದಲು ಬಂದಾಗ ಪ್ರಾಣ್ ಬಾಗಿಲಿನ ಹೊರಗಡೆ ಕುರ್ಚಿ ಹಾಕಿಕೊಂಡು ಕುಳಿತಿರುತ್ತಾನೆ. ಇದನ್ನು ನೋಡಿದರೆ ಸ್ಥಳದ ಕೊರತೆ ಇದೆ ಅನಿಸುತ್ತದೆ. ಒಂದೆರಡು ಹುಡುಗರು ಕಾರಿನಲ್ಲೂ ಬರುತ್ತಾರೆ. ಕಾರೂ ಅಲ್ಲಿಯೇ ನಿಂತಿರುತ್ತದೆ. ಶೋಭಾಗೆ ಬಿಡುವಾಗುತ್ತಲು ಒಪ್ಪಾಗಿ ತಿದ್ದಿ ತೀಡಿಕೊಂಡು ಪ್ರಾಣ್ ಜೊತೆಗೆ ಮೋಟರ್ ಸೈಕಲ್ ಮೇಲೆ ವಿಹಾರಕ್ಕೂ ಹೋಗುತ್ತಾಳೆ. ದೂರದಿಂದ ತುಂಬಾ ಆಕರ್ಷಕವಾಗಿ ಕಾಣುತ್ತಾಳೆ.

ಶೋಭಾ ಮತ್ತು ಪ್ರಾಣ್ ಜೊತೆ ನನ್ನ ಯಾವ ನಂಟೂ ಇಲ್ಲ. ಆದರೆ ಹಗಲೂ ರಾತ್ರಿ ನನ್ನೆದುರಿಗೇ ದೃಶ್ಯ ಬದಲಾಗುತ್ತಿರುವುದರಿಂದ ಕಣ್ಣು ಮುಚ್ಚಿಕೊಂಡು ಇರುವುದಕ್ಕೂ ಸಾಧ್ಯವಿಲ್ಲ. ಅದಕ್ಕೋಸ್ಕರ ನನಗೂ ಅವರ ಬಗ್ಗೆ ಸ್ವಲ್ಪ ಆಸಕ್ತಿ ಹೆಚ್ಚುವುದು, ಸಹಜ ಕ್ರಿಯೆಯಾಗಿದೆ. ಅವಳು ಬೆಳಿಗ್ಗೆ ನಿಶ್ಚಿತ ಸಮಯಕ್ಕೆ ಮೋಟರ್ ಸೈಕಲ್ ಮೇಲೆ ಹೋಗುತ್ತಿರುವುದರಿಂದ ಯಾವುದೋ ಸ್ಕೂಲಿನಲ್ಲಿ ಅವಳು ಖಂಡಿತ ಟೀಚರ್ ಆಗಿರಬಹುದೆಂದು ಊಹಿಸಿದ್ದೇನೆ. ಮಧ್ಯಾಹ್ನದಿಂದ ಸಂಜೆಯವರೆಗೆ ಟ್ಯೂಷನ್ ಕೆಲಸ ಮಾಡುತ್ತಿರುತ್ತಾಳೆ.

ಶೋಭಾ ಮತ್ತು ಪ್ರಾಣ್ ಇಬ್ಬರು ಪರಸ್ಪರ ಬಹಳ ಪ್ರೀತಿಯಿಂದಿದ್ದಾರೆ. ಅದಕ್ಕೇ ಎಷ್ಟೋ ಸಲ ಬಹಳ ಕತ್ತಲೆಯಾದರೂ ಓಣಿಯ ಅಂಚಿನಲ್ಲಿ ನಿಂತು ಗುಟ್ಟಾಗಿ ಮಾತನಾಡುತ್ತಿರುತ್ತಾರೆ. ಒಬ್ಬರಿಗೊಬ್ಬರು ಅಂಟಿಕೊಂಡೇ ನಿಂತಿರುತ್ತಾರೆ. ಪರಸ್ಪರರಲ್ಲಿ ಅಷ್ಟು ಅಗಾಧ ಪ್ರೀತಿ ಇರದಿದ್ದರೆ ಅವರು ತಮ್ಮ ಸುತ್ತುಮುತ್ತಲನ್ನೂ ಲಕ್ಷಿಸದೆ ನಾಚದೆ ನಿಂತುಕೊಳ್ಳುತ್ತಿರಲಿಲ್ಲ.

ನನ್ನ ಈ ಅಂದಾಜಿನ ದೃಢೀಕರಣ ಸ್ವತಃ ಶೋಭಾನೇ ಮಾಡಿದಳು. ಒಂದು ಸಂಜೆ ಅವಳು ನನ್ನನ್ನು ಕಾಣಲು ಬಂದಾಗ ಅವಳನ್ನು ಕೇಳಿದೆ.

“ನಿಮಗೆ ಮನೆಯಲ್ಲಿ ಸ್ಥಳದ ಕೊರತೆ ಇದೆಯೆ ?”

ಅವಳು ನನ್ನ ಮಾತಿನ ಅರ್ಥವನ್ನು ತಕ್ಷಣ ತಿಳಿದುಕೊಂಡಳು.

“ಇದಕ್ಕಿಂತ ದೊಡ್ಡ ಮನೆ ಹಿಡಿಯುವುದಕ್ಕೆ ನಮಗೆ ಯೋಗ್ಯತೆ ಇಲ್ಲ. ಒಂದು ರೂಮಿನಲ್ಲಿ ಪ್ರಾಣ್ ತಂದೆ ತಾಯಿಗಳಿದ್ದರೆ ಎರಡನೇ ರೂಮಿನಲ್ಲಿ ಮಕ್ಕಳು ಸ್ಕೂಲಿನ ಕೆಲಸ ಮಾಡುತ್ತಿರುತ್ತಾರೆ. ಅದಕ್ಕಾಗಿ ಮಾತನಾಡಲು ನಾವು ಹೊರಗಡೆ ಬಂದು ಕುಳಿತಿರುತ್ತೇವೆ ಅಥವಾ ಹಿಂದಿನ ಓಣಿಯ ಅಂಚಿನಲ್ಲಿ ನಿಂತಿರುತ್ತೇವೆ. ಹೊರಗಿನವರೆದುರು ಮಾತನಾಡದ ಮನೆತನದ ಅನೇಕ ಸಂಗತಿಗಳಿರುತ್ತವೆ. ಹೀಗಾಗಿ ಹೊರಗೆ ನಿಂತಾಗಲಿ ಕುಳಿತಾಗಲಿ ಮಾತನಾಡುವುದು ತಪ್ಪೇನೂ ಅಲ್ಲ. ಪ್ರಾಣ್ ನನ್ನ ಪತಿ, ಬೇರೆ ಗಂಡಸೇನಲ್ಲ. ನಾವು ಹೀಗೆ ಹೊರಗಡೆ ನಿಂತು ಮಾತನಾಡುವುದು ತಮಗೆ ಸರಿ ಅನಿಸುವುದಿಲ್ಲ. ಅಲ್ಲವೆ ?”

“ಇಲ್ಲ. ಇಲ್ಲ. ನಾನು ಹಾಗೆಂದು ಯಾವಾಗ ಹೇಳಿದೆ ? ನಿರ್ವಾಹವಿಲ್ಲದಾಗ ಮಬ್ಬುಗತ್ತಲಲ್ಲಿ ನಿಂತುಕೊಂಡರಾದರು

ಏನು? ಜನರಿಗೇನು ನೀವು ಸುಮ್ಮನೇ ನಿಂತರೂ ಏನಾದರೂ ಮಾತಾಡುತ್ತಾರೆ. ನೀವು ಒಬ್ಬರೇ ನಿಂತುಕೊಂಡರು ಅದಕ್ಕೂ ಒಂದು ಹೆಸರಿಡುತ್ತಾರೆ."

ನಿಜ ಹೇಳಬೇಕೆಂದರೆ ನಮ್ಮಿಬ್ಬರಲ್ಲಿ ಮಾತು ಪ್ರಾರಂಭವಾದುದು ಹೀಗೆ. ಒಂದು ದಿವಸ ನಮ್ಮ ಮನೆಯಲ್ಲಿ ರೂಮಿನ ಕಿಟಕಿಯ ಹತ್ತಿರ ಕುಳಿತು ಒಂದು ಕಾಗದ ಟೈಪು ಮಾಡುತ್ತಿದ್ದೆ. ಎಲೆಕ್ಟ್ರಿಕ್ ಬಲ್ಬು ನನ್ನ ಕಡೆ ತಿರುಗಿದ್ದುದರಿಂದ ಮುಖದ ಮೇಲೆ ಬೆಳಕು ಬಿದ್ದಿತ್ತು. ನಾನು ಟೈಪು ಮಾಡುತ್ತಿದ್ದ ಶಬ್ದ ಬೀದಿ ದಾಟಿ ಶೋಭಾಳ ಮನೆಯ ಬಾಗಿಲವರೆಗೂ ಕೇಳಿಸುತ್ತಿತ್ತು. ನಾನು ಟೈಪು ಮಾಡುತ್ತಿರುವುದನ್ನು ಕಂಡ ಶೋಭಾ ಮೆತ್ತಗೆ ನನ್ನ ಮನೆ ಬಾಗಿಲಿನಿಂದ ರೂಮಿನೊಳಕ್ಕೆ ಬಂದಳು. ಕಿತ್ತಳೇ ಬಣ್ಣದ ಸೀರೆ ನೀಟಾಗಿ ಉಟ್ಟುಕೊಂಡಿದ್ದಳು. ಕೊರಳಲ್ಲಿ ಕರಿಮಣಿಯ ದಪ್ಪ ಮುತ್ತಿನ ಸರವಿತ್ತು. ಅದು ಗಡಿಯಾರದ ಅವಲಂಬನದಂತೆ ಎದೆಯ ಮೇಲೆ ತೂಗಾಡುತ್ತಿದ್ದಿತು. ಕತ್ತರಿಸಿದ ಕೂದಲುಗಳನ್ನು ಒಪ್ಪಾಗಿ ಬಾಚಿಕೊಂಡುದರಿಂದ ಮುಖಕ್ಕೆ ಒಂದು ಮೆರಗು ಬಂದಿತ್ತು. ಅವಳ ಕಣ್ಣುಗಳಲ್ಲಿ ಯಾಚನೆ ಎದ್ದು ಕಾಣುತ್ತಿತ್ತು. ಅವಳು ಬಾಗಿಲು ಬಳಿ ನಿಂತುದನ್ನು ಕಂಡು,

"ಶೋಭಾ! ಬಾ ಒಳಗೆ. ಏನು ಬಂದೆ?"

"ತಾವು ಟೈಪು ಮಾಡುತ್ತಿರುವುದನ್ನು ನೋಡಿ ನನಗೂ ಒಂದು ಕೆಲಸ ನೆನಪಾಯಿತು."

"ಹೇಳು! ಏನು ಕೆಲಸ?"

"ಅಂಕಲ್! ಇದು ನನ್ನ ಅರ್ಜಿ. ಇದನ್ನು ಟೈಪು ಮಾಡಿ ಬೆಳಗ್ಗೇನೆ ಕಳುಹಿಸಬೇಕಾಗಿದೆ. ತಾವು ದಯವಿಟ್ಟು ಇದನ್ನು ಟೈಪು ಮಾಡಿ ಕೊಡುತ್ತೀರಾ?" ಎಂದು ತನ್ನ ಕೈಯಲ್ಲಿರುವ ಕಾಗದ ನನ್ನ ಕೈಗಿತ್ತಳು.

ಕೈ ಬರಹದ ಆ ಅರ್ಜಿ ಹಾಗೆಯೇ ಒಂದು ಸಲ ನೋಡಿದೆ. ಯಾವುದೋ ಸ್ಕೂಲ್ ಕೆಲಸಕ್ಕೆ ಸೇರುವುದಕ್ಕಾಗಿ ಬರೆದುದಾಗಿತ್ತು. ಶೋಭಾ ಅರ್ಥಶಾಸ್ತ್ರದಲ್ಲಿ ಎಂ.ಎ. ಮಾಡಿಕೊಂಡಿದ್ದಳು. ವಯಸ್ಸು ಇಪ್ಪತ್ತಾರು. ಅದು ಯಾವುದೋ ಸ್ಕೂಲಿಗೆ ಅರ್ಥಶಾಸ್ತ್ರದ ಅಧ್ಯಾಪಕರು ಬೇಕಾಗಿದ್ದರು. ಆ ಕೆಲಸಕ್ಕಾಗಿ ಅವಳು ಅರ್ಜಿ ಕಳಿಸುವವಳಿದ್ದಳು.

"ಈಗ ನೀನು ಎಲ್ಲಿಯೂ ಕೆಲಸ ಮಾಡುತ್ತಿಲ್ಲವೆ?"

"ಇಲ್ಲ ಅಂಕಲ್! ಬೆಳಗ್ಗೆ ಮತ್ತು ಸಾಯಂಕಾಲಕ್ಕೆ ಸ್ವಲ್ಪ ಟ್ಯೂಷನ್ ಇಟ್ಟುಕೊಂಡಿದ್ದೇನೆ."

"ಆದರೆ ಹೋಗುವುದೇನೊ ಹೊತ್ತಿಗೆ ಸರಿಯಾಗಿಯೇ ಹೋಗುತ್ತಿರುತ್ತೀಯೆ?"

"ಹೊತ್ತಿಗೆ ಸರಿಯಾಗಿ ಹೋಗದಿದ್ದರೆ ಟ್ಯೂಷನ್ ಕೆಲಸ ನಡೆಯುವುದಿಲ್ಲ. ಬೆಳಗ್ಗೇನೆ ಯಾವುದೋ ಮನೆಗೆ ಪಾಠ ಹೇಳಲಿಕ್ಕೆ ಹೋಗಬೇಕಾಗುತ್ತದೆ."

ನಾನು ಮೆಷೀನಿಗೆ ಕಾಗದ ಮತ್ತು ಕಾರಬನ್ ಹಾಕಿ ನಾಲ್ಕಾರು ಲೈನು ಟೈಪು ಮಾಡಿದೆ. ಹಾಗೇ ಶೋಭಾಳನ್ನು ಕೆಲವು ಮಾತು ಕೇಳುತ್ತಲೇ ಹೋದೆ. ನಾನು ಟೈಪು ಕಡಿಮೆ, ಮಾತು ಹೆಚ್ಚಿಗೆಯಾಡುತ್ತಿದ್ದೆ. ಶೋಭಾಳ ಮಾತಿನಲ್ಲಿ ಸ್ವಲ್ಪವೂ ಸಂಕೋಚವಿರಲಿಲ್ಲ. ಒಂದು ಪ್ರಶ್ನೆಗೆ ಅದೆಷ್ಟೋ ವಿಷಯ ತಿಳಿಸುತ್ತಿದ್ದಳು.

"ಈ ನೌಕರಿ ಜಂಜಾಟದಲ್ಲಿ ಬೀಳುವುದಕ್ಕಿಂತ ಸಾಕಷ್ಟು ಟ್ಯೂಷನ್ಸ್ ಸಿಕ್ಕರೆ, ಈ ನೌಕರಿ ಏಕೆ ಮಾಡಬೇಕೆನ್ನುವೆ ?"

"ಮೊದಲನೆಯದು, ಈ ಟ್ಯೂಷನ್ ಕೆಲಸ ಖಾಯಂ ಅಲ್ಲ. ಒಬ್ಬನು ಬರುತ್ತಾನೆ, ಇನ್ನೊಬ್ಬ ಬಿಟ್ಟು ಹೋಗುತ್ತಾನೆ. ಎರಡನೆಯದು, ಜನ ನನ್ನ ಕಡೆ ಬರುವುದು ನಾನು ಎರಡನೆಯವರ ಮನೆಗೆ ಟ್ಯೂಷನ್ ಹೇಳಲು ಹೋಗುವುದು ಪ್ರಾಣ್‌ಗೆ ಇಷ್ಟವಿಲ್ಲ."

"ಹಾಗಾದರೆ ನಿನ್ನನ್ನು ಖಾಲೀ ಕೂಡಿಸಿ ಕತ್ತಲೇಲಿ ನಿಂತು ಮಾತನಾಡುತ್ತಾನಂತೇನು ?"

"ಅಂಕಲ್ ! ಏನು ಮಾಡುವುದು. ನಮ್ಮ ಮದುವೆ ಪ್ರೇಮದ ಮದುವೆ. ಅದನ್ನು ತಾವು ಲವ್ ಮ್ಯಾರೇಜ್ ಅನ್ನಬಹುದು. ಲವ್ ಮ್ಯಾರೇಜ್ ಮಾಡಿಕೊಳ್ಳುವುದೇನೋ ಸುಲಭ. ನಿಭಾಯಿಸುವುದು ಬಹಳ ಕಷ್ಟ. ಮನುಷ್ಯರು ಅದೇಕೊ ಯಾವಾಗಲೂ ಒಬ್ಬರಿಗೊಬ್ಬರು ತೀರ ಹತ್ತಿರವಿರಬೇಕೆನ್ನುತ್ತಾರೆ. ಜೀವನ ಸಂಗಾತಿ ಎಲ್ಲಿ ದೂರ ಹೊರಟು ಹೋಗಬಹುದೋ, ಬಿಟ್ಟೇಬಿಡಬಹುದೋ ಎಂಬ ಭಯ ಸದಾ ಅವರನ್ನು ಕಾಡುತ್ತಿರುತ್ತದೆ. ಎರಡನೆಯದೆಂದರೆ ನಮ್ಮಲ್ಲಿ ಇರಲು ಸ್ಥಳವೂ ಬಹಳ ಕಡಿಮೆ ಎರಡು ರೂಮಿನ ಮನೆ. ಒಂದರಲ್ಲಿ ತಂದೆ ತಾಯಿಗಳು. ಇನ್ನೊಂದರಲ್ಲಿ ನಾವು. ಯಾವಾಗಾದರೊಮ್ಮೆ ಅತಿಥಿಗಳೂ ಬಂದು ಬಿಡುತ್ತಾರೆ. ಮಕ್ಕಳು ಸ್ಕೂಲಿನ ಕೆಲಸವನ್ನು ಅಲ್ಲಿಯೇ ಕುಳಿತು ಮಾಡುತ್ತಾರೆ. ಅದೆಷ್ಟೋ ವಿಷಯ ಮಾತಾಡುವುದಿರುತ್ತದೆ. ಅದಕ್ಕೆ ಯಾರು ಒಳ್ಳೆಯದೆಂದು ತಿಳಿಯಲಿ ಬಿಡಲಿ ನಾವಂತೂ ಮನೆ ಹೊರಗೆ ನಿಂತುಕೊಳ್ಳಲೆ ಬೇಕಾಗುತ್ತದೆ."

"ನನಗೆ ಆ ಬಗ್ಗೆ ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಮನೆ ಇದ್ದೂ ಹೊರಗಡೆ ನಿಂತು ಮಾತಾಡಿದರೆ, ಅದೂ ಮನೆತನದ ಮಾತೋ ಅಥವ ಪ್ರೀತಿಯ ಗುಟ್ಟಿನ ಮಾತೋ, ನೋಡುವವರು ಭೇದ ಮಾಡಲಾರರು—ಮೊದ ಮೊದಲು ನಾನೂ ನೀವು ಇಷ್ಟು ಹತ್ತಿರ ನಿಂತಿರುವುದನ್ನು ಕಂಡು ಜೊತೆಗೆ ನಿಂತವರು ಪತಿಯೋ ಅಥವ ಬೇರೆಯವರೋ ಎಂದು ಸ್ವತಃ ಆಲೋಚಿಸುತ್ತಿದ್ದೆ."

"ಅಂಕಲ್ ! ತಾವು ಸರಿಯಾಗಿಯೇ ಹೇಳಿದಿರಿ. ಆದರೆ ನಾವು ಇದಕ್ಕಿಂತಲೂ ಹೆಚ್ಚಿಗೆ ಬಾಡಿಗೆಯನ್ನು ಕೊಡಲಾರೆವು. ಎರಡೂವರೆ ಸಾವಿರ ರೂಪಾಯಿಗಳನ್ನು ಈ ಮನೆ ಒಳ್ಳೆಯ ಸ್ಥಳದಲ್ಲಿದೆಯೆಂದು ಕೊಡುತ್ತಿದ್ದೇವೆ. ನನ್ನ ಹೌಸ್ ಆಫ್ ಇಕ್ವಾವಿರ್ಕ್ಸ್ ಬೋರ್ಡ್ ನೋಡಿ, ಪ್ರತಿ ತಿಂಗಳು ಕೆಲವು ಟ್ಯೂಷನ್ ಕೆಲಸ ಸಿಕ್ಕುತ್ತದೆ."

"ಏನು ? ಪ್ರಾಣನ ಸಂಬಳದಿಂದ ಮನೆತನ ನಡೆಯುವುದಿಲ್ಲವೆ ?"

"ಅಂಕಲ್ ! ಪ್ರಾಣ್ ಯುನಿವರ್ಸಿಟಿಯಲ್ಲಿ ಲೈಬ್ರೇರಿಯನ್ ಆಗಿದ್ದಾನೆ. ಏನೋ ಐದು ಸಾವಿರ ಹತ್ತಿರ ಹತ್ತಿರ ಸಂಬಳ ಪಡೆಯುತ್ತಿದ್ದಾನೆ. ಇಷ್ಟರಿಂದ ಮನೆತನದ ಎಲ್ಲ ಖರ್ಚು ಹೇಗೆ ನಿಭಾಯಿಸಲಿಕ್ಕಾಗುತ್ತದೆ?"

"ಈ ಮಾತನ್ನು ನೀನು ಮದುವೆಯಾಗುವ ಮೊದಲು ಯೋಚಿಸಿರಲಿಲ್ಲವೆ ?"

"ಅಂಕಲ್ ! ಪ್ರೇಮ ಕುರುಡಲ್ಲವೆ ? ಅದಕ್ಕೆ ಕಣ್ಣುಗಳೆಲ್ಲಿರುತ್ತವೆ ? ನಾನು

ಎಂ.ಎ. ಮೊದಲ ವರ್ಷಕ್ಕೆ ಸೇರಿದಾಗ ಲೈಬ್ರರಿಯಲ್ಲಿ ಪ್ರಾಣ್‌ನನ್ನು ಭೇಟಿಯಾಗಿದ್ದೆ. ಅದಾದನಂತರ ಲೈಬ್ರರಿಯಲ್ಲಿ ಬಹಳ ಹೊತ್ತಿನವರೆಗೆ ನಿತ್ಯ ಕುಳಿತು ಕುಳಿತು, ಪರಿಣಾಮ ಏನಾಯಿತೆಂದರೆ, ನಾನು ಮನೆಯವರು ಸೂಚಿಸಿದ ವರನನ್ನು ನಿರಾಕರಿಸಿ, ಪ್ರಾಣನನ್ನು ಪ್ರೀತಿಸುತ್ತೇನೆಂದು ಹೇಳಿದೆ.

ಶಿಕ್ಷಣ ಸಾಗಿದ್ದಾಗಲೇ ನನ್ನ ಮದುವೆಯಾಯಿತು. ಮದುವೆ ನಡೆಯುತ್ತಿರುವಾಗಲೇ ನನಗೆ ನನ್ನ ಪ್ರೀತಿಯ ಬೆಲೆಯನ್ನು ತೀರಿಸಬೇಕಾಗಬಹುದೆಂದು ಅನಿಸಿತ್ತು. ಪ್ರಾಣನ ಮನೆತನದ ಭಾರವನ್ನು ಅರಿತು, ಅವನ ಜೊತೆಗೆ ನಾನೂ ಕೆಲಸಕ್ಕೆ ಸೇರಬೇಕಾಗುವುದೆಂದೂ ಗ್ರಹಿಸಿದ್ದೆ. ಈ ವಿಚಾರದಿಂದಲೇ ಮದುವೆಯಾದ ಮೇಲೂ ನಾನು ನನ್ನ ಶಿಕ್ಷಣವನ್ನು ಮುಂದುವರೆಸಿ ಎಂ.ಎ. ಕೋರ್ಸ್ ಮುಗಿಸಿಕೊಂಡೆ.

ನನ್ಮ ಅತ್ತೆಯ ಮನೆಯಲ್ಲಿ ಅಣ್ಣತಮ್ಮಂದಿರ ನಡುವೆ ಜಗಳ ಪ್ರಾರಂಭವಾಗಿ ಮುಗಿಯದಂತಾದಾಗ, ನಾವು ತಂದೆ ತಾಯಿಗಳನ್ನು ಜೊತೆಗೆ ಕರೆದುಕೊಂಡು ಆ ಅಣ್ಣತಮ್ಮಂದಿರಿಂದ ಬೇರೆಯಾದೆವು. ಹಾಗೆ ನೋಡಿದರೆ ಆ ಚಿಕ್ಕಮನೆಯ ಜನ ಜಂಗುಳಿಯಿಂದ ನಾನು ದೂರವೇ ಇರಬೇಕೆಂದಿದ್ದೆ. ಏಕೆಂದರೆ ಅಲ್ಲಿ ಪ್ರಾಣನನ್ನೂ ಏಕಾಂತದಲ್ಲಿ ಕಾಣುವ ಅವಕಾಶವೇ ಬಹಳ ಕಡಿಮೆ ಸಿಕ್ಕುತಿತ್ತು. ಮನೆತನದ ಜವಾಬ್ದಾರಿಯನ್ನು ಅರಿತು ಅಲ್ಲಲ್ಲಿ ಕೆಲಸಕ್ಕೆ ನಾನೂ ಬಹಳ ಪ್ರಯತ್ನಿಸಿದೆ. ಎಷ್ಟೋ ಕಡೆಗೆ ಅರ್ಜಿಯನ್ನೂ ಕೊಟ್ಟೆ. ಆದರೂ ಎಲ್ಲಿಯೂ ಸರಿಯಾದ ಕೆಲಸ ಸಿಕ್ಕಲಿಲ್ಲ. ಸಿಕ್ಕರೂ ಬಹಳ ಕಡಿಮೆ ಸಂಬಳ ಸಿಕ್ಕುತಿತ್ತು. ಅದರಿಂದಾಗಿ ನಾನು ಈ ಟ್ಯೂಷನ್ ಹೇಳುವ ಕೆಲಸ ಪ್ರಾರಂಭಿಸಿದೆ. ಇದಕ್ಕೂ ಮೊದಲು ನಾನು ಯಾವ ಮನೆಯಲ್ಲಿದ್ದೆ ಅಲ್ಲಿ ನಾನು ಓಣಿಯ ಮಕ್ಕಳೆಲ್ಲರನ್ನೂ ಸೇರಿಸಿಕೊಂಡು ಗುಂಪುಗಳನ್ನಾಗಿ ಮಾಡಿಕೊಂಡು ಪಾಠ ಹೇಳುತ್ತಿದ್ದೆ. ಆದರೆ ಆ ಬಾಡಿಗೆ ಮನೆಯ ಒಡೆಯನಿಗೆ ಗದ್ದಲ ಗಲಾಟೆ ಆಗುತ್ತಿರಲಿಲ್ಲ. ಅದಕ್ಕಾಗಿ ಅವನು ನಮ್ಮನ್ನು ಮನೆ ಬಿಡುವಂತೆ ಒತ್ತಾಯಿಸಿದ. ನಾವು ಈ ಮನೆಯನ್ನು ಈಗ ಬಾಡಿಗೆ ತೆಗೆದುಕೊಂಡಿದ್ದೇವೆ. ಆದರೆ ಇದರ ಬಾಡಿಗೆ ನಮ್ಮ ಅಳತೆಗೆ ಮೀರಿದೆ. ಪ್ರಾಣ್ ಮೂರು ಸಾವಿರ ಹತ್ತಿರ ಹತ್ತಿರ ಖರ್ಚನ್ನು ನಿಭಾಯಿಸಲಾರ. ಅವನ ಈ ಭಾರ ಕಡಿಮೆ ಮಾಡುವುದಕ್ಕಾಗಿ ಈ ಜವಾಬ್ದಾರಿಯನ್ನು ನಾನು ಹೊತ್ತುಕೊಂಡಿದ್ದೇನೆ. ಬೇಗ್ಗೆ ಒಂದು ಗಂಟೆ ಟ್ಯೂಷನ್ ಹೇಳಲು ಹೋಗುತ್ತೇನೆ. ಅಲ್ಲಿ ಐದುನೂರು ರೂಪಾಯಿ ಸಿಕ್ಕುತ್ತದೆ. ಮಧ್ಯಾಹ್ನದ ನಂತರ ಸ್ವಲ್ಪ ಹೊತ್ತು ಮಕ್ಕಳು ಹೋಮ್‌ವರ್ಕ್ ಮಾಡುವುದಕ್ಕೆ ಬಂದು ಬಿಡುತ್ತವೆ. ಅವರಿಂದ ಸಾವಿರ ರೂಪಾಯಿ ಸಿಕ್ಕುತ್ತದೆ. ಸಂಜೆಗೆ ಮಾಡಲ್ ಟೌನಿನ ಒಂದು ರೂಮಿನಲ್ಲಿ ಎರಡು ಗಂಟೆಯ ಕಾಲ ಒಬ್ಬ ಹುಡುಗ ಮತ್ತು ಒಂದು ಹುಡುಗಿಗೆ ಪಾಠ ಹೇಳಲು ಹೋಗುತ್ತೇನೆ. ಎರಡು ಸಾವಿರ ರೂಪಾಯಿಗಳನ್ನು ಅವರು ಕೊಡುತ್ತಾರೆ. ಈ ರೀತಿಯಿಂದಾಗಿ ಮನೆಯ ಖರ್ಚೂ ನಡೆದು ಹೋಗುತ್ತದೆ. ಅವರಲ್ಲಿ ನನ್ನ ಸ್ವಂತ ಖರ್ಚಿಗಾಗಿಯೂ ಸ್ವಲ್ಪ ಹಣ ಉಳಿಯುತ್ತದೆ."

"ನಿನಗೆ ಇಷ್ಟು ಹಣ ಸಿಕ್ಕುತ್ತಿರುವಾಗ, ಯಾವ ಬಂಧನಗಳೂ ಇಲ್ಲದಿರುವಾಗ ಕೆಲಸಕ್ಕಾಗಿ ಮತ್ತೆ ಅರ್ಜಿಯನ್ನು ಏಕೆ ಹಾಕುತ್ತಿರುವೆ?" ಎನ್ನುತ್ತ ಟೈಪ್‌ರೈಟರ್ ಮೇಲೆ ಎರಡು ಲೈನು ಟೈಪು ಮಾಡಿದೆ.

"ಅಂಕಲ್! ನಾನು ಅತ್ಯಂತ ಪ್ರೀತಿಸುತ್ತಿರುವ ಪ್ರಾಣನಿಗೆ ನಾನು ಟ್ಯೂಷನ್ ಮಾಡುವುದು ಇಷ್ಟವಿಲ್ಲ."

"ಏಕೆ? ಅವನಿಗೆ ಹಣ ಸಿಕ್ಕುವುದು ಚೆನ್ನಾಗನಿಸುತ್ತಿಲ್ಲವೆ? ನೀನು ಹಣವನ್ನು ತರದಿದ್ದರೆ ಮನೆತನ ಹೇಗೆ ನಡೆಯುವುದು?"

"ಅಂಕಲ್! ನನಗೆ ಎಲ್ಲ ತಿಳಿಯುತ್ತದೆ. ಆದರೆ ನಾನು ಮೊದಲಿಗೆ ಹೇಳಿದ ಹಾಗೆ ಈ ಪ್ರೇಮ ವಿವಾಹ ಚೆನ್ನಾಗಿರುವುದಿಲ್ಲ, ಯಾವಾಗಲೂ ಸಂಶಯಕ್ಕೆ ಜನ್ಮ ಕೊಡುತ್ತದೆ. ಪ್ರಾಣ್ ಬಯಸುವುದು, ಅವನು ಮನೆಗೆ ಬಂದಾಗ ನಾನು ಮನೆಯಲ್ಲಿರಬೇಕು. ಅವನು ಹೊರಗೆ ಹೋಗುವವರೆಗೂ ನಾನು ಎಲ್ಲಿಯೂ ಹೋಗಬಾರದು.

"ಏಕೆ? ಅವನೇನಾದರು ನಿನ್ನ ಮೇಲೆ ಸಂಶಯ ಪಡುತ್ತಿದ್ದಾನೆಯೆ?"

"ಅದು ನನಗೆ ಗೊತ್ತಿಲ್ಲ. ಆದರೆ ನಾನು ಇಷ್ಟು ಖಂಡಿತ ತಿಳಿದುಕೊಂಡಿದ್ದೇನೆ. ಪ್ರೇಮದ ಈ ವಿವಾಹದಲ್ಲಿ, ಪ್ರೇಮಿಗಳಿಗೆ ಸಂಶಯ ಬಹಳ ಬೇಗ ಬರುತ್ತದೆ. ವಿಶ್ವಾಸ ಯಾವಾಗಲೂ ಪಣಕ್ಕೆ ಹಚ್ಚಿದಂತಿರುತ್ತದೆ. ಸಂಶಯ ನನಗೂ ಬರುತ್ತದೆ. ಏಕೆಂದರೆ ಪ್ರಾಣ ದಿನವಿಡೀ ಲೈಬ್ರರಿಯಲ್ಲಿ ಹುಡುಗಿಯರ ಮಧ್ಯೆಯೇ ಇರುತ್ತಾನೆ. ಅವನಿಗೆ ನನ್ನ ಜೊತೆ ಪ್ರೇಮ ಆದ ಹಾಗೆ ಬೇರೆ ಹುಡುಗಿಯ ಜೊತೆಗೂ ಆಗಬಹುದಾಗಿದೆ. ಆದರೆ ನಾನು ಎಂದೂ ಹಾಗೆಂದು ಅವನಿಗೆ ಹೇಳಿಲ್ಲ."

"ಹಾಗಾದರೆ ಅವನೇನಾದರು ಅಂಥ ಮಾತನ್ನು ಆಡಿದ್ದಾನೆಯೆ?"

"ಅಂಥ ಮಾತನ್ನಂತೂ ಅವನೂ ಇದುವರೆಗೂ ಆಡಿಲ್ಲ. ಆದರೆ ಅವನು ಟ್ಯೂಷನ್ ಕೆಲಸಕ್ಕೆ ನಾನು ಹೋಗುವುದಕ್ಕೆ ಏಕೆ ಬೇಡವೆನ್ನುತ್ತಿದ್ದಾನೆಂಬುದನ್ನು ಯೋಚಿಸುತ್ತಿರುತ್ತೇನೆ. ಖಂಡಿತವಾಗಿಯು ಅವನಿಗೆ ನನ್ನ ಚಲನವಲನದ ಮೇಲೆ ಸಂಶಯ ಉಂಟಾಗಿದೆ. ಅವನ ಸಂಶಯ ಹೋಗಲಾಡಿಸುವುದಕ್ಕಾಗಿಯೇ ಎಲ್ಲಿಯಾದರೂ ಒಂದು ಖಾಯಂ ಕೆಲಸ ಮಾಡಬೇಕೆಂದಿದ್ದೇನೆ. ಅವನ ಮೇಲೆ ನನಗೆ ಬಹಳ ಪ್ರೀತಿ ಇದೆ. ನನ್ನ ಸಲುವಾಗಿ ಈ ಪ್ರೀತಿ ಸಂಬಂಧನಲ್ಲಿ ಬಿರುಕು ಬರಬಾರದೆಂಬುದು ನನ್ನ ಇಚ್ಛೆ."

"ಕೊನೆಗೆ ಅವನಿಗೆ ಈ ಸಂಶಯ ಏಕಿದೆ? ಟ್ಯೂಷನ್ ಹೇಳುವುದು ಅಪರಾಧವೇನಲ್ಲ!"

"ಅಂಕಲ್! ನಾನು ಸಂಜೆ ಮಾಡಲ್ ಟೌನಿನಲ್ಲಿ ಯಾವ ಗುತ್ತೇದಾರನ ದೊಡ್ಡ ಮನೆಗೆ ಪಾಠ ಹೇಳಲು ಹೋಗುತ್ತೇನೊ ಅವನಿಗೆ ಒಬ್ಬ ಹುಡುಗ ಒಬ್ಬ ಹುಡುಗಿ ಇದ್ದಾರೆ. ಅವರು ಲಕ್ಷಾಧಿಪತಿಗಳು. ಪ್ರಪಂಚದ ಪ್ರತಿಯೊಂದು ಸೌಕರ್ಯವೂ ಅವರಿಗಿದೆ. ಅವರಿಗೆ ಶಿಕ್ಷಣ ಪಡೆಯಬೇಕೆಂಬ ಅಗತ್ಯವೇ ಇಲ್ಲ. ಆ ಇಬ್ಬರು ಸೋದರ ಸೋದರಿಯರು ಎಷ್ಟೋ ಸಲ ಫೇಲೂ ಆಗಿದ್ದಾರೆ. ಹುಡುಗ ಇಪ್ಪತ್ತೆರಡು ಇಪ್ಪತ್ಮೂರು ವರ್ಷದವನಿದ್ದಾನೆ. ಆದರೆ ಇದುವರೆಗೂ ಬಿ.ಎ. ಪಾಸು ಮಾಡಿಕೊಂಡಿಲ್ಲ. ಹುಡುಗಿ ಅವನಿಗಿಂತಲೂ

ಮದಡಿ. ಅವರು ಗ್ರ್ಯಾಜ್ಯುವೇಟಾದರೂ ಆವಶ್ಯ ಆಗಬೇಕೆಂಬುದು ಅವರ ತಂದೆಯ ಆಶೆ. ಆದರೆ ಆ ಮಕ್ಕಳು ಊಟ ತಿಂಡಿ ಆಟ ಪಾಟಗಳ ಕಡೆಗೇ, ಶಿಕ್ಷಣಕ್ಕಿಂತಲೂ ಹೆಚ್ಚಿನ ಗಮನಕೊಡುತ್ತಾರೆ. ಅವರು ನನಗೆ ಒಂದೂವರೆ ಎರಡು ಗಂಟೆಗಳ ಟ್ಯೂಷನ್ನಿಗೆ ಪ್ರತಿಫಲವಾಗಿ ಎರಡು ಸಾವಿರ ರೂಪಾಯಿ ಕೊಡುತ್ತಾರೆ. ತಡವಾದಾಗ ಆ ಹುಡುಗ–ಅನುರಾಗ–ಗಾಡಿಯಲ್ಲಿ ನನ್ನನ್ನು ಮನೆಗೆ ಬಿಟ್ಟು ಹೋಗುತ್ತಾನೆ. ನನಗೆ ಅವರು ಟ್ಯಾಕ್ಸಿಯಲ್ಲಿ ಬರಲು ಹೇಳುತ್ತಾರೆ. ಏಕೆಂದರೆ, ಅವರ ಮೇಷ್ಟ್ರು ಗಾಡಿಯಲ್ಲಿ ಬರುವುದು ಅವರಿಗೊಂದು ಹೆಮ್ಮೆ. ಎಷ್ಟೋ ಸಲ ನಾನು ಮನೆಗೆ ಬರುವಾಗ, ಅವರು ಮಿಠಾಯಿ ಹಣ್ಣು ಹಂಪಲುಗಳನ್ನು ಕೊಡುತ್ತಾರೆ. ನಾನೂ ಸಂಪೂರ್ಣ ಮನಸ್ಸುಗೊಟ್ಟು ಅವರಿಗೆ ಓದಿಸುತ್ತೇನೆ. ಆದರೆ ಅವರು ಟ್ಯೂಷನ್ ಒಂದು ಆಟವೆಂದು ತಿಳಿದಿದ್ದಾರೆ. ಪರೀಕ್ಷೆಯಲ್ಲಿ ಅವರು ಪಾಸಾಗುವರೆಂದು ನನಗನಿಸುವುದಿಲ್ಲ."

"ನೀನು ಅಲ್ಲಿಗೆ ಹೋಗುವುದು ಪ್ರಾಣನಿಗೆ ಇಷ್ಟವಿರದಿದ್ದರೆ, ಟ್ಯೂಷನ್ ಬಿಟ್ಟುಬಿಡು."

"ಅಂಕಲ್! ನಾನು ಹೇಗೆ ಬಿಡಲಿ? ಎರಡು ಎರಡೂವರೆ ಸಾವಿರ ರೂಪಾಯಿಗಳು ನನಗೆ ಮತ್ತೆಲ್ಲಿಂದ ದೊರೆಯುತ್ತವೆ? ಆ ಹಣದಿಂದ ನನ್ನ ಎಷ್ಟು ಅವಶ್ಯಕತೆಗಳು ಪೂರೈಸುವವೆಂಬುದು ನನಗೇ ಗೊತ್ತು."

"ಶೋಭಾ! ಮನೆಯಲ್ಲಿ ಪ್ರಾಣನಿಗೆ ಒಬ್ಬನೇ ಇರುವುದು ಚೆನ್ನಾಗನಿಸುವುದಿಲ್ಲೆಂದು, ನನಗನಿಸುತ್ತದೆ. ಆದಕ್ಕಾಗಿಯೇ ಅವನು ನೀನು ಅಲ್ಲಿರಬೇಕೆಂದು ಬಯಸುತ್ತಾನೆ. ನಿನಗೊಂದು ಮಗುವಾಗಿದ್ದರೆ ಅವನ ಲಕ್ಷ್ಯ ಬೇರೆ ಕಡೆಗೆ ಹಂಚಿ ಹೋಗುತಿತ್ತು. ಆಗ ನಿನ್ನ ಅವಶ್ಯಕತೆಯನ್ನು ಅವನು ಹೆಚ್ಚಿಗೆ ಬಯಸುತ್ತಿರಲಿಲ್ಲ. ನಿನ್ನ ಲಗ್ನವಾಗಿ ಈಗ ಎಷ್ಟು ವರ್ಷಗಳಾದವು?"

"ಐದು ವರ್ಷ."

"ಓ! ಹಾಗಾದರೆ ಸರಿ. ಅವನಿಗೀಗ ಈ ಕೊರತೆ ಅನಿಸುತ್ತದೆ."

"ನನಗೆ ಮಗುವಾಗುವುದಿದೆ." ತುಟಿಯಂಚಿನಲ್ಲೇ ಮೃದುವಾಗಿ ನಕ್ಕು ಶೋಭಾ ನುಡಿದಳು.

"ಹಾಗಾದರೆ ಪ್ರಾಣನಿಗೆ ಬಹಳ ಬಹಳ ಸಂತೋಷವಾಗುವುದು. ಅವನಿಗೆ ಇದನ್ನು ನೀನು ಹೇಳಿಲ್ಲವೆ?"

"ಇಲ್ಲ."

"ಏಕೆ?"

"ಈ ವಿಷಯ ಪ್ರಾಣನಿಗೆ ಹೇಳಲು ಭಯವಾಗುತ್ತದೆ. ಈ ಮಗು ಅನುರಾಗನದು ಇರಬಹುದು ಎಂದು ಅವನೆಂದುಬಿಟ್ಟರೆ! ಇಲ್ಲದಿದ್ದರೆ ಮೊದಲಿನ ಐದು ವರ್ಷ ಏಕಾಗಲಿಲ್ಲ? ಎಂದರೆ. ಅಂಕಲ್! ನಾನೇನು ಮಾಡಲಿ?"

ಟೈಪ್‌ರೈಟರ್ ಮೇಲೆ ನನ್ನ ಬೆರಳುಗಳು ವೇಗದಿಂದ ಚಲಿಸತೊಡಗಿದವು.

ಮಗುವಿನ ಆಸಕ್ತಿ ಅರಳಲಿ

ಗೋಪಾಲ ಆಶ್ರಿತ

ಇದೊಂದು ವಿಚಿತ್ರ ದೃಶ್ಯ: ಒಬ್ಬ ಮನುಷ್ಯ ಕಾರಂಜಿಯೊಂದರಿಂದ ಬೀಳುತ್ತಿದ್ದ ನೀರನ್ನು ನೋಡುತ್ತ ನಿಂತಿದ್ದನು. ಕಾರಂಜ ನೋಡುತ್ತಿದ್ದಂತೆ ಒಂದು ಬದಿಯಿಂದ ಇನ್ನೊಂದು ಬದಿಗೆ ತಲೆ ಅಲ್ಲಾಡಿಸುತ್ತಿದ್ದನು. ಸ್ವಲ್ಪ ಹತ್ತಿರ ಹೋಗಿ ನೋಡಿದಾಗ ಆ ವ್ಯಕ್ತಿ ತನ್ನ ಬಲಗೈಯನ್ನು ಮುಖದ ಮುಂದೆ ಹಿಡಿದು ಬೆರಳುಗಳನ್ನು ಅವಸರದಿಂದ ಮೇಲೆ ಕೆಳಗೆ ಚಲಿಸುತ್ತಿದ್ದನು. ಆಗ ನನ್ನ ವಯಸ್ಸು ೧೧ ವರ್ಷ ವಿಜ್ಞಾನದ ವಿದ್ಯಾರ್ಥಿಗಳಾಗಿದ್ದ ನಾವು ಪ್ರಿನ್ಸಟನ್ ವಿಶ್ವವಿದ್ಯಾಲಯ ನೋಡಲು ಹೋಗಿದ್ದೆವು. ಕಾರಂಜಿಯ ಹತ್ತಿರ ನಿಂತಿದ್ದ ವ್ಯಕ್ತಿ ಅಲ್ಬರ್ಟ್ ಐನ್‌ಸ್ಟೈನ್!

ತನ್ನ ಬೆರಳುಗಳನ್ನು ಕೆಳಗೆ ಮೇಲಾಡಿಸುವುದನ್ನು ಕೆಲವು ನಿಮಿಷಗಳವರೆಗೆ ಹಾಗೆಯೇ ಮುಂದುವರೆಸಿದ್ದನು. ಅನಂತರ ಬದಿಗೆ ತಿರುಗಿ “ನೀನು ಈ ರೀತಿ ಮಾಡುವಿಯಾ? ನೀನು ಕೂಡಾ ಪ್ರತ್ಯೇಕವಾದ ಹನಿಗಳನ್ನು ನೋಡಬಲ್ಲೆಯಾ?” ಎಂದು ಕೇಳಿದನು. ನಾನು ನನ್ನ ಮುಖಕ್ಕೆ ಕೈಹಿಡಿದು ಬೆರಳುಗಳನ್ನು ಕೆಳಗೆ ಮೇಲೆ ಚಲಿಸಿದೆ. ಕೆಲವೇ ಕ್ಷಣಗಳಲ್ಲಿ, ಕಾರಂಜಿಯ ನೀರೆಲ್ಲ ಹೆಪ್ಪುಗಟ್ಟಿ, ಪ್ರತ್ಯೇಕ ಹನಿಗಳಾದಂತೆ ಕಂಡವು ಸ್ವಲ್ಪ ಸಮಯದವರೆಗೆ ನಾವಿಬ್ಬರೂ ಅಲ್ಲಿಯೇ ನಿಂತು ಇದೇ ಪ್ರಯೋಗದಲ್ಲಿ ಪರಿಪೂರ್ಣತೆ ಪಡೆಯಲೆತ್ನಿಸಿದೆವು. ಮರಳಿ ಹೊರಡುವ ಸಮಯ ಬಂದಾಗ ಆ ಹಿರಿಯ ಪ್ರಾಧ್ಯಾಪಕ ನನ್ನ ಕಡೆಗೆ ನೇರ ದೃಷ್ಟಿ ಹರಿಸಿ “ವಿಜ್ಞಾನವೆಂಬುದು ಈ ತೆರನಾದ ಶೋಧನೆ ಮತ್ತು ವಿನೋದವೆಂಬುದನ್ನು ಮರೆಯಬೇಡ” ಎಂದು ಹೇಳಿದನು.

ಆ ಘಟನೆ ನಡೆದು ಅರ್ಧಶತಮಾನ ಕಳೆದಿದೆ. ಅಂದು ಐನಸ್ಟೈನ್ ಹೇಳಿದ್ದ ಮಾತುಗಳನ್ನು ನನ್ನ ವೃತ್ತಿ ಜೀವನದಲ್ಲಿ ಅನುಸರಿಸಿದ್ದಲ್ಲದೆ, ವಿಶ್ವದಾದ್ಯಂತ ಅನೇಕ ತರುಣರಿಗೆ ಹಾಗೂ ಮಕ್ಕಳಿಗೆ “ಶೋಧನೆಯೇ ವಿಜ್ಞಾನ, ಶೋಧನೆಯೇ ವಿನೋದ” ಎಂಬುದನ್ನು ಬೋಧಿಸುತ್ತ ಬಂದಿದ್ದೇನೆ. ವಿಷಾದದ ಸಂಗತಿಯೆಂದರೆ ಕೆಲವೇ ಶಾಲೆಗಳಲ್ಲಿ ಮತ್ತು ಇದನ್ನು ಆಕರ್ಷಕವೆನಿಸುವಂತೆ ಮಾಡಲಾಗುತ್ತಿದೆ. ವಿಜ್ಞಾನ ಪಠ್ಯಕ್ರಮದಲ್ಲಿ ವಿದೇಶಿ ಭಾಷೆಗಳ ಪುಸ್ತಕಗಳಲ್ಲಿರುವದಕ್ಕಿಂತ ಹೆಚ್ಚೆಚ್ಚು ಶಬ್ದ

೧೯೯೫ರ ಜುಲೈ ತಿಂಗಳ ‘ರೀಡರ್ಸ್ ಡೈಜೆಸ್ಟ್’ ಮಾಸಪತ್ರಿಕೆಯಲ್ಲಿ ಪ್ರಕಟವಾದ ಮೇರಿ ಬರ್ಡ್ ರೋವೆ ಅವರ “ಟೀಚ್ ಯುವರ್ ಚೈಲ್ಡ್ ಟು ವಂಡರ್” ಎಂಬ ಲೇಖನದ ಅನುವಾದ.

ಗಳನ್ನು ಪರಿಚಯಿಸಲಾಗುತ್ತಿದೆ. ಪಾಠ್ಯ ಪುಸ್ತಕಗಳು ಶಬ್ದ ಕೋಶದಷ್ಟೇ ನಿಸ್ತೇಜವಾಗುತ್ತಿವೆ. ಇದರಿಂದಾಗಿ ವಿಜ್ಞಾನವೆಂಬುದು ಕೇವಲ ಐನಸ್ಟೈನರಂಥ ಜಾಣ ವಿದ್ಯಾರ್ಥಿಗಳಿಗೆ ಮಾತ್ರ ಎಂದು ಬಹಳಷ್ಟು ಮಕ್ಕಳು ತಿಳಿದಿದ್ದಾರೆ. ಆದರೆ ವಿಚಿತ್ರವೆಂದರೆ, ಮಕ್ಕಳಲ್ಲಿ ಪ್ರಾರಂಭ ದೆಶೆಯಲ್ಲಿಯೇ ಸ್ವಯಂಪ್ರೇರಣೆಯಿಂದ ತಮ್ಮ ಸುತ್ತ ಮುತ್ತಲಿನ ವಿಶ್ವದ ಬಗ್ಗೆ ತಿಳಿದುಕೊಳ್ಳಬೇಕೆಂಬ ಆಸಕ್ತಿ—ಸಹಜ ವೈಜ್ಞಾನಿಕ ಪ್ರವೃತ್ತಿ—ಇರುತ್ತದೆ. ವಿಜ್ಞಾನವನ್ನು ಸಂತೋಷದಿಂದ ತಿಳಿದುಕೊಳ್ಳುವಲ್ಲಿ ಅವರಿಗೆ ಸಹಾಯಮಾಡುವುದು ಬಹಳ ಸುಲಭ. ಇದಕ್ಕಾಗಿ ವಿಜ್ಞಾನದ ವಿಶೇಷ ಭಾಷಾ ಕಲೆ ಅಥವಾ ಪ್ರಯೋಗ ಶಾಲೆ ಬೇಕಾಗಿಲ್ಲ. ಮಕ್ಕಳ ಆಸಕ್ತಿಯಲ್ಲಿ ನಾವುಕೂಡಾ ಪಾಲ್ಗೊಂಡರೆ ಸಾಕು. ಆದಕ್ಕಾಗಿ ಕೆಳಗಿನ ಆರು ಸರಳ ಸೂತ್ರಗಳನ್ನು ಪಾಲಿಸಿರಿ.

೧. ಮಕ್ಕಳ ಪ್ರಶ್ನೆಗಳನ್ನು ಆಲಿಸಿರಿ:

'ವಿಜ್ಞಾನ ಒಂದು ವೃತ್ತಿ' ಎಂಬ ವಿಷಯ ಕುರಿತು ಮಾತಾಡಲು ಒಂದು ಗ್ರಾಮೀಣ ಶಾಲೆಗೆ ಹೋಗಿದ್ದೆ. ಅಲ್ಲಿನ ಎರಡನೇ ವರ್ಗದ ವಿದ್ಯಾರ್ಥಿಗಳು ನನಗೆ ಕೇಳಿದ ಪ್ರಶ್ನೆಗಳೆಲ್ಲ 'ಪಠ್ಯ ಪುಸ್ತಕದ ಪ್ರಶ್ನೆ'ಗಳಾಗಿದ್ದವು. ಅಭ್ಯಾಸ, ವೇತನ, ನಾನು ನನ್ನ ಕೆಲಸವನ್ನು ಮೆಚ್ಚಿಕೊಂಡಿದ್ದ ಬಗ್ಗೆ. ಅವರಿಗೆ ಉತ್ತರ ನೀಡಿದ ನಂತರ ಸ್ವಲ್ಪ ಸಮಯದವರೆಗೆ ಆ ಮಕ್ಕಳ ಹತ್ತಿರ ಮೌನವಾಗಿ ಕುಳಿತಿದ್ದೆ. ಕೊನೆಗೆ ನಾನೇ "ನಿಮ್ಮ ಪ್ರಶ್ನೆ ಮಾಲಿಕೆ ಮುಗಿಯಿತು. ವಿಜ್ಞಾನದ ಬಗ್ಗೆ ನಿಮ್ಮವೇ ಆದ ಪ್ರಶ್ನೆಗಳೇನಾದರೂ ಇವೆಯೆ? ಎಂದೆ. ದೀರ್ಘವಾದ ಮೌನದ ನಂತರ, ಒಬ್ಬ ಹುಡುಗ ಕೈ ಎತ್ತಿದ. "ನೀವು ಶಿವನಕುದುರೆ (grass hopper) ನೋಡಿದ್ದೀರಾ? ಆದರಂತೆ ನಾನು ಎಲೆ ಗಳನ್ನು ತಿಂದಾಗಲೆಲ್ಲ ನನಗೆ ಹೊಟ್ಟೆಬೇನೆ ಬರುತ್ತದೆ. ಇದಕ್ಕೇನು ಕಾರಣ?" ಎಂದು ಕೇಳಿದ. ಇದರ ಹಿಂದೆಯೇ ಪ್ರಶ್ನೆಗಳ ಮಹಾ ಪೂರ ಹರಿಯಿತು. ಎರಡು ಗಂಟೆಗಳವರೆಗೆ ಚರ್ಚೆ ಮುಂದುವರೆಯಿತು. "ಕಣ್ಣೀರು ಹೇಗೆ ಬರುತ್ತವೆ?" "ಜೇಡರಬಲೆ ಮಾಡಲು ಆ ಹುಳುವಿಗೆ ಅಷ್ಟೆಲ್ಲ ಸಾಮಗ್ರಿ ಎಲ್ಲಿಂದ ಸಿಗುತ್ತದೆ", "ನಾನೊಂದು ರಕ್ತದ ಚೀಲವೆ? ಯಾವಾಗಲಾದರೂ ಕೊಯ್ದುಕೊಂಡರೆ ರಕ್ತ ಹರಿಯ ಹತ್ತುತ್ತದೆ...."

ಮಕ್ಕಳ ಇಂಥ ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರಸಿಗದಿರಬಹುದು. ಆದರೂ "ನನಗೆಗೊತ್ತಿಲ್ಲ, ನಾವೆಲ್ಲ ಕೂಡಿ ಉತ್ತರ ಹುಡುಕೋಣವೆಂದು ಹೇಳಿದರೆ ತಪ್ಪಾಗುವುದಿಲ್ಲ. ಅನಂತರ ಉತ್ತರ ಕಂಡುಹಿಡಿಯಲು ಪ್ರಯತ್ನಿಸಬಹುದು.

ಒಮ್ಮೊಮ್ಮೆ ನಮ್ಮ ಸಹಾಯವಿಲ್ಲದೆಯೇ ಮಗು ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ಮೂರು ವರ್ಷದ ಮಗು ಮೊಟ್ಟೆಗಳನ್ನು ಅಡಿಗೆಮನೆಯಲ್ಲಿ ನೆಲದ ಮೇಲೆ ಕೆಡವಿತು. "ಈ ಚಂಡುಗಳು ಪುಟಿಯುವದಿಲ್ಲವಲ್ಲ!" ಎಂದು ಆ ಮಗು ತನ್ನ ತಾಯಿಗೆ ಹೇಳಿದಾಗ, ಮಗುವಿನ ಹಾಸ್ಯ ಪ್ರಜ್ಞೆ ಬೆಳಕಿಗೆ ಬಂದಿತ್ತು.

೨. ಕಥೆ ಹೇಳಿರಿ; ಕಂಠಪಾಠ ಬೇಡ:

ಮಗುವಿನ ಪ್ರಶ್ನೆಗೆ ನೀವೇ ಆತುರದಿಂದ ಉತ್ತರ ಕೊಡಬೇಡಿ. ಆದರಿಂದ, ಚರ್ಚೆಗೆ

ಆಸ್ಪದ ವಿರದಂತಾಗುತ್ತದೆ. ಇದರಿಂದಾಗಿ ವಿಜ್ಞಾನವೆಂಬುದು ಹಿರಿಯರ ತಲೆಯಲ್ಲಿ ಮಾತ್ರ ಸಂಗ್ರಹಿಸಲಾದ ಸಂಗತಿಗಳ ಪಟ್ಟಿ ಎಂಬ ಶಾಲಾ ಮಕ್ಕಳ ತಪ್ಪುಕಲ್ಪನೆಗೆ ಇನ್ನಷ್ಟು ಪುಷ್ಟಿ ಸಿಗುತ್ತದೆ. ವಿಜ್ಞಾನ ವಿರುವುದೇ ವಿವರಣೆಗಾಗಿ ಎಂಬುದನ್ನು ಮರೆಯಬಾರದು.

ಎಷ್ಟೋ ವರ್ಷಗಳ ಹಿಂದೆ, ಯುರೋಪಿಗೆ ಹೋಗುತ್ತಿದ್ದಾಗ ವಿಮಾನದಲ್ಲಿ ನನ್ನ ಬದಿಯಲ್ಲಿ, ಆರನೇ ವರ್ಗದಲ್ಲಿ ಓದುತ್ತಿದ್ದ ಬಾಲಕನೊಬ್ಬ ಕುಳಿತಿದ್ದ. ಯಾವುದೋ ಮಾಹಿತಿ ಸಂಗ್ರಹದಲ್ಲಿ ವಿಶ್ಲೇಷಣೆಗಾಗಿ ನಾನು ನನ್ನ ಗಣಕಯಂತ್ರ ಬಳಸುತ್ತಿದ್ದುದನ್ನು ನೋಡಿದನು. "ಇದೆಲ್ಲ ಲೆಕ್ಕ ಮಾಡಿದ ನಂತರ, ನೀವು ಉತ್ತರವನ್ನು ಯಾವ ಪುಸ್ತಕದಿಂದ ಪಡೆಯುತ್ತೀರಿ?" ಎಂದು ಕೇಳಿದನು.

"ನಾನು ಮಾಡುತ್ತಿರುವ ಸಮಸ್ಯೆ (ಲೆಕ್ಕ)ಗಳಿಗೆ ಯಾವ ಪುಸ್ತಕದಲ್ಲೂ ಉತ್ತರ ಸಿಗುವದಿಲ್ಲ. ನಾನೇ ಉತ್ತರಗಳನ್ನು ಹುಡುಕಿಕೊಳ್ಳಬೇಕು?

"ಆಗ ನಿಮ್ಮ ಟೀಚರ ನೀವು ಮಾಡಿದ್ದು ಸರಿಯೆಂದು ಹೇಳುವರೆ?

"ಇಲ್ಲಪ್ಪ ನಾನು ಪಡೆದ ಫಲಿತಾಂಶಗಳನ್ನು ಇತರರಿಗೆ ತೋರಿಸುವೆ, ಅವುಗಳ ಬಗ್ಗೆ ವಿವರಿಸಿ ಹೇಳುವೆ, ಅವರ ಜೊತೆ ಚರ್ಚಿಸುವೆ." ಎಂದೆ.

"ಆಯಿತು. ಆನಂತರವಾದರೂ ನಿಮ್ಮ ಟೀಚರ ನೀವು ಮಾಡಿದ್ದು ಸರಿ ಎನ್ನುವರೆ?" ಎಂದು ಮತ್ತೆ ಕೇಳಿದ.

"ಇಲ್ಲ.... ಬಹುಶಃ ಅವರೆನ್ನಲಿಕ್ಕಿಲ್ಲ" ಎಂದೆ.

ಆ ಬಾಲಕ, ಅನುಕಂಪದಿಂದ ನಿಟ್ಟುಸಿರು ಬಿಡುತ್ತ "ಹೌದು....ಕೆಲವು ಟೀಚರು ಹಾಗೇ ಇರುತ್ತಾರೆ....ಅಲ್ಲವೆ?" ಎಂದ.

ಆ ಬಾಲಕನ ದೃಷ್ಟಿಯಲ್ಲಿ, ಈ ಪ್ರಪಂಚವೆಲ್ಲ 'ಸರಿ–ತಪ್ಪು'ಗಳ ಸರಮಾಲೆಯಾಗಿತ್ತು. ವಿಜ್ಞಾನವೆಂದರೆ ಕೇವಲ ಸಂಗತಿಗಳಲ್ಲ. ನಿಸರ್ಗ ಹೇಗೆ ಕೆಲಸ ಮಾಡುತ್ತಿದೆಂಬುದನ್ನು ಒಂದು ಕಥೆಯ ಮೂಲಕ ಅರ್ಥೈಸುವ ಕಾರ್ಯವೇ ವಿಜ್ಞಾನವೆಂಬುದು ಆ ಬಾಲಕನ ಅರಿವಿಗೆ ಬಂದಿರಲಿಲ್ಲ.

ಒಂದು ಮಗುವಿನ ಪ್ರಶ್ನೆಗೆ ಉತ್ತರಿಸಬೇಕಾದಾಗ, ಈ ರೀತಿ ಕಥೆ ಕಟ್ಟುವ ಕ್ರಿಯೆ ಪ್ರಾರಂಭವಾಗಬೇಕು. ಒಂದು ಮಗು ರಾತ್ರಿ ಇಷ್ಟೇಕೆ ಕತ್ತಲು ಇರುತ್ತದೆಂದು ಕೇಳಿತೆಂದರೆ, "ಇದು ಹಗಲಿಗಿಂತ ಕಪ್ಪಾಗಿರಬೇಕಾದರೆ, ರಾತ್ರಿಯಲ್ಲಿ ಯಾವ ಬೇರೆ ಅಂಶಗಳಿವೆಂಬುದನ್ನು ಗಮನಿಸೋಣ...." ಎಂದು ಪ್ರಯತ್ನಿಸಬೇಕು. ಒಂದು ಹುಡುಗ "ಜೇನು ನೊಣಗಳು ಎಲ್ಲಿ ಜೀವಿಸಿರುತ್ತವೆ?" ಎಂದು ಆಶ್ಚರ್ಯ ವ್ಯಕ್ತಪಡಿಸಿದರೆ "ಆಯಿತು....ಅವು ಎಲ್ಲಿಗೆ ಹೋಗುತ್ತವೆಂಬುದನ್ನು ನಾವು ನೋಡೋಣ...." ಎಂದೆನ್ನಬೇಕು. ಯಾವಾಗಲೂ "ನಾವೂ ನೋಡೋಣ ಬನ್ನಿ" ಎಂಬ ಸಿದ್ಧ ಉತ್ತರ ನಿಮ್ಮದಾಗಿರಬೇಕು.

೩. ಮಕ್ಕಳು ವಿಚಾರಮಾಡಲು ಅವಕಾಶವಿರಲಿ

ಹಿರಿಯರಲ್ಲಿನ ಒಂದು ಕೆಟ್ಟ ಗುಣವೆಂದರೆ ಅವರು ಮಕ್ಕಳಿಂದ ಕೂಡಲೇ ಉತ್ತರ ಬರಬೇಕೆಂದು ಆಶಿಸುತ್ತಾರೆ. ಮಕ್ಕಳಿಗೆ ವಿಚಾರಿಸಲು ಸಮಯ ಕೊಡ

ವುದೇ ಇಲ್ಲವೆಂದು, ಮೂರು ದಶಕಗಳಿಂದ ನಡೆಸಲಾದ ಅಧ್ಯಯನಗಳಿಂದ ತಿಳಿದು ಬಂದಿದೆ. ಮಕ್ಕಳಿಗೆ ಎರಡುಸೆಕೆಂಡು ಅಥವಾ ಅದಕ್ಕಿಂತ ಹೆಚ್ಚು ಸಮಯ ನೀಡಿದಾಗಲೆಲ್ಲ ಅವರು ಕೂಡಾ ತರ್ಕಬದ್ಧ, ಪೂರ್ಣ ಮತ್ತು ರಚನಾತ್ಮಕ ಉತ್ತರಗಳನ್ನು ನೀಡಿದ್ದುಂಟು.

ನಾನು ಒಂದು ವರ್ಗದಲ್ಲಿ ಗಾಳಿಯ ಒತ್ತಡ ಕುರಿತು ಪ್ರಯೋಗ ನಡೆಸಿದೆ. ಒಂದು ರಬ್ಬರ ಚೆಂಡನ್ನು ಕತ್ತರಿಸಿ ಎರಡು ಅರ್ಧಗೋಲಾಕಾರದ ಬಟ್ಟಲಿನಂತೆ ಮಾಡಿ, ಅವುಗಳನ್ನು ಬಿಗಿಯಾಗಿ ಒತ್ತಿ ಅವುಗಳೊಳಗಿನ ಗಾಳಿಯೆಲ್ಲಾ ಹೊರಬೀಳುವಂತೆ ಮಾಡಿದೆ. ಅವೆರಡೂ ಅಂಟಿಕೊಂಡಂತಾದವು. ಇಬ್ಬರು ವಿದ್ಯಾರ್ಥಿಗಳು ಎಳೆದಾಡಿ ಅವುಗಳನ್ನು ಬೇರ್ಪಡಿಸಲು ಪ್ರಯತ್ನಿಸಿದರು.

"ಬೇರ್ಪಡಿಸಲು ಇಷ್ಟೆಲ್ಲ ಶಕ್ತಿ ಏಕೆ ಬೇಕಾಗುತ್ತದೆ?" ಎಂದು ಕೇಳಿದೆ.

ಎಷ್ಟೋ ನಿಮಿಷಗಳ ನಂತರ, ರೊಸ್ ಎಂಬ ವಿದ್ಯಾರ್ಥಿ "ಗಾಳಿ ಅಲ್ಲಿ ಒಳಗೆ ಸಿಕ್ಕಿಕೊಂಡಿರುತ್ತದೆ. ಒಂದು ರಂಧ್ರ ಸಿಕ್ಕಿತೆಂದರೆ ಅದರ ಮೂಲಕ ಹೊರಬೀಳುತ್ತದೆ. ಅದ್ದರಿಂದಲೇ 'ಫಟ್' ಶಬ್ದ ಕೇಳಿಬರುತ್ತದೆ" ಎಂದನು. ಅವನ ವಾದ ತಪ್ಪಿದ್ದರೂ, ನಾನು ಆಗ ಏನೂ ಅನ್ನಲಿಲ್ಲ.

ಆನಂತರ ಮಾರ್ಗರೆಟ್ ಎಂಬ ವಿದ್ಯಾರ್ಥಿನಿ "ಅದು ಸರಿಯಿಲ್ಲ. ಅದರೊಳಗಿದ್ದ ಗಾಳಿಯೆಲ್ಲ ಹೊರಬಿದ್ದುದೇ ಈ ಬಿಗಿತಕ್ಕೆ ಕಾರಣ." ಎಂದು ಹೇಳಿದಳು. ಅರ್ಧಗೋಲಗಳನ್ನು ಒತ್ತಿದಾಗ ಗಾಳಿ ಹೊರದೂಡಲಾಗುತ್ತದೆ. ಆಗ ಗಾಳಿಯ ಒತ್ತಡ ಒಳಭಾಗದ ಮೇಲೆ, ಹೊರಭಾಗದ ಮೇಲಿಗಿಂತ ಕಡಿಮೆಯಿರುತ್ತದೆಂಬುದನ್ನು ಸಿದ್ಧಪಡಿಸಲು ಅವಳು ಅರ್ಧ ಚಂಡಿನ ತುಣುಕನ್ನು ನೆಲದಮೇಲೆ ಒತ್ತಿಹಿಡಿದು ಅದು ಹಿಡಿದುಕೊಳ್ಳುವಂತೆ ಮಾಡಿದಳು.

ಮಕ್ಕಳಿಗೆ ಅವರೇನು ಯೋಚಿಸಬೇಕೆಂಬುದನ್ನು ಹೇಳುವದಕ್ಕಿಂತ, ಅವರು ತಾವಾಗಿಯೇ ವಿಚಾರಮಾಡಲು ಬಿಟ್ಟುಬಿಡಬೇಕು. ಒಂದು ಮಗುವಿನ ಉತ್ತರ ತಪ್ಪಾಗಿದ್ದರೂ, ನಾವು ಸಂಯಮ ಕಳೆದುಕೊಳ್ಳಬಾರದು. ಅವಶ್ಯವೆನಿಸಿದಾಗ ಕೆಲವು ನೇರ ಪ್ರಶ್ನೆಗಳನ್ನು ಕೇಳಿ ಅವರಿಗೆ ಉತ್ತರಿಸುವಲ್ಲಿ ಸಹಾಯಮಾಡಬಹುದು.

೪. ಭಾಷೆಯ ಕಡೆ ಗಮನವಿರಲಿ

ಒಂದು ಮಗು ವಿಜ್ಞಾನದ ಚರ್ಚೆಯಲ್ಲಿ ತೊಡಗಿತೆಂದರೆ, ನೀವು ಕೂಡಲೇ "ಸರಿ"... , "ಭೇಷ್....ಭೇಷ್...." ಅನ್ನಬಾರದು. ಇಂಥ ಬಾಯಿಮಾತುಗಳು ಒಳ್ಳೆಯವರ್ತನೆಗಾಗಿ ಬಳಸಿದರೆ, ಅವರಿಗೆ ಪ್ರೋತ್ಸಾಹಿಸಿದಂತಾಗುತ್ತದೆ. ಆದರೆ ವಿಜ್ಞಾನದ ಬಗ್ಗೆ ಚರ್ಚೆ ನಡೆದಾಗ ಈ ರೀತಿ ಹೊಗಳಿದರೆ, ಚರ್ಚೆಗೆ ಮುಕ್ತಾಯ ಹೇಳಿದಂತಾಗುತ್ತದೆ. ಅದರ ಬದಲಾಗಿ ಚರ್ಚೆ ಮುಂದುವರೆಸುವ ಉದ್ದೇಶದಿಂದ "ನೀನು ಹೇಳುತ್ತಿರುವುದು ರೋಚಕವಾಗಿದೆ" ಅಥವಾ "ಹೌದಲ್ಲ! ನನಗೆ ಇಲ್ಲಿಯವರೆಗೆ ಹೀಗೆನಿಸಿರಲಿಲ್ಲ...." ಅಥವಾ ಇನ್ನೂ ಕೆಲವು ಪ್ರಶ್ನೆಗಳನ್ನು, ಹೊಸ ವಿಚಾರಗಳನ್ನು ಹೇಳುವುದೇ ಲೇಸು. ಮಗುವಿಗೆ "ವಿಚಾರ ಮಾಡು" ಎಂದು ಉಪದೇಶ ಮಾಡಬಾರದು. ಇದಕ್ಕೆ ಅರ್ಥವಿರುವದಿಲ್ಲ. ನೀವು ಹೇಳದೆಯೇ ಮಕ್ಕಳು

ಯಾವಾಗಲೂ ವಿಚಾರ ಮಾಡುತ್ತಲಿರುತ್ತಾರೆ. ಇದಕ್ಕಿಂತಲೂ ಮಿಗಿಲಾಗಿ ಒಂದು ಚರ್ಚೆಯು ಮೂಲಕ ಅವರ ಪ್ರತಿಭಾ ಪ್ರದರ್ಶನವಾಗಬಹುದು. ನೀವೆಣಿಸುವ ಉತ್ತರವನ್ನು ಮಗು ಹುಡುಕಲು ಪ್ರಯತ್ನಿಸುತ್ತದಲ್ಲದೆ, ಅದಷ್ಟು ಕಡಿಮೆ ಶಬ್ದಗಳಲ್ಲಿ ವಿವರಿಸುತ್ತದೆ. ಇದರಿಂದಾಗಿ ನಿಮ್ಮ ನಿರಾಕರಣೆಗೆ ಹೆಚ್ಚು ಆಸ್ಪದವಿರುವುದಿಲ್ಲ.

ಮಕ್ಕಳೊಡನೆ ಚರ್ಚಿಸುವಾಗ "ಯಾಕೆ" ಎಂಬ ಪದವನ್ನು ಬಳಸಬಾರದು. ಈ ಪದ ಕೇಳಿ ಕೇಳಿ ಅವರು ಬೇಸತ್ತಿರುತ್ತಾರೆ. "ನಿನ್ನ ಕೋಣೆ ಇಷ್ಟೇಕೆ ಅಸ್ತವ್ಯಸ್ತವಾಗಿದೆ?" "ನೀನೇಕೆ ಸರಿಯಾಗಿ ವರ್ತಿಸುತ್ತಿಲ್ಲ?" ಎಂದಾಗಲೆಲ್ಲ ಈ 'ಏಕೆ' ಎಂಬ ಪದ ತಮ್ಮ ವರ್ತನೆಯ ವಿಮರ್ಶೆಯ ಸಂಕೇತವೆಂದು ಅವರು ಭಾವಿಸುವದುಂಟು. ಇದರ ಬದಲಾಗಿ ನಾನು "ಇದು ಹೇಗೆ?" ಎಂದು ಕೇಳುತ್ತೇನೆ. ಮಗುವಿನ ಭಾಷೆಯನ್ನು ಗಮನಿಸಬೇಕು. ಅವನು (ಳು) ಸ್ಪಂದಿಸಿದ ಮಾತಿನಲ್ಲಿ ಪ್ರಶ್ನಾರ್ಥಕ—ಸೂರ್ಯ?—ಸೂಚನೆಯಿದ್ದರೆ, ಅವನು ಚರ್ಚೆಯಲ್ಲಿ ಆಸಕ್ತನಿಲ್ಲವೆಂದರ್ಥ. ಅವನು ಕೇವಲ 'ಸರಿ' ಉತ್ತರಕ್ಕಾಗಿ ತಡಕಾಡುತ್ತಿರುತ್ತಾನೆ.

೫. ಹೇಳುವದಕ್ಕಿಂತ ಮಾಡಿ ತೋರಿಸಬೇಕು

ಒಂದು ಒಳ್ಳೆಯ ಪಾಠ ಅಥವಾ T.V. ಕಾರ್ಯಕ್ರಮಕ್ಕಿಂತಲೂ ನಿಸರ್ಗ ಮಕ್ಕಳ ಮೇಲೆ ವಿಶೇಷ ಪ್ರಭಾವ ಬೀರುತ್ತದೆ. ಇದನ್ನು ಮರೆಯಬಾರದು ಒಂದು ಭೂತಗನ್ನಡಿಯಿಂದ ಮಕ್ಕಳು ತಮ್ಮ ಕೈಬೆರಳುಗಳನ್ನು ನೋಡಿದಾಗ, ನಾವೇಕೆ ಅವರಿಗೆ ಊಟಕ್ಕಿಂತ ಮೊದಲು ಕೈತೊಳೆಯಲು ಹೇಳುತ್ತೇವೆಂಬದು ತಿಳಿಯುತ್ತದೆ. ಶಿಲೀಂಧ್ರವೇನೆಂಬುದನ್ನು ವಿವರಿಸುವದಕ್ಕಿಂತಲೂ, ರೊಟ್ಟಿಯ ತುಣುಕಿನ ಮೇಲೆ ಬೆಳೆದದ್ದನ್ನು ತೋರಿಸಿರಿ. ನೀರು ಭಾಷ್ಪೀಕರಣಕ್ಕೊಳಗಾಗುತ್ತದೆಂದು ಹೇಳುವದಕ್ಕಿಂತ, ಒಂದು ಪಾತ್ರೆಯಲ್ಲಿ ನೀರು ತೆಗೆದುಕೊಂಡು ಕುದಿಸಿರಿ. ನೀರಿನ ಮಟ್ಟ ಕಡಿಮೆಯಾಗುವದನ್ನು ಅವರೇ ಗಮನಿಸಲಿ.

ನೋಡುವುದರಿಂದ ಅಥವಾ ಸ್ಪರ್ಶದಿಂದ ಅರ್ಥಮಾಡಿಕೊಳ್ಳುವಲ್ಲಿ ವಿಜ್ಞಾನ ಸಂಗ್ರಹಾಲಯಗಳು ಬಹಳಷ್ಟು ಅವಕಾಶ ನೀಡುತ್ತವೆ. ನೀವು ಮಕ್ಕಳನ್ನು ಒಂದು ಸಂಗ್ರಹಾಲಯಕ್ಕೆ ಕರೆದುಕೊಂಡು ಹೋದರೆ, ಮಾರ್ಗದರ್ಶಿ ಪಟ್ಟಿಯನ್ನು ಕೈಬಿಡಿರಿ. ಮಕ್ಕಳು ತಾವೇ ದಾರಿ ಹುಡುಕಿಕೊಳ್ಳಲಿ, ತಮಗೆ ಯಾವುದು ಹೆಚ್ಚು ಹಿಡಿಸುತ್ತದೊ ಅದರ ಬಗ್ಗೆ ತಿಳಿದುಕೊಳ್ಳಲಿ.

೬. ಪಟ ಹಾರಲು ಬಿಡಿ

ದಿನ ನಿತ್ಯದ ಚಟುವಟಿಕೆಗಳಲ್ಲಿಯೇ ಅನೇಕ ಕೌತುಕಕಾರಿ ವಿಜ್ಞಾನದ ಪಾಠಗಳನ್ನು ಕಲಿಸಬಹುದು. ಒಂದು ಪಟವನ್ನು ಹಾರಿಸುವುದರ ಮೂಲಕ ಮಕ್ಕಳು, ವಿಜ್ಞಾನ ಮತ್ತು ಇಂಜಿನಿಯರಿಂಗ್ ಬಗ್ಗೆ ಕಲಿತುಕೊಳ್ಳಬಹುದು. ತೆಳ್ಳಗಿನ ಕಡ್ಡಿ, ದಾರ ಮತ್ತು ತೆಳ್ಳನೆಯ ಕಾಗದಗಳನ್ನು ತೆಗೆದುಕೊಂಡು ಪಟಮಾಡಿ ತೋರಿಸಬೇಕು ಒಂದು ದಿನದ ಈ "ಪ್ರಯೋಗ"ದಿಂದ

ಮಕ್ಕಳು ವೈಜ್ಞಾನಿಕ ಕ್ರಿಯೆ–ಪರಿಣಾಮದ ಮೂಲ ಪಾಠ ಕಲಿತುಕೊಳ್ಳುತ್ತಾರೆ. ಗಾಳಿಯ ದಿಕ್ಕು ಮತ್ತು ರಭಸ ಹೇಗೆ ಬೇರೆ ಬೇರೆ ಎತ್ತರಗಳಲ್ಲಿ ಬದಲಾಗುತ್ತ ಹೋಗುತ್ತದೆಂಬುದನ್ನು ಅವರು ಕಂಡುಕೊಳ್ಳುತ್ತಾರೆ. ಇದಲ್ಲದೆ ಪಟದ ಒಳಗಡೆಯೇ ಸಿದ್ಧಗೊಂಡ ವ್ಯವಸ್ಥೆಯುಂಟು. ನೀವು ಸುಧಾರಿಸುತ್ತ ಹೋದಂತೆಲ್ಲ, ಅದು ಬಹಳ ಚೆನ್ನಾಗಿ ಹಾಗೂ ಎತ್ತರದಲ್ಲಿ ಹಾರುತ್ತಿರುತ್ತದೆ.

ಪಟ ಹಾರಿಸುವುದೊಂದೇ ಪ್ರಯೋಜನಕಾರಿ ಚಟುವಟಿಕೆಯಲ್ಲ. ಒಂದು ಸಸಿಯ ಮೇಲೆ ನೀರು ಮತ್ತು ಸೂರ್ಯ ಪ್ರಕಾಶದ ಪರಿಣಾಮವೇನಾಗುತ್ತದೆ ಎಂಬುದನ್ನು ಪ್ರಯೋಗದ ಮೂಲಕ ತೋರಿಸಬಹುದು. ಬೆಂಕಿಪೆಟ್ಟಿಗೆ ಅಥವಾ ಪ್ಲಾಸ್ಟಿಕ್ ತುಂಡುಗಳನ್ನು ಜೋಡಿಸಿ ಒಂದು ಚಿಕ್ಕ ಗಗನಚುಂಬಿ ಕಟ್ಟಡ ಕಟ್ಟಬಹುದಲ್ಲವೆ? ಅದರಲ್ಲೂ ಬೇರೆ ಬೇರೆ ವಿನ್ಯಾಸ ಸಾಧ್ಯವಿದೆ ಎಂಬುದನ್ನು ಅವರೇ ಮಾಡಿ ನೋಡಲಿ. ಈ ಚೌಕಾಕಾರದ ತುಂಡುಗಳು—ಕಟ್ಟಿಗೆಯದಾಗಲಿ ಅಥವಾ ಪ್ಲಾಸ್ಟಿಕಿನದಾಗಲಿ—ಕಟ್ಟುವ ಯೋಜನೆಯಲ್ಲಿ ಬಹಳ ಸಹಕಾರಿಯಾಗುತ್ತವೆ. ಎಂತಲೇ ಆಟಿಗೆಗಳನ್ನು ಕೊಳ್ಳುವಾಗ, ಆದಷ್ಟು ಬೇರೆ ಬೇರೆ ತೆರನಾದಂಥವುಗಳನ್ನು, ಬಿಡಿ ಭಾಗಗಳಿರುವಂಥವನ್ನು ಕೊಳ್ಳಬೇಕು. ಬೇರೆ ಬೇರೆ ತುಂಡುಗಳಿದ್ದು, ಮಕ್ಕಳೇ ಅವುಗಳನ್ನು ಜೋಡಿಸುವದಕ್ಕೆ ಅವಕಾಶವಿರುವಂಆಟಿಗೆ ಸಾಮಗ್ರಿಯನ್ನು ಹುಡುಕಬೇಕು.

ಮಕ್ಕಳ ಆಸಕ್ತಿಯಲ್ಲಿ ನಾವು ಕೂಡಾ ಪಾಲ್ಗೊಂಡರೆ, ಅವರಿಗೆ ವಿಜ್ಞಾನಕ್ಕಿಂತಲೂ ಮಿಗಿಲಾದ ಪಾಠ ಕಲಿಸಿದಂತಾಗುತ್ತದೆ. ಎಷ್ಟೇ ಶ್ರಮವಾದರೂ, ಎಡೆಬಿಡದೆ ಪ್ರಯತ್ನಿಸಿ ಪ್ರಯೋಗಗಳ ಮೂಲಕ ತಾವು ಕಲಿತುಕೊಳ್ಳಬಹುದೆಂಬುದು ಮಕ್ಕಳಿಗೆ ಮನದಟ್ಟಾಗಬೇಕು.

ಇದರಿಂದಾಗಿ ಕಲಿಕೆ ಮಕ್ಕಳಿಗೆ ಬೇಸರ ತರುವ ಅಥವಾ ಶಾಲೆಯಲ್ಲಿ ನಡೆಯುವ ಅನಿವಾರ್ಯ ಚಟುವಟಿಕೆಯೆಂದೆನಿಸುವದಿಲ್ಲ ಇದೊಂದು ನಿತ್ಯ ನಡೆಯುವ—ಜೀವನ ಪರ್ಯಂತ ನಡೆಸಬಹುದಾದ—ಆನಂದದಾಯಕ ಚಟುವಟಿಕೆ ಎನಿಸುವಂತಾಗುತ್ತದೆ.

ದೇವರ ಸೃಷ್ಟಿಯಲ್ಲಿ ವಿರಮಿಸಿರಿ, ಸಂತೋಷಿಸಿರಿ, ನಿಮಗೆ ಒದಗಿರುವ ಇಷ್ಟೆಲ್ಲ ಸೃಷ್ಟಿ ಸಂಪತ್ತಿಗಾಗಿ ಆನಂದಿಸಿರಿ. ಹೆಮ್ಮೆ ಪಡಿರಿ. ಜೊತೆಗೆ ಸೃಷ್ಟಿಕರ್ತನಿಗೆ ಕೃತಜ್ಞರಾಗಿರುವದೂ ನಿಮ್ಮ ಧರ್ಮ ಎಂಬುದನ್ನು ಮರೆಯದಿರಿ.

—ಯೇಸುಸ್ವಾಮಿ

ಕೃಷಿ ಅರಣ್ಯ, ಅರಣ್ಯ ಕೃಷಿ ಸಂಗಮಿಸಿದಾಗ ಕೃಷಿ ಖುಷಿ

ಎ. ಪಿ. ಚಂದ್ರಶೇಖರ್

ಬದುಕಿನ ಪ್ರಾಥಮಿಕಾವಶ್ಯಕತೆಗಳು ಅಶನ, ವಸನ, ವಸತಿ. ಈ ಮೂರೂ, ಅಂತಿಮವಾಗಿ, ಒದಗುವುದು ಅರಣ್ಯದಿಂದಲೇ. ಕೃಷಿ-ಅರಣ್ಯ ಮತ್ತು ಅರಣ್ಯ-ಕೃಷಿ ಎಂಬ ಎರಡು ಪೂರಕ ಪರಿಕಲ್ಪನೆಗಳು ಈಗ ಮೈದಳೆದು ಚರ್ಚೆಗೆ ವಿಪುಲ ಗ್ರಾಸ ಒದಗಿಸಿವೆ. ಏಕೆಂದರೆ ಬದುಕಿನ ಬಂಡಿ ಹಳಿ ತಪ್ಪಿದೆ. ಎಲ್ಲಿ, ಏಕೆ, ಇವನ್ನು ಸರಿಪಡಿಸುವುದು ಹೇಗೆ—ಸ್ವಂತ ಪ್ರಯೋಗದಿಂದ ಹಾಗೂ ಅನುಷ್ಠಾನದಿಂದ ಗಳಿಸಿದ ಅನುಭವ ಈ ಲೇಖನದ ವಸ್ತು.

ಕೃಷಿ ಮತ್ತು ಅರಣ್ಯ ಎಂದರೆ, ಕೃಷಿಗೆ ಸಂಬಂಧಿಸಿದಂತೆ ಸೊಪ್ಪಿನ ಅಗತ್ಯತೆಯನ್ನು ಪೂರೈಸಿಕೊಳ್ಳುವ ಸಲುವಾಗಿ, ಕೃಷಿಕನ ಸೌದೆಗಾಗಿ ಬೆಳೆಸುವ ಕಾಡು. ಕಾಡೆಂದರೆ ಮರಗಳು ಗುಂಪಾಗಿ ಇರುವುದು. ನಾವು ನಮಗಾಗಿ ಬೆಳೆದ ತೋಟವೂ ಈ ಅರ್ಥದಲ್ಲಿ ಕಾಡು.

ಆದರೆ ಅರಣ್ಯ ಕೃಷಿಯಲ್ಲಿ ಅಷ್ಟಾಗಿ ಆರ್ಥಿಕ ಹೆಚ್ಚುಗಾರಿಕೆ ಇಲ್ಲ. ಇದು ಪರಿಸರದ ಉಳಿವಿಗಾಗಿ ನಾವು ಬೆಳೆಸುವ ಕಾಡು ಅಥವಾ ಉಳಿಸುವ ಕಾಡು. ಕಾಡನ್ನು ಹೀಗೂ ವ್ಯಾಖ್ಯಾನಿಸಬಹುದು—"ನಾವು ಉದ್ದೇಶಿಸದೇ ಬೆಳೆಯುವುದು ಕಾಡು". ಉದ್ದೇಶಿಸಿದ್ದು ಕೃಷಿ. ಈ ರೀತಿಯ ವಿವರಣೆಯೊಳಗೆ ಆರ್ಥಿಕತೆಯನ್ನೂ ಪರಿಸರ ಕಾಳಜಿಯನ್ನೂ ನಾವು ಬೇರೆ ಬೇರೆಯಾಗಿ ಕಾಣುತ್ತಿದ್ದೇವೆ. ಹೀಗೆ ಎರಡಾಗಿ ಕಾಣುವವರೆಗೆ ನಾವು ಎರಡರಲ್ಲೂ ಮೇಲ್ಮೆಯನ್ನು ಸಾಧಿಸಲು ಸಾಧ್ಯವಿಲ್ಲ. ಹಣವನ್ನೂ ಹಸುರನ್ನೂ ಒಂದಾಗಿ ಕಂಡಾಗ, ಇಂದು ಬೇರೆ ಬೇರೆಯಾಗಿರುವ ಕೃಷಿ ಅರಣ್ಯ ಮತ್ತು ಅರಣ್ಯ ಕೃಷಿಯನ್ನು ಒಂದು ಮಾಡಿದಾಗಲೇ ನಿಜವಾದ ಪ್ರಗತಿ ಸಾಧ್ಯ, ನಿಜವಾಗಿಯೂ ಪ್ರಗತಿ ಸಾಧ್ಯ. ಪ್ರಗತಿ ಎಂದರೆ ಏನು?—ಹಳೆಯ ತಪ್ಪನ್ನು ಮತ್ತೆ ಮಾಡದಿರುವುದು. ಹಳೆಯ ತಪ್ಪುಗಳಿಂದ ಹೊಸ ವಿವೇಕ ಪಡೆಯುವುದು. ಜೀವನದಲ್ಲಿ ತೃಪ್ತಿಯನ್ನೂ, ಸಾರ್ಥಕತೆಯನ್ನೂ ಕಾಣುವುದು. ಇಂಥಾ ವಿವೇಕವೇ ಕೃಷಿ ಭೂಮಿಯಲ್ಲಿ ಅರಣ್ಯ ಬೆಳೆಸುವುದು ಅಥವಾ ಅರಣ್ಯದಲ್ಲಿ ಕೃಷಿ ಮಾಡುವುದು. ಕೃಷಿಯನ್ನೂ ಕಾಡನ್ನೂ ಜೊತೆಯಾಗಿ ಮಾಡುವುದು.

ಇದು ಯಾಕೆ ಮತ್ತು ಇಂದು ಹೇಗೆ? ಎಂದು ತಿಳಿಯುವ ಮೊದಲು ಅಂದು ಹೇಗೆ ಎಂಬುದನ್ನು ಮೊದಲಾಗಿ ಸ್ವಲ್ಪ ನೋಡೋಣ. ಎಂದರೆ ಇನ್ನೂ ಉಳಿದಿರುವ ನಮ್ಮ ಕಾಡುಗಳನ್ನು ಸ್ವಲ್ಪ ದರ್ಶಿಸೋಣ. ಮನದಾಳಕ್ಕೆ ಸ್ಪರ್ಶಿಸೋಣ. ಮನಬಿಚ್ಚಿ ವಿಮರ್ಶಿಸೋಣ. ಆಗ ನಮಗೆ ಕೆಲವೊಂದು ಸತ್ಯಗಳು ಎದ್ದು ಕಾಣುತ್ತವೆ.

೧. ಹೆಮ್ಮರ, ಮರ, ಗಿಡ, ಪೊದರು, ವಿಧವಿಧದ ಬಳ್ಳಿಗಳು—ಸೂರ್ಯನನ್ನೇ ಬಚ್ಚಿಡುವ ಪ್ರಯತ್ನ ಕಾಡು. ಇಲ್ಲಿ ಖಗ್ರಾಸ ಸೂರ್ಯ ಗ್ರಹಣಕ್ಕೆ ಯಾರೂ ಹೆದರ ಬೇಕಾಗಿಲ್ಲ. ಪ್ರಮಾಣೀಕೃತ ಬೀಜಗಳನ್ನು ಬಿತ್ತಿದವರಿಲ್ಲ. ಆದರೂ ಎಷ್ಟೊಂದು ಸಸ್ಯ ಗಳು ಮೊಳೆತಿರುವುದಲ್ಲಾ !

೨. ಬಳಸಿಹವು ಸಸ್ಯಗಳು ಜಾಗವನು ಒಂದಿನಿತು ಬಿಡದೆ. ಬಿಡದೆ ಬೆಳೆದಿಹವು ಹೂಂತಕಾರಿಗಳಾಗಿ ಹಾಗೆಂದು ಹೊಂಚು ಹಾಕಿ ಶಿಫಾರಸು ಮಾಡಿದ ಗೊಬ್ಬರ ಕೊಟ್ಟವರಿಲ್ಲ.

೩. ನೀರು ಮತ್ತು ಗಾಳಿಯ ಸುಗಮ ಸಂಚಾರಕ್ಕಾಗಿ, ಬೇರಿನ ಬೆಳವಣಿಗೆಗಾಗಿ ಮಣ್ಣು ಒಕ್ಕದವರಿಲ್ಲ. ಆದರೂ ವೈಶಾಖ ದಲ್ಲೂ ವಿಶಿಷ್ಟವಾದ ಮೇಲ್ಮಣ್ಣನ್ನು ಕೈಯಿಂದಲೇ ಕೆರೆದು ತೆಗೆಯಬಹುದು.

೪. ಕಳೆ ಕೀಳುವ ಪ್ರಶ್ನೆಯೇ ಇಲ್ಲ. ಇಲ್ಲಿ ಎಲ್ಲವೂ ಕಳೆಯೆ. ಕಳೆ ಶಬ್ದದ ಅರ್ಥ ಕಸ ಅಲ್ಲ—ಕಾಂತಿ !

೫. ಹಾಯಿ, ಹನಿ, ತುಂತುರು ನೀರಾ ವರಿ ವ್ಯವಸ್ಥೆ ಇಲ್ಲವಾದರೂ ನೀರೊತ್ತಾಯ ಕಾಣುವುದಿಲ್ಲ.

೬. ಕೀಟ, ರೋಗ ನಿಯಂತ್ರಣ ತಂತ್ರ ವಿದ್ಯೆ ಇಲ್ಲ.

೭. ಗೆಲ್ಲು ಕಡಿದು, ರೆಕ್ಕೆ ಬಡಿದು ರೂಪ ಕೊಟ್ಟವರಿಲ್ಲ.

ಏನೂ ಇಲ್ಲದಲ್ಲಿ ಎಲ್ಲವೂ ಇರುವ ಇದು ನಮಗೆ ಪಾಠವಾಗಬೇಡವೇ?

ಈ ಭೂಮಿಯ ಕೊನೆಯ ಸೃಷ್ಟಿ ಮನುಷ್ಯ. ಇತರೆ ಎಲ್ಲಾ ಪ್ರಾಣಿಗಳೂ ಸಸ್ಯಗಳೂ ಮೊದಲು. ನಾವು ನಮ್ಮ ಆಹಾರಕ್ಕಾಗಿ ಕೃಷಿ ಮಾಡುವ ಒಂದೊಂದು ಸಸ್ಯಗಳೂ ನಮಗಿಂತ ಮೊದಲೇ ಬೆಳೆದು ಬಂದವು. ಹಾಗಾಗಿ ಈ ಎಲ್ಲ ಕೃಷಿ ಸಸ್ಯಗಳೂ ಒಂದು ಕಾಲಕ್ಕೆ ಕಾಡು ಸಸ್ಯಗಳೆ. ನಮ್ಮ ಆಹಾರಗಳಾಗಬಲ್ಲ ಕಾಡು ಸಸ್ಯಗಳನ್ನೂ ನಾಡು ಸಸ್ಯಗಳನ್ನಾಗಿಸಿದ ರೀತಿ, ಪ್ರಕೃತಿಯನ್ನು ಸಂಸ್ಕೃತಿ ಎಂದು ಪರಿಷ್ಕರಿಸಿದ ನೀತಿಯೇ ಕೃಷಿ. ಎಂದರೆ ಒಂದಾಗಿದ್ದ ಕಾಡು ಸಸ್ಯಗಳನ್ನು ಎರಡಾಗಿ ಬದಲಾಯಿಸಲಾಯಿತು. [ಅದ್ವೈತವನ್ನು ದ್ವೈತ ಮಾಡಲಾಯಿತು.] ನಾವು ಕೃಷಿ ಗಾಗಿ ಏನೆಲ್ಲವನ್ನು ಮಾಡುತ್ತೇವೋ ಅದೇ ನನ್ನೂ ಮಾಡದೆ ಕಾಡು ಸಸ್ಯಗಳು ಇಂದೂ ಬೆಳೆಯುತ್ತವೆಂಬುದನ್ನೂ ಈಗಾಗಲೇ ತಿಳಿದುಕೊಂಡಾಯಿತು. ಹಾಗಾದರೆ ಒಂದೊಮ್ಮೆ ಕಾಡು ಸಸ್ಯಗಳೇ ಆಗಿದ್ದ ನಮ್ಮ ಕೃಷಿ ಸಸ್ಯಗಳಿಗೆ ಇಷ್ಟೊಂದು ತೊಂದರೆ, ಇಷ್ಟೊಂದು ಕಾಳಜಿ ಯಾಕೆ? ಎಂದು ತರ್ಕಿಸಬೇಡವೇ? ಮನುಷ್ಯನಿಗೂ ಪ್ರಾಣಿಗಳಿಗೂ ವ್ಯತ್ಯಾಸ ಏನು? ಎಂದು ಕೇಳಿದಾಗ ನಾವು ಹೆಮ್ಮೆಯಿಂದ ಹೇಳಿ ಕೊಳ್ಳುವ ಅಂಶ "ಬುದ್ಧಿ". ಈ ಬುದ್ಧಿ ಯನ್ನು ಉಪಯೋಗಿಸಿ "ಉಚಿತಾನುಚಿತ"

ತೀರ್ಮಾನ ಕೈಗೊಳ್ಳಬೇಡವೇ? "ಮನುಷ್ಯನೆಂಬೊಂದು ಪ್ರಾಣಿಯನ್ನು ಸೃಷ್ಟಿಸಲಿದ್ದೇನೆ. ಆತನಿಗೆ ಬುದ್ಧಿಯನ್ನೂ ಕೊಡುತ್ತೇನೆ. ಬುದ್ಧಿವಂತನಾದ ಮನುಷ್ಯನಿಗೆ ಆಹಾರವಾಗುವ ಸಸ್ಯಗಳು ಸುಲಭವಾಗಿ ಬೆಳೆಯಬಾರದು" ಎಂಬುದಾಗಿ ಪ್ರಕೃತಿಯೇ ಪೂರ್ವಭಾವಿಯಾಗಿ ಭೇದವನ್ನು ಎಣಿಸಿರಬಹುದೇ? ಹಾಗಾಗಿ ನಮ್ಮ ಆಹಾರೋತ್ಪಾದಕ ಸಸ್ಯಗಳಲ್ಲಿ ಇಷ್ಟೊಂದು ಸಮಸ್ಯೆಗಳನ್ನು ಉದ್ದೇಶಪೂರ್ವಕವಾಗಿ ತುಂಬಿರಬಹುದೇ? ಆಧುನಿಕ ಕೃಷಿವಾದಿಗಳೆಲ್ಲಾ ಹೀಗೆಂದು ತರ್ಕಿಸಿದಂತೆ ನನಗೆ ಅನಿಸುತ್ತದೆ. ಈ ಕಾರಣ ನಿಜವೆಂದಾದರೆ, ಆಧುನಿಕ ಕೃಷಿ ನೀತಿ ನಿಜವಾದೀತು.

ಈ ಪ್ರಕೃತಿಯಲ್ಲಿ ಮನುಷ್ಯ ಒಂದು ಉಳಿದ ಎಲ್ಲಾ ಜೀವಿಗಳೂ ಒಂದು. ಈ ರೀತಿಯ ಗುಂಪುಗಾರಿಕೆಗೆ ಕಾರಣ, ಮೊದಲೇ ಹೇಳಿದಂತೆ "ಬುದ್ಧಿ" ಎಂಬ ಒಂದು ವ್ಯತ್ಯಾಸ. ಹಾಗೆಯೇ "ದುರ್ಬುದ್ಧಿ" ಎಂಬ ಇನ್ನೊಂದು ವ್ಯತ್ಯಾಸ. ಇತರ ಜೀವಿಗಳಿಗೆ ಬುದ್ಧಿ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ದುರ್ಬುದ್ಧಿ ಖಂಡಿತಾ ಇಲ್ಲ. ಹಾಗಾಗಿ ಅವಕ್ಕೆ ನಾಳೆಯ ಚಿಂತೆ ಇಲ್ಲ. ನಿನ್ನೆ ಇಲ್ಲದ ನಮ್ಮನ್ನು ಇಂದು ತಂದ ಪ್ರಕೃತಿ ಬೇಕೆಂದಾದರೆ ನಾಳೆಯೂ ಬೇಕಾದ್ದನ್ನು ಕೊಟ್ಟು ಸಲಹೀತು ಎಂಬ ತೃಪ್ತಿಯ, ವಿವೇಕದ ಭಾವ. ಶುದ್ಧ ಜೀವನ ವಿಧಾನ. ಆದರೆ ಮನುಷ್ಯರಾದ ನಮಗೆ ಬರೀ ನಾಳೆಯ ಚಿಂತೆಯಲ್ಲ. ನಾಳೆಗಳ ಬಗ್ಗೆ, ತಲೆಮಾರುಗಳ ಬಗ್ಗೆ. ಹಾಗಾಗಿ ನಾವು ಭವಿಷ್ಯವನ್ನು ವರ್ತಮಾನದಲ್ಲೇ ಕೊಳ್ಳು ಮಾಡಲು ಹೊರಟಿದ್ದೇವೆ. ಹೆಚ್ಚು ಪಡೆಯುವ ಹಂಬಲದಲ್ಲಿ ಹಾಲುಣಿಸುವ ಮೊಲೆಗಳನ್ನು ಕತ್ತರಿಸಲು ಹೊರಟಿದ್ದೇವೆ....ನಾವಿಂದು ಹಣ ಮಾಡುವುದಕ್ಕಾಗಿ ವಿಷವನ್ನೂ, ಮಲವನ್ನೂ ತಿನ್ನಲು ಹೊರಟಿದ್ದೇವೆ. ಹೀಗಿರುವ ಹಣವಾದರೂ ಯಾತಕ್ಕೆ? ಮೂಲವಿಲ್ಲದ, ಮೌಲ್ಯವಿಲ್ಲದ ಹಣಕ್ಕೆ ಏನು ಬೆಲೆ ಎಂಬುದನ್ನು ಯೋಚಿಸಬೇಕಾಗಿದೆ. ಶುದ್ಧವಾದುದನ್ನು ತಿಂದು ಶುದ್ಧವಾದ ಹಣ ಕಾಣಲು ಪ್ರಯತ್ನಿಸಬೇಕಾಗಿದೆ.

ಕೃಷಿಗೆ ಹಾಗೂ ಪರಿಸರಕ್ಕೆ ಸಂಬಂಧಿಸಿದಂತೆ ಕಾಡಿಗೆ ಬಹಳಷ್ಟು ಕ್ರಿಯಾಪಾತ್ರಗಳಿವೆ.

೧. ಶುದ್ಧ ಗಾಳಿಯ ನಿರ್ಮಾಣ
೨. ಶುದ್ಧ ನೀರಿನ ಸಂಗ್ರಹಣ
೩. ಶುದ್ಧ ಭೂಮಿಯ ರಕ್ಷಣೆ
೪. ಶುದ್ಧ ಆಹಾರದ ಉತ್ಪಾದನೆ
೫. ಶುಭ್ರ ಬಟ್ಟೆಯ ಸಂಪಾದನೆ
೬. ಭವ್ಯ ಭವನಗಳ ರಚನೆ
೭. ಆರೋಗ್ಯ ಕಾಪಿಡುವ ಔಷಧಿ
೮. ಆಹಾರ ಬೇಯಿಸುವ ಉರುವಲು
೯. ಕಣ್ಣಿನ ದೃಷ್ಟಿದೋಷಕ್ಕೆ ಹಸುರು ಚಿಕಿತ್ಸೆ.
೧೦. ಬುದ್ಧಿಯ, ಹೃದಯದ ಭಾಷೆಯ ಸಂಸ್ಕರಣೆ.
೧೧. ಕೃಷಿಗೆ ಸಾವಯವ ಗೊಬ್ಬರ
೧೨. ಭೂಗರ್ಭದ ಖನಿಜಗಳನ್ನು ಬೇರಿನ ಮೂಲಕ ಮೇಲೆತ್ತುವ ಯಂತ್ರ
೧೩. ಹಲವೊಂದು ಪ್ರಾಣಿ, ಪಕ್ಷಿಗಳ ಅಶನ ಮತ್ತು ಆಸರೆ.
೧೪. ಮಳೆಗೋಡೆ

೧೫. ಗಾಳಿ ತಡೆ
೧೬. ಭೂ ಶಾಖ ನಿಯಂತ್ರಣ
೧೭. ಪ್ರಸನ್ನ ವಾತಾವರಣ
೧೮. ಸಂಚಯಶಕ್ತಿ ಪೆಟ್ರೋಲಿನ ಮೂಲ

ಹೀಗೆ ಪ್ರಕೃತಿಯನ್ನು ಸಮಗ್ರವಾಗಿ, ಜೀವಧಾರಕವಾಗಿ ರೂಪಿಸಿರುವ ಮರಗಳನ್ನು, ಕಾಡನ್ನು ಉಪಯೋಗಿಸಿಕೊಳ್ಳುವಲ್ಲಿ ನಮಗೆ ಹಕ್ಕಿದೆ. ಯಾಕೆಂದರೆ, ಅವು ನಮಗಾಗಿಯೂ ಇವೆ. ಆದರೆ ಇನ್ನೊಬ್ಬರಿಗೆ, ಇನ್ನೂ ಮುಂದಕ್ಕೆ ಸಿಕ್ಕದಂತೆ ಹೆಚ್ಚಾಗಿ ಉಪಯೋಗಿಸುವ ಸೊಕ್ಕಿಗೆ ಏನೆನ್ನೋಣ? "ಈ ಭೂಮಿಯ ಕೊನೆಯ ಸೃಷ್ಟಿ ಮನುಷ್ಯ" ಎಂದು ಆಗ ಉಲ್ಲೇಖಿಸಿದ್ದ. ಆದರೆ ಅದು ಸರಿ ಅಲ್ಲ. ಸೃಷ್ಟಿಗೆ ಪ್ರತಿಸೃಷ್ಟಿ ಮಾಡುವ ಚಪಲ, ಸಾಧನೆ ಮನುಷ್ಯನದು. ಎಲ್ಲವನ್ನೂ ಅಶುದ್ಧ ಮಾಡಿ ಮತ್ತೆ ತಂತ್ರಜ್ಞಾನವನ್ನು ಉಪಯೋಗಿಸಿ ಶುದ್ಧ ಮಾಡುವ ಪ್ರಯತ್ನದಲ್ಲಿ ಸಸ್ಯಗಳಿಗೂ ನಮಗೂ ಸಂಬಂಧಿಸಿದಂತೆ ಈಗ ಹೊಸ ಹೊಸ ರೋಗಗಳನ್ನು ಸೃಷ್ಟಿ ಮಾಡಿದ್ದೇವೆ. ಪ್ರಕೃತಿಗೆ ಸಾಧ್ಯವಾಗದಿರುವ ಈ ಹೊಸ ಸೃಷ್ಟಿಯ ಹೆಗ್ಗಳಿಕೆಗಾಗಿ ಮಾನವ ಕಾಡು ನಾಶ ಮಾಡುತ್ತಿರಬಹುದೇ?

ಕೃಷಿ ಎಂದ ಕ್ಷಣ ಮನಸ್ಸಿಗೆ ಬರುವುದು ಬೀಜ, ಗೊಬ್ಬರ, ನೀರು, ಕಳೆ, ಕೀಟ. ಇವುಗಳ ಸಮಗ್ರ ನಿರ್ವಹಣೆಯೇ ಕೃಷಿ. ಕೃಷಿಯ ನಂತರದ ಹಂತ ಕೊಯ್ಲು ಮತ್ತು ಮಾರಾಟ. ಮಾರಾಟದಿಂದ ಬರುವುದು ಆಯ. ಬೀಜ, ಗೊಬ್ಬರಾದಿಗಳು ವ್ಯಯ. ಆಯದಿಂದ ವ್ಯಯ ಹೋದರೆ ಲಾಭ. ಲಾಭದ ಹಣ ಹೆಚ್ಚಾಗಬೇಕಾದರೆ ಆಯ ಹೆಚ್ಚಾಗಬೇಕು. ವ್ಯಯ ಕಡಿಮೆಯಾಗಬೇಕು. ನಮ್ಮ ಆಧುನಿಕ ಕೃಷಿ ನೀತಿ ವ್ಯಯದ ಕಡೆಗೆ ಗಮನಕೊಡುವುದಿಲ್ಲ. ವ್ಯಯ ಏನಾದರೂ ಆಗಲಿ. ಎಷ್ಟಾದರೂ ಆಗಲಿ. ಆಯ ಹೆಚ್ಚಾಗಬೇಕು. ಆದರೆ ಪ್ರಕೃತಿಯು ಆಯ ತಪ್ಪಿ ಆಯವನ್ನು ಹೆಚ್ಚಿಸಲು ಬರುವುದಿಲ್ಲ. ಹಾಗಾಗಿ ಲಾಭ ಹೆಚ್ಚು ಮಾಡಲು ನಿಜವಾದ ದಾರಿ ವ್ಯಯವನ್ನು ಕಡಿಮೆ ಮಾಡುವುದು. ಎಂದರೆ ಬೀಜ, ಗೊಬ್ಬರಾದಿಗಳ ಖರ್ಚನ್ನು ಕಡಿಮೆ ಮಾಡುವುದು ಅಥವಾ ಇಲ್ಲದಂತೆ ಮಾಡುವುದು. ಈ ಮಾರ್ಗ ಪ್ರಕೃತಿಯ ಆಯಕ್ಕೆ ಹೊಂದುತ್ತದೆ. ಆಧುನಿಕ ಕೃಷಿ ನೀತಿಯನ್ನು ಕಿತ್ತಳೆ ಹಣ್ಣಿಗೂ, ಸಹಜ ಕೃಷಿ ನೀತಿಯನ್ನು ಕೈ-ಬೆರಳುಗಳಿಗೂ ಹೋಲಿಸಬಹುದು. ಕಿತ್ತಳೆ ಹಣ್ಣು ಹೊರಗಿನಿಂದ ನೋಟಕ್ಕೆ ಒಂದಾಗಿ ಕಾಣುತ್ತದೆ. ಎಲ್ಲವೂ ಒಂದಾಗಿರುವುದು ಒಗ್ಗಟ್ಟಿನ, ಸಮಗ್ರತೆಯ, ಸಾಧನೆಯ ಸಂಕೇತ. ಆದರೆ ಸಿಪ್ಪೆ ಸುಲಿದರೆ ಒಳಗೆ ಹಲವು ತೊಳೆಗಳು. ಎಲ್ಲವೂ ಬೇರೆ ಬೇರೆ. ನಮ್ಮ ಕೈಯ ಐದು ಬೆರಳುಗಳು ನೋಟಕ್ಕೆ ಬೇರೆ ಬೇರೆಯಾಗಿ ಕಾಣುತ್ತವೆ. ಮೊಹರು ಮಾಡಿದ ಬೀಜ ಇಲ್ಲ. ಹೆಚ್ಚಿನ ಗೊಬ್ಬರ ಇಲ್ಲ. ನೀರಿಲ್ಲ. ಕಳೆ-ಕೀಟ ನಿಯಂತ್ರಣ ಇಲ್ಲ. ಎಲ್ಲವನ್ನೂ ಅವುಗಳಷ್ಟಕ್ಕೇ ಬಿಡುವುದು. ಇದು ಅಸಮಗ್ರ, ಭಿನ್ನ ಭಿನ್ನ ಎಂದೆನಿಸಬಹುದು. ಆದರೆ ಬೇರೆ ಬೇರೆಯಾದ ಐದು ಬೆರಳುಗಳುಳ್ಳ ಕೈ ನಿಜವಾಗಿ ಒಂದೇ. ಇವು ಒಂದಾಗಿ ಏನನ್ನೂ ಮಾಡಬಲ್ಲವು. ಸರಿದು ಹೋದ ನಮ್ಮ ಸಮಗ್ರತೆಯ ಕಲ್ಪನೆಯನ್ನು ಸರಿಪಡಿಸುವುದು ಇಂದಿನ ಅನಿವಾರ್ಯತೆಯಾಗಿದೆ.

ನಮ್ಮ ಆಹಾರೋತ್ಪಾದಕ ಸಸ್ಯಗಳಿಂದ ಹಿಡಿದು ಪ್ರತಿಯೊಂದೂ ಫಲ ಕೊಡುವುದು ಅಂತಿಮವಾಗಿ ಬೀಜೋತ್ಪಾದನೆಗಾಗಿ, ಮುಂದಿನ ಸಂತತಿಗಾಗಿ, ಮುಂದಿನ ತಲೆಮಾರಿನ ಬಗ್ಗೆ ಪ್ರಕೃತಿಗೆ ನಿರಂತರ ಕಾಳಜಿ ಇರುವುದರಿಂದಲೇ ಸಹಸ್ರ ಸಹಸ್ರ ಜಾತಿಯ ಸಸ್ಯಗಳನ್ನು ಕೋಟಿ ಕೋಟಿ ಸಂಖ್ಯೆಯಲ್ಲಿ ಸೃಷ್ಟಿಸುತ್ತಿದೆ. ಅದಕ್ಕಿಂತ ಮಿಗಿಲಾಗಿ ಬೀಜಗಳನ್ನು ಸೃಷ್ಟಿಸಿ ಮುಂದಿನ ವಂಶಾವಳಿಯನ್ನು ಪೋಷಿಸುತ್ತಿದೆ. ಈ ಕೈಂಕರ್ಯ ಪ್ರಕೃತಿಗಿರಬೇಕಾದರೆ ನಾವು ಹಣ ಹಾಕಿ ಹೊಸ ಬೀಜಗಳನ್ನು ಸೃಷ್ಟಿಸುವ ಹುಂಬತನ ಯಾಕೆ? ಪೇಟೆಯ ಬಣ್ಣದ ಬೀಜ ಪೊಟ್ಟಣಗಳಿಗೆ (೧೦ ಗ್ರಾಂಗೆ ೫೦೦ ರೂಪಾಯಿ!) ಕೊಡುವ ಹಣವನ್ನು ಉಳಿಸುವುದು ಗಳಿಕೆಯಲ್ಲವೇ?

ಭೂಮಿಯ ಸಾರ ಹೀರಿ ಗಿಡ ಫಸಲು ಕೊಡುತ್ತದೆ. ಆದ್ದರಿಂದ ಭೂಮಿ ಸಾರಹೀನವಾಗುತ್ತದೆ. ಹಾಗಾಗಿ ನಾವು ರಸಗೊಬ್ಬರ ಕೊಡಬೇಕು ಎಂಬುದು ಕಲ್ಪನೆ. ಆದರೆ ಇದು ಕಲ್ಪನೆಯೇ ಹೊರತು ಸತ್ಯ ಅಲ್ಲ. ಕೃತಕ ಗೊಬ್ಬರದಿಂದಾಗುವ ದೋಷ, ಅದರ ಲಭ್ಯತೆಯ ಮಿತಿ ಇತ್ಯಾದಿಗಳ ಬಗ್ಗೆ ಈಗ ಚರ್ಚಿಸುವುದಿಲ್ಲ. ಯಾವುದೇ ಸಸ್ಯ ಭೂಮಿಯಿಂದ ಸ್ವೀಕರಿಸುವುದು ಅತ್ಯಲ್ಪ. ಅದಕ್ಕಿಂತ ಬಹಳಷ್ಟು ಹೆಚ್ಚು ಪಾಲು ಗಾಳಿಯಿಂದಲೂ ಸೂರ್ಯ ಶಾಖದಿಂದಲೂ ಸ್ವೀಕರಿಸುತ್ತದೆ ಹಾಗೂ ತಾನೇನು ಭೂಮಿಯಿಂದ ಸ್ವೀಕರಿಸಿದ್ದೇನೋ ಅದಕ್ಕಿಂತ ಹೆಚ್ಚಾಗಿ ತನ್ನ ಹಳಿಯುಳಿಕೆಯ ರೂಪದಲ್ಲಿ ಭೂಮಿಗೆ ಮತ್ತೆ ಕೊಡುತ್ತದೆ. ಎಂದರೆ ಒಂದೊಂದು ಸಸ್ಯವೂ ಬೆಳೆಯುವುದರಿಂದ ಭೂಮಿಯನ್ನು ಹೆಚ್ಚು ಹೆಚ್ಚಾಗಿ ಫಲವತ್ತಾಗಿಸುತ್ತದೆ. ಒಂದೊಂದು ಕಳೆಯೂ ನಿಜವಾಗಿ ನಮಗಾಗಿ ಇರುವ ಗೊಬ್ಬರದ ಕಾರ್ಖಾನೆಗಳು. ಒಂದೊಂದು ಕಳೆಯೂ ಅಲ್ಲಿ ಬೆಳೆಯುವುದು, ಅಲ್ಲಿ ಅಷ್ಟು ಗಾಳಿಯೂ, ಬೆಳಕೂ ಇರುವುದರಿಂದ. ಅದೇ ಗಿಡವನ್ನು ನಿಮ್ಮ ಮನೆಯೊಳಗೆ, ಕತ್ತಲೆಯ ಗೂಡಿನೊಳಗೆ ಇಡಿ, ನೋಡಿ. ಅದು ಬೆಳೆಯಬಲ್ಲುದೇ? ನಮ್ಮ ಬೆಳೆಗಳು ದ್ಯುತಿ ಸಂಶ್ಲೇಷಣ ಕ್ರಿಯೆಯಿಂದ ಬೆಳೆಯುವುದರ ಜೊತೆಗೆ ಆಹಾರವನ್ನೂ ತಯಾರಿಸುತ್ತವೆ. ಈ ಕಳೆಗಳು ನಮಗೆ ಆಹಾರವಾಗದೇ ಹೋದರೂ ನಮ್ಮ ಬೆಳೆಗಳಿಗೆ ಮುಂದಿನ ಫಸಲಿಗೆ ಆಹಾರವಾಗುತ್ತದೆ. ಒಂದೊಂದು ದೊಡ್ಡ ಮರವೂ ಭೂಗರ್ಭದ ನೂರಾರು ಅಡಿ ಆಳ, ಅಗಲಗಳಿಂದ ಸಾರವನ್ನು ಹೀರಿ ತನ್ನ ಎಲೆ, ಬೆಳೆಗಳಲ್ಲಿ ಸಂಗ್ರಹಿಸಿ, ಒಟ್ಟಿನಲ್ಲಿ ಭೂಮಿಯ ಮೇಲ್ಪದರಕ್ಕೆ ಗೊಬ್ಬರವನ್ನು ತರುವ ಯಂತ್ರಗಳಾಗಿ ಕೆಲಸ ಮಾಡುತ್ತವೆ. ಹೀಗಿರುವ, ಸ್ವಯಂ ಗೊಬ್ಬರ ನಿರ್ಮಾಣದ ಪ್ರಕೃತಿಯ ಕಾಳಜಿಯನ್ನು ಒಡಕು ನಿಮ್ನ ಮಸೂರಗಳಿಂದ ನೋಡಿ ಗೊಬ್ಬರಕ್ಕಾಗಿ ಬೊಬ್ಬೆ ಹಾಕುವ ಬಗೆಗೆ ಏನೆನ್ನೋಣ? ಗೊಬ್ಬರ ಹೀರಿ, ಗೊಬ್ಬರ ಮಾಡಿ, ಆದರೆ ಅಬ್ಬರ ಮಾಡದೆ ಗಿಡ ಫಸಲು ಕೊಡುತ್ತದೆ. ಆ ಫಸಲನ್ನು ತಿಂದ ನಾವೇನೂ ಎಲ್ಲಿಗೂ ಹೋಗುವುದಿಲ್ಲವಲ್ಲಾ ಹೇತಾಗ, ಸತ್ತಾಗ ಸೇರುವುದು ಇದೇ ಮಣ್ಣನ್ನು ತಾನೆ? ಹೀಗೆ ಪ್ರಕೃತಿಯಿಂದ ಏನನ್ನು ನಾವು ಕೊಂಡಿದ್ದೇವೋ ಅದನ್ನು ಮತ್ತೆ ಹಿಂತಿರುಗಿಸಿದಾಗ ಕೊರತೆಯಾಗಲು ಹೇಗೆ ಸಾಧ್ಯ? ಸಸ್ಯ ಫಸಲು ನಮಗೆ

ಆಹಾರ. ನಮ್ಮ ತ್ಯಾಜ್ಯ ಸಸ್ಯಗಳಿಗೆ ಆಹಾರ. ಇಂಥ ನಿರಂತರ ಚಕ್ರವನ್ನು ಹಾಳುಮಾಡಿ, ಸಸ್ಯ ತ್ಯಾಜ್ಯಗಳ ವ್ಯವಸ್ಥಿತ ಮರುಬಳಕೆಯ ಬಗೆಗೆ ಯೋಚನೆಮಾಡದೆ, ಎಲ್ಲವನ್ನೂ ಮಾರಾಟಮಾಡಿ ಹಣ ಮಾಡುವ ಭ್ರಾಮಕ ಕಲ್ಪನೆಯಿಂದ, ನಾವು ಮಾರಿದುದಕ್ಕಿಂತ ಹೆಚ್ಚಿಗೆ ಹಣಕೊಟ್ಟು ಗೊಬ್ಬರ ಕೊಂಡುಕೊಳ್ಳುವ ಅಜ್ಞಾನ ದೂರವಾದಾಗ ನಮ್ಮ ಕೃಷಿಗೆ ಹಣರಹಿತ ಗೊಬ್ಬರ ನಮ್ಮಲ್ಲೇ ತಯಾರಾಗುತ್ತದೆ.

ಇಂಥಾ ವ್ಯವಸ್ಥೆಯಲ್ಲಿ ಎರೆಹುಳ ಮತ್ತು ಬ್ಯಾಕ್ಟೀರಿಯಾ ಸಂತತಿ ಸಮೃದ್ಧಿಸುತ್ತದೆ. ಗೊಬ್ಬರದ ಗುಣಮಟ್ಟ ವೃದ್ಧಿಸುತ್ತದೆ. ಸ್ವಾಭಾವಿಕ ಉಳುಮೆಯೂ ಆಗುತ್ತದೆ, ಗಾಳಿ ಮತ್ತು ನೀರಿನ ಸುಗಮ ಸಂಚಾರಕ್ಕೆ ದಾರಿಯಾಗುತ್ತದೆ. ಭೂಮಿಯ ಶಾಖ ತಗ್ಗುತ್ತದೆ. ನೀರು ಹಿಡಿದಿಡುವ ಶಕ್ತಿ ಏರುತ್ತದೆ. ನೀರಿನ ಅವಶ್ಯಕತೆ ಬರಬರುತ್ತಾ ಕಡಿಮೆಯಾಗುತ್ತದೆ.

ತೀರಾ ಸಣ್ಣ ಬೆಳೆಗಳ ಸಂದರ್ಭದಲ್ಲಿ ಕಳೆಗಳನ್ನು ಹಿತಶತ್ರುಗಳೆಂದು ಕಾಣ ಬೇಕಾಗುತ್ತದೆ. ಕಳೆಯಿಂದ ಕಳೆನಾಶ ನಮ್ಮ ಧೋರಣೆಯಾಗಬೇಕಾಗುತ್ತದೆ. ಎಂದರೆ ಎಲ್ಲಾ ಕಡೆ ಬೆಳೆದಿರುವ ಕಳೆಗಳನ್ನು ನಮ್ಮ ಉದ್ದೇಶಿತ ಗಿಡಗಳ ಸುತ್ತ ಸವರಿ ಮುಚ್ಚಿದರೆ ಅಲ್ಲಿಯ ಕಳೆ ನಿಯಂತ್ರಣವು ಆಗುತ್ತದೆ. ಆರ್ದ್ರತೆಯನ್ನು ಕಾಪಾಡಿದಂತೂ ಆಗುತ್ತದೆ, ಗರಿಕೆ, ಭದ್ರಮುಷ್ಟಿ, ಪಾರ್ಥೇನಿಯಂ ಮೊದಲಾದ ಕಳೆ ನಿಯಂತ್ರಣದ ದೃಷ್ಟಿಯಿಂದ ಅವಕ್ಕಿಂತ ಸುಲಭ ಕಳೆಗಳನ್ನು, ಮುಚ್ಚು ಬೆಳೆಗಳನ್ನು ಬೆಳೆಯಬಹುದು.

ಬೆಳೆಗಳ ಮೇಲೆ ನಮಗಿರುವಷ್ಟೇ ಹಕ್ಕು ಕೀಟಗಳಿಗೂ ಇವೆ ಎಂಬುದನ್ನು ಮೊದಲು ನೆನಪಿಟ್ಟುಕೊಂಡು ಆ ಮೇಲೆ ನಿಯಂತ್ರಣದ ಬಗ್ಗೆ ಯೋಚಿಸಬೇಕು. ಸ್ವಾಭಾವಿಕವಾದ ಬೀಜ, ಗೊಬ್ಬರ ಉಪಯೋಗಿಸಿದಾಗ, ಮಿಶ್ರ ಬೆಳೆ ಪದ್ಧತಿ ಅನುಸರಿಸಿದಾಗ, ಕಾಡು–ಕೃಷಿ ಕೂಡಿ ನಡೆದಾಗ ಕೀಟ–ರೋಗ ಬಾಧೆಗಳು ಬಹಳಾ ಬಹಳಾ ಕಡಿಮೆಯಾಗುತ್ತವೆ. ಕಾಡ್ಗಿಚ್ಚು ಹೆಚ್ಚಾಗಿ ಹಬ್ಬ ಬಾರದೆಂದು ಒಂದಷ್ಟು ಅಗಲ ಪಟ್ಟೆಯಂತೆ ಚೊಕ್ಕಟ ಮಾಡುತ್ತಾರೆ ಇದನ್ನು "ಬೆಂಕಿ ತಡೆ" ಎನ್ನುವರು. ಹಾಗೆಯೇ ಮಿಶ್ರ ಬೆಳೆಗಳು "ರೋಗ ತಡೆ"ಗಳಾಗುತ್ತವೆ. ರೋಗಗಳು ತೀವ್ರವಾಗಿ ಮುಂದಕ್ಕೆ ಹಬ್ಬುವುದನ್ನು ಇನ್ನೊಂದು ಬೆಳೆ ತಡೆಯುತ್ತದೆ. ಹಲವೊಂದು ಸಸ್ಯ ವೈವಿಧ್ಯಗಳಿದ್ದಾಗ ಒಂದು ಸಸ್ಯ ಇನ್ನೊಂದರ ರೋಗಕ್ಕೆ ಔಷಧಿಯೂ ಆಗುತ್ತದೆ. ಹತ್ತಿರ ಹತ್ತಿರ ಮರಗಳಿದ್ದಾಗ ಜೇಡಗಳಿಗೆ ಬಲೆ ಹೆಣೆಯಲು ಅವಕಾಶವಾಗುತ್ತದಾಗಿ ಕೀಟ ನಿಯಂತ್ರಣ ಸಲೀಸಾಗುತ್ತದೆ. ನಮ್ಮ ಕೃಷಿ ಕ್ಷೇತ್ರದಲ್ಲಿ ಹಕ್ಕಿಗಳಿಗಾಗಿಯೇ ಒಂದಷ್ಟು ಹಣ್ಣಿನ ಮರಗಳಿದ್ದಾಗ, ಆ ಹಕ್ಕಿಗಳಿಂದಲೂ ಕೀಟ ನಿಯಂತ್ರಣ ನಡೆಯುತ್ತದೆ. ಹಕ್ಕಿಯ ಹಿಕ್ಕೆ ತೋಟಕ್ಕೆ ಉಚಿತ ಗೊಬ್ಬರವಾಗುತ್ತದೆ ಹಾಗೂ ಸುಲಭದ ಬೀಜ ಪ್ರಸಾರವೂ ಆಗುತ್ತದೆ. ಇಷ್ಟೆಲ್ಲಾ ಆಗಿಯೂ ರೋಗ ಬಂದಿದೆ ಎಂದಿಟ್ಟುಕೊಳ್ಳೋಣ. ಇಂಥಾ ಸಂದರ್ಭಗಳಲ್ಲಿ ಉಪಯೋಗಿಯಾಗಲು ವಿಷಪರಾಜಿ, ಬೇವು, ಎಕ್ಕ ಮೊದಲಾದ ಪ್ರಾಕೃತಿಕ ಕೀಟ ನಿಯಂತ್ರಕಗಳು ನಮ್ಮ ಜಾಗದಲ್ಲಿ ಅಲ್ಲಲ್ಲಿ ಬೆಳೆದಿರಲಿ ಹಾಗೂ ನಿಯಂತ್ರಣವಾಗದಿದ್ದರೆ ತಲೆಕೆಡಿಸಿಕೊಳ್ಳು

ವುದು ಬೇಡ. ವರ್ಷದಿಂದ ವರ್ಷಕ್ಕೆ ಸಾವಿರ ಸಾವಿರ ಟನ್ನುಗಳಲ್ಲಿ ರಾಸಾಯನಿಕ ಕೀಟನಾಶಕಗಳು ಹೆಚ್ಚುವರಿಯಾಗಿ ಬಳಕೆಯಾಗುತ್ತಿದ್ದರೂ ರೋಗ-ಕೀಟ ನಿಗ್ರಹಿಸಲ್ಪಟ್ಟ ಉದಾಹರಣೆ ಇಲ್ಲ. ಹೆಚ್ಚುವರಿ ಬಳಕೆಯೇ ರೋಗ ಹೆಚ್ಚಿದ್ದಕ್ಕೆ ನಿದರ್ಶನಗಳಾಗಿವೆ. ಹಾಗಾಗಿ ಅವುಗಳನ್ನು ಉಪಯೋಗಿಸದಿರುವುದರಿಂದ ಆ ಬಾಬಿನ ಖರ್ಚು ಉಳಿದಂತಾಯಿತು. ವಿಷರಹಿತ ಆಹಾರ ನಮಗೆ ಬಂದಂತಾಯಿತು. ಇನ್ನು ನಮ್ಮದು ಮಿಶ್ರ ಬೆಳೆ ಪದ್ಧತಿ—ನೆನಪಿಟ್ಟುಕೊಳ್ಳಿ. ಒಂದರಲ್ಲಿ ಕಳಕೊಂಡುದನ್ನು ಇನ್ನೊಂದರಲ್ಲಿ ಪಡೆಯುತ್ತೇವೆ. ಆದ್ದರಿಂದ ಎಕ್ರೆವಾರು ಇಳುವರಿ ಸಮವಾಗಿರುತ್ತದೆ ಅಥವಾ ಮಿಗಿಲಾಗಿರುತ್ತದೆ. ಪ್ರಕೃತಿಯ ಪ್ರಕೋಪ, ರೋಗದ ವಿಪರೀತ ಬೆಲೆಯ ಏರುಪೇರು ಹೀಗೆ ಎಲ್ಲ ರೀತಿಯ ವೈರುಧ್ಯಗಳಿಗೂ ಮಿಶ್ರ ಬೆಳೆ ಸಮರ್ಥ ಉತ್ತರವಾಗಿದೆ.

ನಮ್ಮ ಎಲ್ಲಾ ಬೆಳೆಗಳೂ ಒಂದು ಕಾಲಕ್ಕೆ ಕಾಡು ಬೆಳೆಗಳೇ ಆಗಿದ್ದುವು ಎಂಬುದನ್ನು ಮೊದಲೇ ಚರ್ಚಿಸಿದ್ದೆ. ಕಾಡಿನಲ್ಲಿ ನಮಗೆ ಆಹಾರವಾಗಬಲ್ಲ ಸಾವಿರಾರು ಜಾತಿಯ, ಹಣ್ಣು, ಸೊಪ್ಪು, ತರಕಾರಿ, ಧಾನ್ಯಗಳು ಇದ್ದುವು ಆದರೆ ಸ್ವಯಂಕೃತವಾದ ಹಲವಾರು ಸಾಮಾಜಿಕ, ಆರ್ಥಿಕ ಕಾರಣಗಳಿಗಾಗಿ ನಾವು ಹೆಚ್ಚಿನವನ್ನೆಲ್ಲಾ ಬಿಟ್ಟು ಕೇವಲ ಕೆಲವೇ ಕೆಲವು ವಸ್ತುಗಳಿಗೆ ಸೀಮಿತರಾಗುತ್ತಿದ್ದೇವೆ. ಅಕ್ಕಿ ತಿಂದವ ಶ್ರೇಷ್ಠ—ರಾಗಿ ತಿಂದವ ಕನಿಷ್ಠ; ಕೋಸು ತಿಂದರೆ ಲೇಸು—ಸೊಪ್ಪು ತಿಂದರೆ ಬೂಸು; ಸೇಬು ಸವಿದರೆ ಸ್ವರ್ಗ—ಸೀಬೆ ಕಡಿದರೆ ನರಕ ಹೀಗೆ ಒಂದೊಂದರಲ್ಲೂ ನಾವು ಒಡಕು ದೃಷ್ಟಿ ನೆಟ್ಟು, ಸುಲಭವಾಗಿ ಋತುಮಾನಕ್ಕೆ ತಕ್ಕಂತೆ, ಭೂ ಭಾಗಕ್ಕೆ ಸಂಬಂಧಿಸಿದಂತೆ ಬೆಳೆಯುವ ಹಲವೊಂದು ಫಲವಸ್ತುಗಳನ್ನು ಕಳಕೊಂಡಿದ್ದೇವೆ. ನಮ್ಮ ಭ್ರಾಮಕ ಶ್ರೇಷ್ಠತೆಗೆ ಪೂರಕವಾಗುವ ವಸ್ತುಗಳನ್ನು ಅಕಾಲದಲ್ಲಿ ಅತಿಯಾಗಿ ತಿನ್ನುವ ಅವಸರದಲ್ಲಿ ಸುಲಭವಾಗಿ ಬೆಳೆಯಬಲ್ಲವಾಗಿದ್ದರೂ, ಹಾಗೆ ಬೆಳೆಯದಂತೆ ಮಾಡಿ. ನಮ್ಮ ಅಸ್ಥಿತ್ವವನ್ನು ಪ್ರದರ್ಶಿಸುತ್ತಿದ್ದೇವೆ. ನೂರೆಕ್ರೆ ಜಮೀನಿರುವವನೂ ಹಲಸಿನ ಹಣ್ಣಿಗೆ, ನೇರಳೆ ಹಣ್ಣಿಗೆ, ಸೀತಾಫಲಕ್ಕೆ... ಪೇಟೆಯ ಮುಖ ನೋಡುತ್ತಾನೆ. ಅವನು ಬೆಳೆಯುವುದು ಇನ್ನೇನನ್ನೋ. ಅಡಿಕೆಯವ, ತೆಂಗಿನವ, ಭತ್ತದವ, ರಾಗಿಯವ, ಮಾವಿನವ... ಹೀಗೆ ಕ್ಷೇತ್ರದಲ್ಲಿ ವರ್ಗೀಕರಣ ಇರುವುದು ಸಧ್ಯದ ಪರಿಸ್ಥಿತಿಯಲ್ಲಿ ಸ್ವಲ್ಪ ಮಟ್ಟಿಗೆ ಅನಿವಾರ್ಯವಾದರೂ ಈ ಗಡಿ ಇಷ್ಟೊಂದು ಗಡಸಾಗಿ ಇರಬೇಕಾಗಿರಲಿಲ್ಲ. ಅಡಿಕೆಯ ಸಾಹುಕಾರ ನೂರು ಗ್ರಾಂ ಅರಸಿನವನ್ನು, ಒಂದು ತುಂಡು ಶುಂಠಿಯನ್ನು ಎರಡು ಲಿಂಬೆ ಹಣ್ಣನ್ನು, ಕೊಳೆತು ನಾರುವ ಪೇಟೆಯಿಂದ ಚೌಕಾಸಿಮಾಡಿ ತರುವ ದಿವಾಳಿತನವನ್ನು ಯಾಕೆ ಪ್ರದರ್ಶಿಸಬೇಕು?

ಮಿಶ್ರ ಬೆಳೆ ಹೇಗಿರಬೇಕು? ಎಷ್ಟಿರಬೇಕು? ಎಂಬಿತ್ಯಾದಿಗಳಿಗೆ "ಇದಮಿತ್ಥಂ" ಎಂದು ಉತ್ತರಕೊಡಲು ಯಾರಿಂದಲೂ ಸಾಧ್ಯವಿಲ್ಲ. ಅದು ವ್ಯಕ್ತಿ, ದೇಶ, ಕಾಲಕ್ಕೆ ಸಂಬಂಧಿಸಿದಂತೆ ಅವರವರೇ ಪ್ರಯೋಗಗಳಿಂದ ಕಂಡುಕೊಳ್ಳಬೇಕಾಗಿರುವುದು. ಆದರೆ ಎಲ್ಲರೂ ಕೆಲವು ಸರಳ ಸೂತ್ರಗಳನ್ನು ನೆನಪಿಟ್ಟುಕೊಳ್ಳಬೇಕು.

೧. ಯಾವುದೇ ಸಸ್ಯ ನಾವು ಬೆಳೆಸುವುದಲ್ಲ. ಅದು ಬೆಳೆಯುವುದು.

೨. ನಮ್ಮದು ಪೇದೆಯ ಕೆಲಸ. ಅವಾಗಿ ಬೆಳೆಯಬಲ್ಲ ಸಸ್ಯಗಳ ಸಮರ್ಥ ಹೊಂದಾಣಿಕೆಯಷ್ಟೇ ನಮ್ಮ ಕರ್ತವ್ಯ.

೩. ನೆಡಲು ಬಲ್ಲ ನಮಗೆ ಬೇಕೆಂದಾಗ, ಬೇಡವೆಂದಾಗ ಕಡಿಯಲೂ ಬರುತ್ತದೆ.

೪. ಉದ್ದೇಶಗಳನ್ನು ಅರ್ಥವಿಸಿಕೊಂಡು, ಅನುಭವಿಸಿಕೊಂಡು ನಾವು ಯಾವುದೇ ಕೆಲಸಗಳನ್ನು ಮಾಡಬೇಕು ಹಾಗೂ ಮಾಡದೆಯೂ ಇರಬೇಕು.

೫. ನಮ್ಮ ಪ್ರೀತಿಯ ಗಿಡಗಳಿಗೆ ಗೊಬ್ಬರ ಎಷ್ಟು ಬೇಕೆಂದು ವಿಜ್ಞಾನಿ ಹೇಳುವುದಲ್ಲ ಅವು ಹೇಳಬೇಕು.

೬. ಅಧಿಕಫಸಲಿನ ಅಮಲು ಬಿಡಬೇಕು.

೭. ಪರಿಸರ ಪ್ರಜ್ಞೆ, ಆರ್ಥಿಕ ಚಿಂತನೆಗಳ ಸಮರ್ಥ ಸಮನ್ವಯ ನಮ್ಮ ಗುರಿಯಾಗಬೇಕು.

ಈ ಎಲ್ಲಾ ತತ್ವಗಳ ಹಿನ್ನೆಲೆಯಲ್ಲಿ ಸತ್ವಯುತವಾಗಿ ನನ್ನ ತೋಟವನ್ನು ನಿರ್ಮಿಸಲು ಪ್ರಯತ್ನಿಸುತ್ತಿದ್ದೇನೆ. ಸ್ಥೂಲ ವಿವರಗಳು ಇಂತಿವೆ. ನನ್ನ ಹದಿಮೂರುವರೆ ಎಕ್ರೆ ತೋಟದ ೧೧ ಎಕ್ರೆಯಲ್ಲಿ ಪೂರ್ಣ ತೆಂಗು ಇದೆ. ೩೦ ಅಡಿ ಅಂತರ ಇದರ ಮಧ್ಯೆ ಅರಸಿನ, ಶುಂಠಿ, ಆರಾರೋಟು, ಬಾಳೆ, ತ್ಯಾಪ, ಕೇನೆ, ಮುಂಡಿ, ಕೆಸುವು, ಗೆಣಸು ಹೀಗೆ ಹಲವೊಂದು ಜಾತಿಯ ಗೆಡ್ಡೆ ಬೆಳೆಗಳು ಅಥವಾ ಕಳೆಗಳು ಇವೆ. ಗೆಡ್ಡೆಗಳು ಸದಾ ಭೂಮಿಯನ್ನು ಒಡೆಯುವ, ಉಳುಮೆ ಮಾಡುವ ಭೂ ಗುಣವನ್ನು ಉತ್ತಮಗೊಳಿಸುವ ಸಮರ್ಥ ಸ್ವಾಭಾವಿಕ ವಿಧಾನಗಳಾಗಿವೆ. ಗೆಡ್ಡೆಗಳಾದ ಮೇಲೆ ನೂರಾರು ಜಾತಿಯ ಸಾವಿರಾರು ಔಷಧೀಯ ಸಸ್ಯಗಳು, ಅಲಂಕಾರಿಕ ಸಸ್ಯಗಳು, ಸುವಾಸನೆಯ ಸಸ್ಯಗಳು, ಎಡೆ ಸ್ಥಳಗಳನ್ನು ತುಂಬಿವೆ. ಇವುಗಳು ಮನುಷ್ಯನಿಗೂ, ಬೆಳೆಗಳಿಗೂ ಔಷಧಿಗಳಾಗ ಬಲ್ಲವು. ಉದಾಹರಣೆಗೆ ತುಳಸಿ, ಪುದಿನಾ, ಆಡುಸೋಗೆ, ಎಕ್ಕ, ವಿಷಪರಾಜಿ, ದೊಡ್ಡಪತ್ರೆ, ಬಾಸುಮತಿ ಸೊಪ್ಪು, ನಾಗದಾಳಿ, ವಿಷಮುಂಗುಲಿ, ಗರುಗ, ದಾಸವಾಳ, ಕ್ರೋಟನ್ ಹೀಗೆ ಒಂದಲ್ಲ, ಎರಡಲ್ಲ ೧೨೦೦ ಸಸ್ಯ ಪ್ರಭೇದಗಳನ್ನು ತೋಟದ ತುಂಬೆಲ್ಲಾ ತುಂಬಿದ್ದೇನೆ ಇವುಗಳಲ್ಲಿ ೮೦ಕ್ಕೂ ಮಿಕ್ಕ ಹಣ್ಣಿನ ವಿಧಗಳು, ೧೫೦ಕ್ಕೂ ಮಿಕ್ಕ ಅರಣ್ಯ ವೈವಿಧ್ಯಗಳೂ ಸೇರಿವೆ. ಈ ಅರಣ್ಯ ವೃಕ್ಷಗಳನ್ನೆಲ್ಲಾ ೪ ಅಡಿ ಎತ್ತರದಲ್ಲಿ ಕತ್ತರಿಸುತ್ತಾ ಕೊಡೆಯ ರೂಪ ಕೊಡುತ್ತೇನೆ. ಇದರಿಂದ ತೋಟವನ್ನು ತುಂಬಲು ಧಾರಾಳವಾಗಿ ಸೊಪ್ಪು ಸಿಗುತ್ತದೆ. ದನಗಳಿಗೆ ಮೇವೂ ಆಗುತ್ತದೆ. ಲಕ್ಷಗಟ್ಟಲೆ ಬೇವು ಹಾಗೂ ಹೊಂಗೆ ಗಿಡಗಳನ್ನು ಸಮಾನಾಂತರ ಸಾಲುಗಳಲ್ಲಿ ಗೇಣಿಗೊಂದರಂತೆ ನೆಟ್ಟು ಕತ್ತರಿಸುತ್ತಿದ್ದೇನೆ. ಇವೆಲ್ಲವೂ ಮಿಶ್ರ ಬೆಳೆಗಳೆ. ಆದರೆ ಇವಕ್ಕೆ ಆರ್ಥಿಕ ದೃಷ್ಟಿಯಿಂದ ಅಷ್ಟು ಮಹತ್ವ ಇಲ್ಲವೆನ್ನಬಹುದು. ಆರ್ಥಿಕ ಮಿಶ್ರ ಬೆಳೆಗಳು ಈ ಕೆಳಗಿನಂತಿವೆ. ಮೇಲೆ ಹೇಳಿದ ಎಲ್ಲಾ ಬೆಳೆಗಳೂ ಕೆಳಗೆ ಹೇಳುವ ಮಿಶ್ರಣದ ಜೊತೆಗೆ ಇವೆ ಎಂಬುದನ್ನು ನೆನಪಿಟ್ಟುಕೊಳ್ಳಿ.

೧. ತೆಂಗು+ಅಡಿಕೆ+ವೀಳ್ಯ+ಕರಿಮೆಣಸು+ವೆನಿಲಾ.

೨. ತೆಂಗು+ಮುಸುಂಬಿ+ಕಾಫಿ

೩. ತೆಂಗು+ಸಾಗುವಾನಿ+ಕರಿಬೇವು+ಲಿಂಬೆ+ಬೆಣ್ಣೆ ಹಣ್ಣು

೪. ತೆಂಗು+ಸಾಗುವಾನಿ+ಅಡಿಕೆ+ಲಿಂಬೆ+ಕರಿಬೇವು.

೫. ತೆಂಗು+ಸಾಗುವಾನಿ+ಅಡಿಕೆ+ಮಾವು

೬. ತೆಂಗು+ಸಪೋಟ+NB೨೧ ಹುಲ್ಲು

೭. ತೆಂಗು+ಕಾಫಿ

೮. ತೆಂಗು+ದಾಳಿಂಬೆ+ಕೊಕ್ಕೋ+ಹೆರಳೆ

೯. ತೆಂಗು+ಅಡಿಕೆ+ಸೀತಾಫಲ

೧೦. ತೆಂಗು+ಅಡಿಕೆ+ಲಿಂಬೆ

೧೧. ತೆಂಗು+ಗಿಡಗಳ ನರ್ಸರಿ

೧೨. ಅಡಿಕೆ

೧೩. ಗದ್ದೆ

೧೪. ತೆಂಗು+ಅಡಿಕೆ+ಜಾಯಿಕಾಯಿ

ಬೂದುಕುಂಬಳ, ಸಿಹಿಕುಂಬಳ, ಹಾಗಲ, ಪಪ್ಪಾಯಿ, ಟೊಮೆಟೋ, ಸೀಮೆಬದನೆ, ಹಲವುಜಾತಿಯ ಸೊಪ್ಪು ತರಕಾರಿಗಳು ನನ್ನ ತೋಟದಲ್ಲಿ ಪೂರ್ತಿಯಾಗಿ ಕಾಡು ಉತ್ಪತ್ತಿ. ನಾವು ಉಪಯೋಗಿಸಿದ ಹಣ್ಣು ತರಕಾರಿ ಬೀಜಗಳನ್ನು ತೋಟದಲ್ಲೆಲ್ಲಾ ಎಸೆಯುತ್ತಾ ಇರುವುದು. ಅವು ಎಲ್ಲೆಂದರಲ್ಲಿ ಬೆಳೆದು ಬರುತ್ತಾ ಇರುತ್ತವೆ.

ತೋಟದ ಸುತ್ತ ತಂತಿ ಬೇಲಿಯನ್ನು ಜೀವಂತಗೊಳಿಸಲು ಸುಬಾಬುಲ್, ದಾಸವಾಳ, ಆಡುಸೋಗೆ, ಭೊಗನ್‌ವಿಲ್ಲಾ, ಕಳ್ಳಿ, ಕಗ್ಗಲಿ, ಹೀಗೆ ಒಂದಿಲ್ಲೊಂದು ಸಸ್ಯಗಳನ್ನು ಬೆಳೆಸಿ ಮೇವು, ಗೊಬ್ಬರ, ಉತ್ಪಾದಿಸುತ್ತಿದ್ದೇನೆ. ಬೇಲಿ ಬಿಟ್ಟು ೧ ಅಡಿ ದೂರದಲ್ಲಿ ೬ ಅಡಿ ಅಂತರದಲ್ಲಿ ಸುರಾಯಿ, ಸಿಲ್ವರ್‌ಚೌಕ್ ಹಾಗೂ ಇತರೆ ಮೋಪಿನ ಮರಗಳನ್ನು ನೇರವಾಗಿ ಬೆಳೆಸಿದ್ದೇನೆ.


ಇಷ್ಟೆಲ್ಲಾ ಇದ್ದು ಇನ್ನೂ ಮಾಮೂಲಿ ಗರಿಕೆ ಇತ್ಯಾದಿ ಕಳೆಗಳೂ ಇವೆ. ಇದು ಏನು ಹೇಳುತ್ತದೆಂದರೆ ಭೂಮಿಯಲ್ಲಿ ಇನ್ನೂ ಸಾರ ಇದೆ. ಗಾಳಿಬೆಳಕು ಅದಕ್ಕು ಸಿಕ್ಕುತ್ತದೆ. ಭೂಮಿಯಲ್ಲಿ ಹೆಚ್ಚುಹೆಚ್ಚಾಗಿ ಸಸ್ಯಗಳು ಬೆಳೆದಷ್ಟು ಅದು ಹೆಚ್ಚುಹೆಚ್ಚಾಗಿ ಫಲವತ್ತಾಗುತ್ತದೆ. ನಾವು ತಿಳಿದಂತೆ ಫಲಹೀನ ಅಲ್ಲ. ಮರಗಳು ಕಮ್ಮಿ ಆದಷ್ಟು ಭೂಮಿ ಬರಡಾಗುತ್ತದೆ. ಕೃಷಿ ಅರಣ್ಯ-ಅರಣ್ಯ ಕೃಷಿ ಒಂದಾದಾಗಲೇ ಕೃಷಿ ಋಷಿಯಾಗುತ್ತದೆ.

ಕೇಳುತ್ತಾ ಕೇಳುತ್ತಾ ನಿಮಗೆ ಈ ಕೃಷಿ ಬಹಳ ಸುಲಭ. ನಾವು ಏನೂ ಮಾಡಬೇಕಾಗಿಲ್ಲ. (ಸನ್ಯಾಸಿಯಾದರೆ ಆದೀತು) ಸೋಮಾರಿತನಕ್ಕೆ ಇಲ್ಲಿ ಎಡೆ ಇಲ್ಲ. ಇಲ್ಲಿಯೂ ಧಾರಾಳವಾಗಿ ಕೆಲಸಗಳಿವೆ. ಆದರೆ ಇಲ್ಲಿ ಎಲ್ಲವನ್ನೂ ಪ್ರೇಮದಿಂದ ಮಾಡುತ್ತೇವೆ. ಆತ್ಮೀಯವಾಗಿ ಮಾಡುತ್ತೇವೆ. ಆದರೆ ಅಲ್ಲಿ ಎಲ್ಲವನ್ನೂ ಪ್ರೇಮದಿಂದ ಮಾಡುತ್ತೇವೆ. ಆತ್ಮೀಯವಾಗಿ ಮಾಡುತ್ತೇವೆ. ಆದರೆ ಅಲ್ಲಿ ಎಲ್ಲವನ್ನೂ ದ್ವೇಷದಿಂದ ಮಾಡುತ್ತೇವೆ. ತಿರಸ್ಕಾರದಿಂದ ಮಾಡುತ್ತೇವೆ.

ಈ ಪ್ರಪಂಚದಲ್ಲಿ ಒಳ್ಳೆಯಯುದ್ಧವೆಂಬುದಿಲ್ಲ.

ಕೆಟ್ಟ ಶಾಂತಿ ಎಂಬುದೂ ಇಲ್ಲ.

ಕೆಲಸದವನೊಬ್ಬ ಸೌದೆ ಕಟ್ಟನ್ನು ತಂದು ಮೆಲ್ಲನೆ ನೆಲಕ್ಕಿಟ್ಟನಂತೆ. ಆಗ ಯಜಮಾನನಾದವನು "ಅದನ್ನು ಹೊತ್ತು ಹಾಕಬಾರದೇ ಮೆಲ್ಲನಿಡುವ ಆವಶ್ಯಕತೆ ಏನು?" ಎಂದನಂತೆ. ಯಜಮಾನನ ಆಜ್ಞಾನುವರ್ತಿಯಾದ ನಮ್ಮ ಸೇವಕನು ಮುಂದೊಂದು ದಿನ ಮಡಕೆ ಹೊತ್ತು ಬಂದವನು ಹೊತ್ತೇ ಹಾಕಿದನಂತೆ. ನಮ್ಮ ಕೃಷಿ ಕಿಂಕರತೆಯೂ ಈಗ ಈ ಧಾ ಯಲ್ಲಿದೆ. ಒಂದೊಂದಕ್ಕೂ ವಿಜ್ಞಾನಿಗಳ ತಜ್ಞರ ಮುಖನೋಡುವಂತಾಗಿದೆ. ನಾ ಲ್ಲರೂ ವಿವೇಕವುಳ್ಳ ಯಜಮಾನ ರಾಗಬೇಕು. ಪ್ರಶ್ನಿಸುವ, ವಿಮರ್ಶಿ ಸುವ ಕುತೂಹಲ ನಮ್ಮ ಆಸ್ತಿಯಾ ಬೇಕು.



ಬಹು ಜನ್ಮದ ಪುಣ್ಯ ಕೊಟ್ಟು ಈ ಮಾನವ ಜನ್ಮದಲ್ಲಿ ಹುಟ್ಟಿ ಬಂದಿದ್ದೇವೆ. ಜ್ಞಾನ ಸುಜ್ಞಾನಗಳನ್ನು ಪಡೆದುಕೊಂಡು ಬಂದಿದ್ದೇವೆ. ಕೋಟ್ಯಾನುಕೋಟಿ ಜೀವನಗಳಲ್ಲಿ ನಾವು ಮಾಡಿದ ಹಿಂಸೆ, ಅತ್ಯಾಚಾರಗಳನ್ನು ಈ ಉಚ್ಚ ಮಾನವ ಜನ್ಮದಲ್ಲಿಯಾದರೂ ಬಿಟ್ಟುಕೊಟ್ಟು ಅತಿಮಾನವರಾಗಲು ಪ್ರಯತ್ನಿಸೋಣ.

—ಪರಮಹಂಸ

ಒಳ್ಳೆಯುದನ್ನು ಮಾಡಲು ಜನತೆಗೆ ಕಲಿಸುವದು, ಅನುಕೂಲಮಾಡಿಕೊಡುವದು ಮತ್ತು ಕೆಡುಕನ್ನು ಮಾಡದಂತೆ ಪ್ರತಿಭಟಿಸುವದು, ಸರಕಾರದ ಸರಿಯಾದ ಕರ್ತವ್ಯವಾಗಿರುವದು.

—ಗ್ಲ್ಯಾಡ್‌ಸ್ಟನ್

ಅಡುಗೆ ಅನಿಲ ದುರಂತ: ತಡೆಗಟ್ಟುವ ಕ್ರಮಗಳು

ಡಾ|| ಕೃಷ್ಣ ಹಾಸನ

ಮಾನವ ವೈಜ್ಞಾನಿಕವಾಗಿ ಮುಂದುವರಿದಂತೆಲ್ಲ ಅವನ ಬದುಕು ಯಾಂತ್ರಿಕವಾಗುತ್ತಿದೆ. ಜೀವನವೇನೋ ಮೇಲುನೋಟಕ್ಕೆ ಸುಗಮವೆನಿಸುತ್ತದೆ. ಆದರೆ ಈ ಯಂತ್ರ ಜಗತ್ತು ತಂದೊಡ್ಡುವ ಆಪತ್ತುಗಳು ಅನೇಕ. ಮನುಷ್ಯ ಬೆಂಕಿಯ ಉಪಯೋಗವನ್ನು ಕಂಡುಕೊಂಡಂದಿನಿಂದ ಇಂದಿನವರೆಗೂ ಸೌದೆಯನ್ನು ಉರವಲಾಗಿ ಉಪಯೋಗಿಸುತ್ತ ಬಂದಿದ್ದಾನೆ. ಪ್ರಕೃತಿಯಲ್ಲಿ ಈ ಉರವಲು ಯಥೇಚ್ಛವಾಗಿ ದೊರೆಯುತ್ತಿತ್ತು. ಆದರೆ ಕಾಲ ಬದಲಾದಂತೆ ಕಾಡು ನಾಶವಾಗತೊಡಗಿದಂತೆ ನಾಗರಿಕ ಬದುಕಿನಲ್ಲಿ ಉರವಲು ದೊಡ್ಡ ಸಮಸ್ಯೆಯಾಗತೊಡಗಿತು. ಈ ಸಮಸ್ಯೆಯ ನಿವಾರಣೆಗೆ ಅನೇಕ ಮಾರ್ಗೋಪಾಯಗಳನ್ನು ಆತ ಕಂಡುಕೊಳ್ಳಲಾರಂಭಿಸಿದ. ಇದರ ಪರಿಣಾಮವಾಗಿ ಕಲ್ಲಿದ್ದಲು, ಸೀಮೆ ಎಣ್ಣೆ, ವಿದ್ಯುಚ್ಛಕ್ತಿಗಳ ಉಪಯೋಗ ಬಳಕೆಗೆ ಬಂತು. ಕಾಲಕ್ರಮೇಣ ಈ ಉರವಲು ವ್ಯವಸ್ಥೆ ಕೂಡ ಸಾಕಾಗದಾಗ ಪೆಟ್ರೋಲಿಯಮ್‌ನ ಉತ್ಪನ್ನವಾದ ಗ್ಯಾಸ್ ಅಥವಾ ಅಡುಗೆ ಅನಿಲ ಬಳಕೆಗೆ ಬರತೊಡಗಿತು. ಅಡುಗೆಯ ಕೆಲಸ ಗ್ಯಾಸ್‌ನಲ್ಲಿ ಅತ್ಯಂತ ಆರಾಮದಾಯಕವಾಗಿರುತ್ತದೆ – ಕಣ್ಣುರಿಗೊಳಿಸುವ, ಉಸಿರುಕಟ್ಟಿಸುವ ಹೊಗೆಯ ಹಾವಳಿಯಿಲ್ಲ, ಕೈ ಮಸಿಯಾಗುವಂತಿಲ್ಲ, ಪಾತ್ರೆಗಳು ಮಸಿಯಾಗುವಂತಿಲ್ಲ, ಅನಿಲ ಬಳಸಿ ಅಡುಗೆ ಮಾಡುವುದರಿಂದ ಶ್ರಮ, ಸಮಯ ಎರಡೂ ಉಳಿತಾಯವಾಗುತ್ತದೆ.

ಇದೆಲ್ಲ ಮೇಲುನೋಟಕ್ಕೆ ನಿಜ. ಆದರೆ ಅಂತರಂಗದಲ್ಲಿ ಅಷ್ಟೇ ದೊಡ್ಡ ಅಪಾಯವೊಂದು ಅಡಗಿದೆ. ಅದೇ ಅನಿಲ ಅಪಘಾತ! ಸಿಲಿಂಡರ್ ಸ್ಫೋಟ! ಇತರ ರಾಷ್ಟ್ರಗಳಿಗೆ ಹೋಲಿಸಿ ಹೇಳುವುದಾದರೆ ಅನಿಲ ಅಪಘಾತಗಳಿಂದ ಸಾಯುವವರ ಸಂಖ್ಯೆ ಭಾರತದಲ್ಲಿಯೇ ಹೆಚ್ಚು. ಈ ಅನಿಲ ಅಪಘಾತಗಳು ಏಕೆ ಸಂಭವಿಸುತ್ತವೆ, ಹೇಗೆ ಸಂಭವಿಸುತ್ತವೆ, ಇವುಗಳನ್ನು ತಡೆಗಟ್ಟುವ ಕ್ರಮಗಳೇನು ಮೊದಲಾದ ಸಂಗತಿಗಳನ್ನು ಪರಿಶೀಲಿಸಬಹುದು.

ದೀಪಕ್ ತಂಡನ್ ವಾರಣಾಸಿಯ ನಿವಾಸಿ. ಮಧ್ಯಾಹ್ನದ ಹಗಲು ನಿದ್ದೆ ಮುಗಿಸಿ ಎದ್ದು ತಾನೇ ಒಂದು ಲೋಟ ಕಾಫಿ ಮಾಡಿಕೊಳ್ಳಲು ಯೋಚಿಸಿದ. ಗ್ಯಾಸ್ ಒಲೆಯ ವಾಲ್ವ್ (ತಿರುಪು) ತಿರುಗಿಸಿ ಗ್ಯಾಸ್ ಹರಿಸಿದ ಅನಂತರವೇ ಅವನಿಗೆ ಗೊತ್ತಾದದ್ದು ಹತ್ತಿರದಲ್ಲಿ ಬೆಂಕಿ

ಪೊಟ್ಟಣವಿಲ್ಲವೆಂದು. ತಕ್ಷಣ ಮಲಗುವ ಕೋಣೆಗೆ ಹೋಗಿ ಬೆಂಕಿಪೊಟ್ಟಣ ತೆಗೆದು ಕೊಂಡು ಬಂದು ಕಡ್ಡಿ ಗೀರಿದ. ಭಾರಿ ಆಸ್ಫೋಟನೆಯೊಂದಿಗೆ ಬೆಂಕಿ ಹೊತ್ತಿ ಕೊಂಡಿತು. ಪ್ರಯತ್ನಪಟ್ಟು ಗ್ಯಾಸ್ ಸಿಲೆಂಡರಿನ ವಾಲ್ವ ಭದ್ರಮಾಡಿ ಉರಿ ಯನ್ನು ನಂದಿಸುವಲ್ಲಿ ತಂಡನ್ ಯಶಸ್ವಿ ಯೇನೊ ಆದ. ಆದರೆ ಆ ವೇಳೆಗಾಗಲೇ ಅವನ ಇಡೀ ದೇಹ ಬೆಂಕಿಯಿಂದ ಸುಟ್ಟು ಹೋಗಿತ್ತು. ಅವನನ್ನು ಕೂಡಲೇ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಯಿತು. ಆದರೆ ಆತ ಮಾರನೆಯ ದಿನ ಆಸ್ಪತ್ರೆಯಲ್ಲಿ ಅಸುನೀಗಿದ. ಗ್ಯಾಸ್ ಹರಿಸುವ ಮೊದಲೇ ಆತ ಬೆಂಕಿಪೊಟ್ಟಣವನ್ನು ಹತ್ತಿರ ಇಟ್ಟು ಕೊಂಡಿದ್ದರೆ ಈ ದುರಂತ ಸಂಭವಿಸು ತ್ತಿರಲಿಲ್ಲ.

ನಳಿನಿ ಪಿಂಪ್ಲಿಕರ್ ಜಮಶೆಡ್‌ಪುರದ ನಿವಾಸಿ ೭೦ ವರ್ಷ ವಯಸ್ಸಿನ ಗೃಹಿಣಿ. ಗ್ಯಾಸ್ ಒಲೆಯ ಮೇಲೆ ಹಾಲು ಕಾಯ ಲಿರಿಸಿ ಅಡುಗೆ ಮನೆಯಿಂದ ಹೊರಗೆ ಹೋದಳು. ಕೆಲವು ನಿಮಿಷಗಳ ಅನಂತರ ಬಂದು ನೋಡಿದಾಗ, ಒಲೆ ಆರಿಹೋಗಿತ್ತು. ಪುನಃ ಒಲೆ ಹೊತ್ತಿಸಲು ಬೆಂಕಿಕಡ್ಡಿ ಗೀರಿ ದಳು. ದಿಢೀರನೆ ಬೆಂಕಿ ಹತ್ತಿಕೊಂಡಿತು. ಶ್ರೀಮತಿ ಪಿಂಪ್ಲಿಕರ್ ಸುಟ್ಟಗಾಯಗಳಿಂದ ಕೆಲವೇ ನಿಮಿಷಗಳಲ್ಲಿ ಅಸುನೀಗಿದಳು. ಅವಳ ಸಹಾಯಕ್ಕಾಗಿ ಅಡುಗೆ ಕೋಣೆಗೆ ಧಾವಿಸಿ ಬಂದ ೧೭ ವಯಸ್ಸಿನ ಆಕೆಯ ಮೊಮ್ಮಗ ಶಿಶಿರ್‌ಗೆ ತೀವ್ರ ಸ್ವರೂಪದ ಸುಟ್ಟಗಾಯ ಗಳಾದವು. ಬೆಂಕಿ ಹತ್ತಿಕೊಳ್ಳಲು ಕಾರಣ ವೇನು? ತನಿಖೆಯಿಂದ ತಿಳಿದು ಬಂದ ಸಂಗತಿಯಿದು: ಹಾಲು ಉಕ್ಕಿ ಮೊರಚೆಲ್ಲಿ ಉರಿ ಆರಿಹೋಗಿದ್ದರಿಂದ ಅನಿಲ ಸೋರಿಕೆ ಯುಂಟಾಗಿತ್ತು.

ನವದೆಹಲಿಯಲ್ಲಿ ಅನಿಲ ಸಿಲೆಂಡರ್ ಒಂದು ಸ್ಫೋಟಗೊಂಡು ೨೮ ವಯಸ್ಸಿನ ರುಕುಮ್‌ಸಾಹಿ ಹಾಗೂ ಆಕೆಯ ಮನೆಯ ಪರಿಚಾರಕಿ ೪೦ ವಯಸ್ಸಿನ ಮಾಯಾ–ಈ ಇಬ್ಬರ ಜೀವವನ್ನು ಬಲಿ ತೆಗೆದು ಕೊಂಡಿತು. ಬೆಂಕಿ ಹತ್ತಿಕೊಳ್ಳಲು ಕಾರಣ? ಐದು ವರ್ಷಗಳಷ್ಟು ಹಳೆಯದಾದ ರಬ್ಬರ್ ಪೈಪ್. ಅದು ಸವೆದು ತೂತಾಗಿ ಅನಿಲ ಸೋರಿಕೆಯುಂಟಾಗಿತ್ತು.

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಸುಮಾರು ೬೦ ಲಕ್ಷ ಗ್ರಾಹಕರು ಎಲ್‌ಪಿಜಿ (ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್– ದ್ರವೀಕೃತ ಪೆಟ್ರೋಲಿಯಮ್ ಅನಿಲ) ಬಳಸುತ್ತಿದ್ದಾರೆ. ಪ್ರೊಪೇನ್ ಹಾಗೂ ಬ್ಯೂಟೇನ್ ಎಂಬೆರಡು ಅನಿಲಗಳ ಮಿಶ್ರಣವೇ ಎಲ್‌ಪಿಜಿ. ಈ ಎರಡೂ ಅನಿಲ ಗಳು ಪೆಟ್ರೋಲಿಯಮ್‌ನ ಉತ್ಪನ್ನಗಳು. ಪೆಟ್ರೋಲಿಯಮ್ ಅನ್ನು ಸುಲಭವಾಗಿ ದ್ರವೀಕರಿಸಬಹುದು; ಸಿಲೆಂಡರುಗಳಲ್ಲಿ ತುಂಬಬಹುದು. ಈ ರೂಪದಲ್ಲಿ ಸಂಗ್ರಹಣೆ ಮತ್ತು ಸಾಗಣೆ ಕೂಡ ಸುಲಭ. ಆದರೆ ಇದರಲ್ಲಿ ಒಂದು ತೊಂದರೆಯಿದೆ. ಈ ಗ್ಯಾಸ್‌ಗೆ ಬಣ್ಣ, ವಾಸನೆ ಇಲ್ಲದಿರುವುದರಿಂದ ಇದರ ಇರುವಿಕೆಯನ್ನು ಪತ್ತೆ ಹಚ್ಚುವುದು ಕಷ್ಟ. ಅಲ್ಲದೇ ಇದು ಗಾಳಿಗಿಂತ ಎರಡು ಪಟ್ಟು ಭಾರವಾಗಿರುವುದರಿಂದ ನೆಲಹಂತಕ್ಕೆ ಬೇಗ ಕುಸಿಯುತ್ತದೆ. ಈ ಅನಿಲದ ಇರುವಿಕೆ ಯನ್ನು ಪತ್ತೆಹಚ್ಚಲು ಸುಲಭವಾಗಲೆಂಬ ಉದ್ದೇಶದಿಂದ ಕೆಲವು ರಾಸಾಯನಿಕಗಳನ್ನು ಇದಕ್ಕೆ ಬೆರೆಸಿ ಕಟುವಾಸನೆಯುಂಟು

ಮಾಡುತ್ತಾರೆ. ಅಪಘಾತ ಸಂಭವಿಸಲು ಅತ್ಯಂತ ಕಡಿಮೆ ಪ್ರಮಾಣದ ಅನಿಲ ಸಾಕು. ಗಾಳಿಯಲ್ಲಿ ಶೇಕಡ ಎರಡು ಅಂಶ ಅನಿಲ ಬೆರತರೂ ಅಪಘಾತ ಸಂಬಂಧಿಸಬಹುದು.

ಕಳೆದ ಏಳೆಂಟು ವರ್ಷಗಳಲ್ಲಿ ಎಲ್‌ಪಿಜಿ ಗ್ರಾಹಕರ ಪ್ರಮಾಣ ಶೇಕಡ ೧೩೦ ರಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಎಲ್‌ಪಿಜಿ ಅಪಘಾತದಿಂದ ಸತ್ತವರ ಸಂಖ್ಯೆಯೂ ದ್ವಿಗುಣಗೊಂಡಿದೆ. ಮುಂದಿನ ಕೆಲವು ವರ್ಷಗಳಲ್ಲಿ ಈ ಉದ್ದಿಮೆ ಗಣನೀಯವಾಗಿ ವಿಸ್ತರಣೆಗೊಳ್ಳಲಿರುವುದರಿಂದ ಎಲ್‌ಪಿಜಿ ಉಪಕರಣಗಳ ತಯಾರಕರು ಹೆಚ್ಚು ಸುರಕ್ಷತಾ ಕ್ರಮಗಳನ್ನು ಅಳವಡಿಸಬೇಕಾಗಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಎಲ್‌ಪಿಜಿ ಉತ್ಪಾದಿಸುವ ಭಾರತದ ಅತಿ ದೊಡ್ಡ ಸಂಸ್ಥೆ. ಈ ಸಂಸ್ಥೆಯ ಹಿರಿಯ ವ್ಯವಸ್ಥಾಪಕರ ಪ್ರಕಾರ ಭಾರತದಲ್ಲಿ ಸಂಭವಿಸುವ ಶೇಕಡ ೮೦ ರಷ್ಟು ಅನಿಲ ಅಪಘಾತಗಳು ಗ್ರಾಹಕರ ನಿರ್ಲಕ್ಷ್ಯದಿಂದ ಸಂಭವಿಸುತ್ತವೆ. ಉತ್ಪಾದನೆಯಲ್ಲಿರುವ ಲೋಪದೋಷಗಳಿಂದ ಅಪಘಾತಗಳು ಸಂಭವಿಸುವುದು ತೀರ ಕಡಿಮೆಯೆಂಬ ಸಂಗತಿ ನಿಜವಿರಬಹುದು. ಆದರೆ ಉದ್ದಿಮೆಗಳು ತಮ್ಮ ಹೊಣೆಗಾರಿಕೆಯನ್ನು ಗ್ರಾಹಕರ ಮೇಲೆ ಸಾರಾಸಗಟು ಹೊರಿಸಲು ಬರುವುದಿಲ್ಲ. ಅಮೆರಿಕದಲ್ಲಿ ಸುಮಾರು ೭೫ ಲಕ್ಷ ಗ್ರಾಹಕರು ಎಲ್‌ಪಿಜಿ ಬಳಸುತ್ತಿದ್ದಾರೆ. ಈ ಬಳಕೆಯ ಪ್ರಮಾಣಕ್ಕೆ ಹೋಲಿಸಿದರೆ ಅಲ್ಲಿ ಎಲ್‌ಪಿಜಿ ಅಪಘಾತಗಳಿಂದ ದುರ್ಮರಣಕ್ಕೀಡಾಗುವವರ ಸಂಖ್ಯೆ ತೀರ ಕಡಿಮೆ. ಹಾಗಾದರೆ ಭಾರತದಲ್ಲಿ ಯಾಕೆ ಇಷ್ಟೊಂದು ಅಪಘಾತಗಳು? ಭಾರತದ ಗ್ರಾಹಕರಲ್ಲಿ ನಿರ್ಲಕ್ಷ್ಯ ಹಾಗೂ ಉದಾಸೀನ ಮನೋಭಾವ ಹೆಚ್ಚೇನು? ಈ ರೀತಿ ಹೇಳುವುದು ಸಾಧ್ಯವಿಲ್ಲ.

ಭಾರತ ಮತ್ತು ಅಮೆರಿಕ—ಈ ಎರಡು ದೇಶಗಳ ನಡುವೆ ಎದ್ದು ಕಾಣುವ ಪ್ರಮುಖ ವ್ಯತ್ಯಾಸವೇನೆಂದರೆ ಅಮೆರಿಕದಲ್ಲಿ ಸುರಕ್ಷತೆಯ ಮಟ್ಟ ಅತ್ಯುತ್ತಮವಾಗಿದೆ. ಅಲ್ಲಿ ಉತ್ಪಾದಿತವಾಗುವ ಗೃಹೋಪಕರಣಗಳು 'ಹದಗೆಟ್ಟರೂ ರಕ್ಷಣೆಯಿದೆ' ಎಂಬ ತತ್ವದ ಆಧಾರದ ಮೇಲೆ ತಯಾರಾಗುತ್ತವೆ. ಇಂಥ ಉಪಕರಣಗಳಲ್ಲಿ ಸುರಕ್ಷತೆಯ ಸಾಧನಗಳನ್ನು ಅಳವಡಿಸಲಾಗಿರುತ್ತದೆ. ಈ ಬಗೆಯ ವ್ಯವಸ್ಥೆಯಿಂದಾಗಿ ಗ್ರಾಹಕರ ನಿರ್ಲಕ್ಷ್ಯದಿಂದ ಸಂಭವಿಸಬಹುದಾದ ಅಪಘಾತಗಳ ಪ್ರಮಾಣ ಕಡಿಮೆಯಾಗುತ್ತದೆ. ಆದರೆ ಅದೇ ಭಾರತೀಯ ಉತ್ಪಾದಕರು 'ಹದಗೆಟ್ಟರೂ ರಕ್ಷಣೆಯಿದೆ' ಎಂಬ ತತ್ವದ ಆಧಾರದ ಮೇಲೆ ಉಪಕರಣಗಳನ್ನು ತಯಾರಿಸುವುದಿಲ್ಲ. ಇದರಿಂದಾಗಿ ಭಾರತೀಯ ಗ್ರಾಹಕರು ತಮ್ಮದೇನು ಲೋಪದೋಷಗಳಿಲ್ಲದಿದ್ದರೂ ಭಾರಿ ದಂಡ ತೆರಬೇಕಾಗಿದೆ.

ಗ್ಯಾಸ್ ಉಪಕರಣಗಳನ್ನು 'ಹದಗೆಟ್ಟರೂ ರಕ್ಷಣೆಯಿದೆ' ಎಂಬ ನಿಯಮದಂತೆ ತಯಾರಿಸುವುದು ಹೇಗೆಂದು ನೋಡಬಹುದು. ಉದಾಹರಣೆಗೆ ನಮ್ಮ ಗ್ಯಾಸ್ ಸಿಲಿಂಡರಿನ ರಬ್ಬರ್ ಪೈಪ್ ಸಮಸೆ

ಯನ್ನೇ ತೆಗೆದುಕೊಳ್ಳಿ. ಸಡಿಲವಾದ, ಮುರುಟಿಹೋದ, ಹಾಳಾದ ರಬ್ಬರ್ ಪೈಪ್ ಭಾರತದಲ್ಲಿ ಅನಿಲ ಅಪಘಾತಕ್ಕೆ ಮುಖ್ಯ ಕಾರಣವಾಗಿದೆ. ಅಮೆರಿಕದ ಗ್ರಾಹಕರು ಈ ಸಮಸ್ಯೆಯನ್ನೇ ಎದುರಿಸುವುದಿಲ್ಲ. ಏಕೆಂದರೆ ಅಲ್ಲಿ ರಬ್ಬರ್ ಪೈಪ್‌ನ ಉಪಯೋಗವನ್ನು ನಿಷೇಧಿಸಲಾಗಿದೆ. ಅಲ್ಲಿ ರಬ್ಬರ್ ಪೈಪ್‌ಗೆ ಬದಲು ಮೃದು ಲೋಹದ ಸಂಪರ್ಕ ಮಾಧ್ಯಮದ ಮೂಲದ ಗ್ಯಾಸ್ ಹರಿಯುತ್ತದೆ. ಒಲೆ ಮತ್ತು ಸಿಲಿಂಡರ್ ಸಂಪರ್ಕಿಸುವ ಎರಡೂ ಕಡೆಯ ಕೊಂಡಿಗಳನ್ನು ಸ್ಕ್ರೂ ಬಳಸಿ ಸುರಕ್ಷಿತವಾಗಿರುವಂತೆ ಭದ್ರಪಡಿಸಲಾಗುತ್ತದೆ.

ವಾಸ್ತವವಾಗಿ ಹೇಳುವುದಾದರೆ ಭಾರತದ ಪರಿಸ್ಥಿತಿಗೆ ರಬ್ಬರ್ ಪೈಪ್ ಸೂಕ್ತವಲ್ಲ. ಏಕೆಂದರೆ ಭಾರತೀಯ ಅಡುಗೆಯಲ್ಲಿ ಕರಿಯುವ ಹುರಿಯುವ ಪದಾರ್ಥಗಳು ಹೆಚ್ಚು. ಹುರಿಯುವಾಗ ಅಥವಾ ಕರಿಯುವಾಗ ತಿಂಡಿಗಳ ಚೂರುಪಾರು ಹಾರಿ ರಬ್ಬರ್ ಪೈಪ್ ಮೇಲೆ ಬಿದ್ದು ಅಂಟಿಕೊಂಡು ಶೇಖರಣೆಗೊಳ್ಳುವ ಸಂಭವ ಹೆಚ್ಚು. ಈ ಚೂರುಪಾರು ಇಲಿ ಹೆಗ್ಗಣಗಳನ್ನು ಆಕರ್ಷಿಸಿ ದುರಂತಕ್ಕೆ ಕಾರಣವಾಗಬಹುದು. ಮುಂಬಯಿಯಲ್ಲಿ ಅಡುಗೆ ಮನೆಯೊಂದರಲ್ಲಿ ಅನಿಲ ಸೋರಿಕೆಯುಂಟಾಯಿತು. ಇಲಿಗಳು ರಬ್ಬರ್ ಪೈಪನ್ನು ಕಡಿದು ತೂತು ಮಾಡಿದ್ದುದೇ ಈ ಸೋರಿಕೆಗೆ ಕಾರಣವಾಗಿತ್ತು. ಇದರ ಪರಿಣಾಮವೆಂದರೆ ಅನಿಲ ಸ್ಫೋಟವುಂಟಾಗಿ ೩೮ ವಯಸ್ಸಿನ ಗೃಹಿಣಿ, ಆಕೆಯ ಪತಿ, ಹಾಗೂ ೧೨ ವಯಸ್ಸಿನ ಅವರ ಮಗಳು ಅಸುನೀಗಿದರೆ ಅದೇ ಕುಟುಂಬದ ಇತರ ನಾಲ್ವರಿಗೆ ತೀವ್ರರೂಪದ ಸುಟ್ಟ ಗಾಯಗಳಾದವು.

ಆಕಸ್ಮಿಕವಾಗಿ ಉರಿ ನಂದಿಹೋಗುವ ಸಮಸ್ಯೆ ಅಮೆರಿಕದಲ್ಲಿ ತೀರ ಅಪರೂಪ; ಭಾರತದಲ್ಲಿನ ಅಪಘಾತಗಳಿಗೆ ಇದೇ ಮುಖ್ಯ ಕಾರಣ. ಅಮೆರಿಕದ ಉಪಕರಣಗಳಲ್ಲಿ "ಇನ್‌ಬಿಲ್ಟ್ ಪೈಲೆಟ್ ಲೈಟ್" ವ್ಯವಸ್ಥೆಯಿರುತ್ತದೆ. ಒಂದು ಪಕ್ಷ ಆಕಸ್ಮಿಕವಾಗಿ ಉರಿ ನಂದಿಹೋದರೆ ಒಲೆಯ ಒಳಗೇ ಇರುವ ಈ 'ಪೈಲೆಟ್ ಲೈಟ್" ವ್ಯವಸ್ಥೆಯಿಂದ ಆ ಕ್ಷಣವೇ ಉರಿ ತಂತಾನೇ ಪುನಃ ಹೊತ್ತಿಕೊಳ್ಳುತ್ತದೆ. ದೀಪಕ್‌ನನ್ನು ಬಲಿ ತೆಗೆದುಕೊಂಡಂತಹ ಅಪಘಾತಗಳನ್ನು ಈ 'ಪೈಲೆಟ್ ಲೈಟ್' ವ್ಯವಸ್ಥೆಯಂತಹ ಸುರಕ್ಷತಾ ಕ್ರಮದಿಂದ ನಿಯಂತ್ರಿಸಬಹುದು. ಇಂಥ ವ್ಯವಸ್ಥೆಯಲ್ಲಿ ಒಲೆಯನ್ನು ಕೈಯಿಂದ ಬೆಂಕಿಕಡ್ಡಿ ಗೀರಿ ಹೊತ್ತಿಸುವ ಪ್ರಮೇಯವೇ ಬರುವುದಿಲ್ಲ. ಒಲೆಯ ಗ್ಯಾಸ್ ವಾಲ್ವ್ ತಿರುಗಿಸಿ ಗ್ಯಾಸ್ ಹರಿಸಿದ ಕೂಡಲೇ "ಪೈಲೆಟ್ ಲೈಟ್" ಸ್ವಯಂ ಚಾಲಿತವಾಗಿ ಒಲೆಯನ್ನು ಹೊತ್ತಿಸುತ್ತದೆ. ಈ ಎಲ್ಲ ಸುರಕ್ಷತಾ ವ್ಯವಸ್ಥೆಯ ಜೊತೆಗೆ ಅಲ್ಲಿನ ಗ್ರಾಹಕರು "ಅನಿಲ ಸೋರಿಕೆ ಪತ್ತೆ ಯಂತ್ರ"ವನ್ನು ಕೂಡ ಮನೆಯಲ್ಲಿ ಅಳವಡಿಸಿಕೊಳ್ಳುವರು. ಅನಿಲ ಸೋರಿಕೆಯು ಗಾಳಿಯಲ್ಲಿ ಅಪಾಯ ಮಟ್ಟವನ್ನು ಮುಟ್ಟುವಷ್ಟರಲ್ಲಿ ಈ ಯಂತ್ರ ಎಚ್ಚರಿಕೆಯ ಗಂಟೆ ಬಾರಿಸುತ್ತದೆ.

ಭಾರತೀಯ ತಯಾರಕರು ಈ ಬಗೆಯ ಉಪಕರಣಗಳನ್ನು ತಯಾರಿಸದೆ ಸುರಕ್ಷತಾ ವ್ಯವಸ್ಥೆಯನ್ನು ಅನಿಲವಿತರಕರ ಮತ್ತು

ಗ್ರಾಹಕರ ಪಾಲಿಗೆ ಬಿಟ್ಟುಬಿಡುತ್ತಾರೆ. ರಬ್ಬರ್ ಕೊಳವೆಯನ್ನು ಎರಡು ವರ್ಷಗಳಿಗೊಮ್ಮೆ ಬದಲಾಯಿಸುವಂತೆ ಗ್ರಾಹಕರಿಗೆ ಸೂಚನೆ ನೀಡಲಾಗುತ್ತದೆ. ಆದರೆ ಹೆಚ್ಚು ಜನ ಈ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಇದೇ ರೀತಿಯಲ್ಲಿ, ಗ್ಯಾಸ್ ಸಿಲೆಂಡರ್‌ಗಳನ್ನು ಮನೆಗೆ ಬಟವಾಡೆ ಮಾಡುವ ಹುಡುಗರು ಪ್ರತಿಬಾರಿ ಹೊಸ ಸಿಲೆಂಡರ್ ತಂದು ಅಳವಡಿಸುವಾಗಲೂ ರಬ್ಬರ್ ಪೈಪ್‌ನಲ್ಲಿ ತೂತುಗಳೇನಾದರೂ ಆಗಿವೆಯೇ, ಅನಿಲ ಸೋರಿಕೆಯುಂಟಾಗುತ್ತಿದೆಯೇ ಎಂದು ಸೋಪು ಮಿಶ್ರಣದ ನೀರಿನಲ್ಲಿ ಪರೀಕ್ಷಿಸಬೇಕೆಂಬ ನಿಯಮವಿದೆ. ಒಂದು ವೇಳೆ ರಬ್ಬರ್ ಕೊಳವೆಯಲ್ಲಿ ತೂತುಗಳಿದ್ದರೆ ಸೋಪು ನೀರಿನಲ್ಲಿ ಗುಳ್ಳೆಗಳೇಳುತ್ತವೆ. ಆದರೆ ಸಿಲೆಂಡರ್ ಬಟವಾಡೆ ಮಾಡುವ ಹುಡುಗರು ಈ ರೀತಿ ಪರೀಕ್ಷಿಸುವುದು ಬಹಳ ಅಪರೂಪ. ಅಲ್ಲದೆ, ರಬ್ಬರ್ ಪೈಪನ್ನು ಈ ರೀತಿ ಪರೀಕ್ಷಿಸುವ ಕ್ರಮ ಕೂಡ ಸರಿಯಲ್ಲ, ಅವೈಜ್ಞಾನಿಕವಾದುದು ಎಂಬ ಸಂಗತಿ ಸಂಬಂಧಪಟ್ಟ ಉದ್ಯಮದ ಅಧಿಕಾರವರ್ಗದವರಿಗೂ ಗೊತ್ತಿದೆ.

ಕಡಿಮೆ ಕೂಲಿ, ಮಿತಿಮೀರಿದ ದುಡಿತ, ಸೂಕ್ತ ಶಿಕ್ಷಣ ಮತ್ತು ತರಬೇತಿಯ ಕೊರತೆಯಿರುವ ಬಟವಾಡೆ ಹುಡುಗರು—ಈ ಅಂಶಗಳೂ ವಾಸ್ತವವಾಗಿ ಕೆಲವೊಮ್ಮೆ ಅಪಘಾತಗಳಿಗೆ ಕಾರಣವಾಗುವುದುಂಟು. ಇಂಥ ಕಾರಣಗಳಿಂದಾಗಿ ಶೇಕಡ ೧೫ರಷ್ಟು ಅಪಘಾತಗಳು ಸಂಭವಿಸುತ್ತವೆ ಎಂದು ಅಂದಾಜು ಮಾಡಲಾಗಿದೆ. ಬಟವಾಡೆ ಹುಡುಗರು ಕೆಲವೊಮ್ಮೆ ಸಣ್ಣ ಮೊತ್ತದ 'ಟಿಪ್ಸ್'ಗೆ ಆಸೆಪಟ್ಟು ಅನಧಿಕೃತ ಗ್ರಾಹಕರಿಗೆ ಅನಿಲ ಸಿಲೆಂಡರ್‌ಗಳನ್ನು ಕದ್ದು ಮಾರುವುದೋ ಇಲ್ಲವೆ ಖಾಲಿ ಸಿಲೆಂಡರ್‌ಗಳಿಗೆ ಅವೈಜ್ಞಾನಿಕ ರೀತಿಯಲ್ಲಿ, ಅಪಾಯಕರ ವಿಧಾನಗಳನ್ನು ಅನುಸರಿಸಿ ಅನಿಲವನ್ನು ತುಂಬಿಕೊಡುವುದೋ ಉಂಟು. ಇತ್ತೀಚೆಗೆ ಅಲಹಾಬಾದಿನಲ್ಲಿ ಇಬ್ಬರು ಬಟವಾಡೆ ಹುಡುಗರು ಅನಧಿಕೃತ ಗ್ರಾಹಕರೊಬ್ಬರಿಗೆ ಸೇರಿದ ಖಾಲಿ ಸಿಲೆಂಡರಿಗೆ, ತುಂಬಿದ ಸಿಲೆಂಡರಿನಿಂದ ಅನಿಲವನ್ನು ವರ್ಗಾಯಿಸಲು ಪ್ರಯತ್ನಿಸಿದರು. ಅನಿಲ ಸೋರಿ ಬೆಂಕಿ ಹತ್ತಿಕೊಂಡಿತು. ನಾಲ್ಕು ಮಂದಿಗೆ ತೀವ್ರ ಸ್ವರೂಪದ ಸುಟ್ಟಗಾಯಗಳಾದವು. ಇದು ನಂಬಿಕೆದ್ರೋಹ ಮತ್ತು ಮೋಸದ ಪ್ರಕರಣವೆಂದು ಪೋಲಿಸರು ಆ ಇಬ್ಬರು ಬಟವಾಡೆ ಹುಡುಗರ ಮೇಲೆ ಮೊಕದ್ದಮೆ ಹೂಡಿದರು.

ಭಾರತೀಯ ಎಲ್‌ಪಿಜಿ ಉದ್ದಿಮೆಯು ಗೃಹೋಪಕರಣಗಳ ಸುಧಾರಣೆಯತ್ತ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿದೆ. ಯುರೋಪಿನ ತಂತ್ರಜ್ಞಾನವನ್ನು ಬಳಸಿಕೊಂಡು ತಯಾರಿಸಿದ ಸುರಕ್ಷಿತವಾದ ಮತ್ತು ಹೆಚ್ಚು ಅನುಕೂಲಕರವಾದ ಸಿಲೆಂಡರ್ ವಾಲ್ವ್ ಮತ್ತು ಪ್ರೆಶರ್ ರೆಗ್ಯುಲೇಟರ್‌ಗಳನ್ನು ಇತ್ತೀಚೆಗೆ ಮಾರುಕಟ್ಟೆಗೆ ಪರಿಚಯಿಸಿದೆ. ಜೊತೆಗೆ, ಈಗಿನ ವ್ಯವಸ್ಥೆಯಂತೆ ಎಲ್ಲ ಒಲೆಗಳೂ ಇಂಡಿಯನ್ ಸ್ಟ್ಯಾಂಡರ್ಡ್ಸ್ ಇನ್‌ಸ್ಟಿಟ್ಯೂಟಿನ ಒಪ್ಪಿಗೆ ಮುದ್ರೆಯನ್ನು ಪಡೆದಿರಲೇಬೇಕು. ಹೀಗೆಯೇ ರಬ್ಬರ್ ಪೈಪ್‌ಗಳನ್ನು ದೃಢೀಕರಿಸುವ ವ್ಯವಸ್ಥೆಯನ್ನು ಆಚರಣೆಗೆ ತರಲೂ ಈ ಸಂಸ್ಥೆ ಯೋಜಿಸಿದೆ.

ಇಷ್ಟಾದರೂ ಎಲ್ಲ ಬದಲಾವಣೆಗಳೂ ಎಲ್ಲರನ್ನೂ ಮುಟ್ಟುತ್ತಿಲ್ಲ. ಭಾರತೀಯ ಎಲ್‌ಪಿಜಿ ಉಪಕರಣಗಳು ಪಶ್ಚಿಮದ ಉಪಕರಣಗಳಂತೆ ಇನ್ನೂ ದೋಷಮುಕ್ತವೂ ಸುರಕ್ಷಿತವೂ ಆಗಿಲ್ಲ ಎಂಬ ಅಂಶವನ್ನು ತೈಲೋದ್ಯಮದ ಅಧಿಕಾರವರ್ಗ ಅರಿತಿದೆ. ಈಚೆಗೆ ಬಳಕೆಗೆ ಬಂದಿರುವ ಹೊಸ ರೆಗ್ಯುಲೇಟರ್‌ಗಳನ್ನು ಸಿಲಿಂಡರಿಗೆ ಅಳವಡಿಸುವುದು ಸುಲಭ. ಈ ರೆಗ್ಯುಲೇಟರ್‌ಗಳನ್ನು ಸಿಲಿಂಡರಿನ ಮೂತಿಗೆ ಸಿಕ್ಕಿಸಿದರೆ ಅಳವಡಿಕೆಯ ಕೆಲಸ ಮುಗಿದಂತೆಯೇ. ಆದರೆ ಈ ವ್ಯವಸ್ಥೆಯಲ್ಲಿಯೂ ಕೆಲವು ಸಮಸ್ಯೆಗಳಿವೆ. ಗ್ರಾಹಕರು ಈಗ ಸುಲಭವಾಗಿ. ತಾವೇ ಸ್ವತಃ ಮನೆಗೆ ಗ್ಯಾಸ್ ಅಳವಡಿಸಿಕೊಳ್ಳಬಹುದೆಂಬುದು ವಿತರಕರ ಭಾವನೆ. ಸ್ವತಃ ಗ್ರಾಹಕರೇ ಡಿಪೋಗೆ ಬಂದು ಸಿಲಿಂಡರ್ ಒಯ್ದರೆ ಬಟವಾಡೆ ವೆಚ್ಚವನ್ನು ಉಳಿತಾಯ ಮಾಡಬಹುದು ಎಂದು ವಿತರಕರು ಗ್ರಾಹಕರನ್ನು ಉತ್ತೇಜಿಸುತ್ತಿದ್ದಾರೆ. ಹೊಸ ಸಿಲಿಂಡರ್ ವಿಳಂಬವಿಲ್ಲದೆ ದೊರೆಯುವುದೆಂಬ ಸಂಭ್ರಮದಲ್ಲಿ ಅನೇಕ ಗ್ರಾಹಕರು ಈ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಿದ್ದಾರೆ. ಆದರೆ ಗ್ರಾಹಕರಿಗೆ ಅನಿಲ ಸಿಲಿಂಡರ್ ಸಾಗಣೆಯ ಬಗ್ಗೆ ಸೂಕ್ತ ತರಬೇತಿ ಇರುವುದಿಲ್ಲ. ಈ ವ್ಯವಸ್ಥೆ ಅಪಘಾತಗಳಿಗೆ ಹಾದಿ ಮಾಡಿಕೊಡಬಹುದು.

"ಹಣ ನೀಡಿ, ಕೊಂಡು ಹೋಗಿ" (ಕ್ಯಾಷ್ ಅಂಡ್ ಕ್ಯಾರಿ) ಎಂಬ ಹೊಸ ವ್ಯವಸ್ಥೆಯ ಬಗ್ಗೆ ಪುಣೆಯ ಸಮೀಕ್ಷೆಯೊಂದರಿಂದ ತಿಳಿದು ಬಂದ ಅಂಶವಿದು: ಅರ್ಧಕ್ಕಿಂತ ಹೆಚ್ಚು ಸಂಖ್ಯೆಯ ಗ್ರಾಹಕರು ಸಿಲಿಂಡರ್‌ಗಳನ್ನು ಸೈಕಲ್ ಅಥವಾ ಸ್ಕೂಟರ್‌ಗಳ ಮೇಲೆ ಮನೆಗೆ ರವಾನಿಸುತ್ತಿರುವುದು. ಆದರೆ ತೈಲೋದ್ಯಮದ ಎಲ್‌ಪಿಜಿ ಕೈಪಿಡಿಯ ಪ್ರಕಾರ ಹೀಗೆ ಸೈಕಲ್ ಅಥವಾ ಸ್ಕೂಟರ್ ಮೇಲೆ ಸಿಲಿಂಡರ್ ಸಾಗಿಸುವುದನ್ನು ನಿಷೇಧಿಸಲಾಗಿದೆ.

ಕೆಲವು ಅಗತ್ಯ ಕ್ರಮಗಳನ್ನು ಕೂಡಲೇ ಕೈಗೊಂಡರೆ ಬಹುಪಾಲು ಅನಿಲ ಅಪಘಾತಗಳನ್ನು ನಿವಾರಿಸಬಹುದೆಂಬುದು ತಜ್ಞರ ಅಭಿಪ್ರಾಯ.

ಸುಧಾರಿತ ಪೈಪ್ ಹಾಗೂ ಜೋಡಣೆ :

ಈಗ ಬಳಕೆಯಲ್ಲಿರುವ ರಬ್ಬರ್ ಪೈಪ್‌ಗೆ ಬದಲು ಲೋಹ ಅಥವಾ ಗಟ್ಟಿಯಾದ ಸಿಂಥೆಟಿಕ್ ವಸ್ತುವಿನಿಂದ ತಯಾರಿಸಿದ ಪೈಪ್‌ಗಳನ್ನು ಬಳಸಬೇಕು. ಪೈಪ್‌ಗಳು ಸುಭದ್ರವಾಗಿ ಅಳವಡುವಂತೆ ಜೋಡಣೆ ವಿನ್ಯಾಸವನ್ನು ವ್ಯವಸ್ಥೆಗೊಳಿಸಬೇಕು.

ಉರಿ ನಂದಿಹೋಗುವ ದೋಷ ನಿವಾರಣೆಗೆ ಸುರಕ್ಷತಾ ತಾಂತ್ರಿಕ ವ್ಯವಸ್ಥೆಯ ಅಗತ್ಯ :

ಎಲ್ಲ ಒಲೆ ಮತ್ತಿತರ ಉಪಕರಣಗಳು 'ಸೇಫ್ಟಿ ಪೈಲೆಟ್ ಲೈಟ್' ವ್ಯವಸ್ಥೆಯಿಂದ ಕೂಡಿರಬೇಕು. ಎಚ್ಚರಿಕೆ ಗಂಟೆ ಬಾರಿಸುವ ಅನಿಲ ಪತ್ತೆಯಂತ್ರ ಕೂಡ ಗ್ರಾಹಕರಿಗೆ ದೊರಕುವ ವ್ಯವಸ್ಥೆಯಿರಬೇಕು.

ಪರಿಶೀಲನಾ ವ್ಯವಸ್ಥೆಯನ್ನು ಬಿಗಿಗೊಳಿಸುವುದು :

ಎಲ್‌ಪಿಜಿ ಉಪಕರಣಗಳನ್ನು (ಒಲೆ ಮತ್ತು ಪೈಪ್ ಇತ್ಯಾದಿ) ಬಟವಾಡೆ

ಹುಡುಗರು ಪರಿಶೀಲಿಸಿದರೆ ಸಾಲದು. ಪ್ರತಿ ಎರಡು ವರ್ಷಕ್ಕೊಮ್ಮೆಯಾದರೂ ತರಬೇತಿ ಪಡೆದ ತನಿಖಾಧಿಕಾರಿಗಳು ಪ್ರತಿ ಮನೆಗೆ ಖುದ್ದು ಭೇಟಿ ನೀಡಿ ಪರಿಶೀಲಿಸುವ ವ್ಯವಸ್ಥೆಯಾಗಬೇಕು. ಸೂಕ್ತ ಎಚ್ಚರಿಕೆಯ ಅನಂತರವೂ ದೋಷವಿರುವ ಅಥವಾ ಸವೆದ ಉಪಕರಣಗಳನ್ನು ಬಳಸುತ್ತಿರುವ ಗ್ರಾಹಕರು ಕಂಡುಬಂದಲ್ಲಿ, ಅಂಥವರಿಗೆ ಮುಲಾಜಿಲ್ಲದೆ ಅನಿಲ ಪೂರೈಕೆ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು.

ಉದ್ಯೋಗಿಗಳಿಗೆ ಪೂರ್ಣ ತರಬೇತಿ :

ಮುಖ್ಯವಾಗಿ ಬಟವಾಡೆ ಹುಡುಗರನ್ನು ಆಯ್ಕೆ ಮಾಡುವಾಗ ಬಹು ಎಚ್ಚರಿಕೆಯಿಂದ ಆಯ್ಕೆಮಾಡಿ ಅಂಥವರಿಗೆ ಕಾಲ ಕಾಲಕ್ಕೆ ಸೂಕ್ತತರಬೇತಿ ದೊರೆಯುವಂತೆ ನೋಡಿಕೊಳ್ಳಬೇಕು. ಇಂಥ ಕೆಲವು ಆಗತ್ಯ ಸುಧಾರಣೆಗಳನ್ನು ಕೈಗೊಂಡದ್ದೇ ಆದರೆ ಭವಿಷ್ಯದಲ್ಲಿ ಅನಿಲ ದುರಂತಗಳನ್ನು ನಿವಾರಿಸಬಹುದು.

ಅಡುಗೆ ಅನಿಲ ಅಪಘಾತಗಳನ್ನು ನಿಯಂತ್ರಿಸಲು ನೀವೇನು ಮಾಡಬಹುದು

೧. ಯಾವಾಗಲೂ ನೀವು ಒಲೆ ಹತ್ತಿಸಲು ಅನಿಲ ಹರಿಸುವುದಕ್ಕೆ ಮುನ್ನ ಬೆಂಕಿಕಡ್ಡಿ ಗೀರಿರಿ. ಎಲೆಕ್ಟ್ರಾನಿಕ್ ಸ್ಪಾರ್ಕ್ ಲೈಟರ್ಸ್ ಬಳಸುವ ಸಂದರ್ಭದಲ್ಲಿ ನೀವು ಅನಿಲ ವಾಲ್ವ್ ಚಾಲೂಮಾಡಿದ ಕೂಡಲೇ ಬೆಂಕಿ ಹೊತ್ತಿಸಿ. ಒಂದು ಪಕ್ಷ ತಕ್ಷಣವೇ ಬೆಂಕಿ ಹತ್ತಿಕೊಳ್ಳದಿದ್ದರೆ ಆ ಕೂಡಲೇ ವಾಲ್ವ್ ಬಂದುಮಾಡಿ; ಪುನಃ ಪ್ರಯತ್ನಿಸುವ ಮೊದಲು ಕೆಲವು ನಿಮಿಷ ಕಾಯಿರಿ.


೨. ನಿಮಗೆ ಅನಿಲದ ವಾಸನೆ ಕಂಡುಬಂದರೆ ದೀಪ, ಫ್ಯಾನ್ ಅಥವಾ ಯಾವುದೇ ವಿದ್ಯುದುಪಕರಣಗಳನ್ನು ಹೊತ್ತಿಸುವುದು, ಆರಿಸುವುದು ಮಾಡಬೇಡಿ. ಕೂಡಲೇ ರೆಗ್ಯುಲೇಟರ್ ವಾಲ್ವ್ ಭದ್ರಪಡಿಸಿ. ಮನೆಯ ಎಲ್ಲ ಕಿಟಕಿ ಬಾಗಿಲುಗಳನ್ನು ತೆಗೆಯಿರಿ. ಅನಿಲ ಸಂಪೂರ್ಣವಾಗಿ ಚದುರಿಹೋಗುವವರೆಗೆ ಒಲೆ ಹೊತ್ತಿಸಬೇಡಿ.

೩. ಅಡುಗೆ ಮಾಡುವಾಗ ಉರಿಯುತ್ತಿರುವ ಒಲೆಯನ್ನು ಬಿಟ್ಟು ಹೋಗಬೇಡಿ. ಅಡುಗೆ ಕೆಲಸ ಸಂಪೂರ್ಣವಾಗಿ ಮುಗಿದಮೇಲೆ ಒಲೆಯ ಸ್ವಿಚ್ ಮತ್ತು ರೆಗ್ಯುಲೇಟರ್ ವಾಲ್ವ್ ಎರಡನ್ನೂ ಬಂದುಮಾಡಿ.

೪. ಪ್ರತಿಬಾರಿ ಹೊಸ ಸಿಲಿಂಡರ್ ಮನೆಗೆ ಬಂದಾಗಲೂ ಬಟವಾಡೆ ಹುಡುಗ ಅನಿಲಸೋರಿಕೆಯನ್ನು ಪರೀಕ್ಷಿಸುವಂತೆ ನೋಡಿಕೊಳ್ಳಿ. ಸಿಲಿಂಡರ್ ಬದಲಾಯಿಸುವ ಮುನ್ನ ಎಲ್ಲ ವಿದ್ಯುತ್ ಉಪಕರಣಗಳನ್ನು ಆರಿಸಿ.

೫. ನಿಮ್ಮ ಅನಿಲ ಒಲೆಯನ್ನು ಸಿಲಿಂಡರ್‌ಗಿಂತ ಎತ್ತರದ ಜಾಗದಲ್ಲಿರಿಸಿ. ಒಲೆಯು ಪರದೆ, ಕಪಾಟು ಮುಂತಾದವುಗಳಿಂದ ಆದಷ್ಟು ದೂರವಿರುವಂತೆ ನೋಡಿಕೊಳ್ಳಿ. ಅಡುಗೆ ಮನೆಯಲ್ಲಿರುವಾಗ ದೊಗಳೆಯಾದ ಬಟ್ಟೆಗಳನ್ನೂ ಸಿಂಥೆಟಿಕ್ ಬಟ್ಟೆಗಳನ್ನೂ ಧರಿಸಬೇಡಿ. ಸಾಧ್ಯವಾದಷ್ಟು ಹತ್ತಿ ಬಟ್ಟೆ ಧರಿಸಿ.

೬. ನಿಮ್ಮ ಅನಿಲ ಒಲೆ ಉರಿಯುತ್ತಿರುವಾಗ ಇತರ ಇಂಧನ ಸಾಧನಗಳನ್ನು ಬಳಸಬೇಡಿ.



ಪರರ ಸಂತೋಷಕ್ಕಾಗಿಯೇ ಆತ್ಮಾರ್ಪಣೆ ಮಾಡುವ ಸುಗಂಧಿ ಹೂವೇ ನಿನ್ನ ನಿಸ್ವಾರ್ಥ ಸೇವೆಯೇ ಸೇವೆ.

—ಕೀಟ್ಸ್

ನಮ್ಮ ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸಿಕೊಳ್ಳಲು ಹೋರಾಡುವಾಗಲೆಲ್ಲ ಇತರರಿಗೂ ಅಂತಹ ಕಷ್ಟ ಕಾರ್ಪಣ್ಯಗಳಿರುತ್ತವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

—ಅಬ್ರಾಹಂ ಲಿಂಕನ್

ಅಕರ್ಮಗಳಲ್ಲಿ ತೊಡಗಬೇಡ. ಸತ್ಕರ್ಮಗಳನ್ನು ಮಾಡು. ಸ್ವಾರ್ಥವನ್ನು ತೊರೆದು ಪರಹಿತಕ್ಕಾಗಿ ದುಡಿಯಿರಿ. ತ್ಯಾಗಮಾಡಿರಿ.

—ಗೀತಾ

ಅಮ್ಮನ ಹಾಲು ಅಮೃತ

ಡಾ|| ಕರವೀರಪ್ರಭು ಕ್ಯಾಲಕೊಂಡ

ಮಗುವಿಗೆ ತಾಯಿಯ ಎದೆಹಾಲು ಎಲ್ಲ ಆಹಾರಕ್ಕಿಂತಲೂ ಶ್ರೇಷ್ಠ. ಇದನ್ನು ನಮ್ಮ ಪೂರ್ವಜರೂ ತಿಳಿದಿದ್ದರು.

> "ಹಣ್ಣು ಹಾಲಿಗಿಂತ ಚೆನ್ನ ತುಪ್ಪಕ್ಕಿಂತ
> ಚೆನ್ನಾಗಿ ಕಳಿತ ರಸಬಾಳೆ ಹಣ್ಣಿಗಿಂತ
> ಚೆನ್ನ ತಾಯಿಯ ಎದೆಹಾಲು"

ಜಾನಪದ ತ್ರಿಪದಿಯಲ್ಲಿ ಮೂಡಿಬಂದ ಹಾಡು ಇದನ್ನೇ ಸಾರಿ ಹೇಳುತ್ತದೆ. ಮೊಲೆ ಹಾಲು ಕುಡಿಸುವುದು ಸಹಜ ಪ್ರಕೃತಿ. ಇದರಲ್ಲಿ ಯಾವುದೇ ಅಡಚಣೆ, ಆತಂಕ, ಸಂಕೋಚ ಇರಬೇಕಾಗಿಲ್ಲ. ಆದರೆ ಇತ್ತೀಚೆಗೆ ನಾಗರಿಕತೆಯ ಸೋಗಿನಲ್ಲಿ, ಜಾಹಿರಾತುಗಳ ವ್ಯಾಮೋಹದಲ್ಲಿ, ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ, ತಾಯಿಯ ಸೌಂದರ್ಯ ಹಾಳಾಗುವುದೆಂಬ ಭಾವನೆ ಹೆಪ್ಪುಗಟ್ಟುತ್ತದೆ. ಬದಲಿ ಹಾಲಿನ ಬಳಕೆ, ಬಾಟಲಿ ಹಾಲು ಕುಡಿಸುವುದು ಹೆಚ್ಚುತ್ತಿದೆ. ಇದೊಂದು ಅನಾರೋಗ್ಯಕರ ಬೆಳವಣಿಗೆ ದುರಂತವೆಂದರೂ ತಪ್ಪಾಗಲಿಕ್ಕಿಲ್ಲ. ಇದು ಅನೇಕ ಅನಾಹುತಗಳಿಗೆ ಆಸ್ಪದ ಮಾಡಿಕೊಡುತ್ತಿರುವುದು ವಿಪಂಚನೆಯನ್ನುಂಟು ಮಾಡುವ ಸಂಗತಿಯಾಗಿದೆ. ನೈಸರ್ಗಿಕ ಕೊಡುಗೆಯನ್ನು ತ್ಯಜಿಸಿ, ಸೂತ್ರಗಳನ್ವಯ ರೂಪಿಸಿದ ಹಾಲನ್ನು ದೊರಕಿಸಿಕೊಳ್ಳುವುದರಲ್ಲಿ ತಮ್ಮ ಸಂಪನ್ಮೂಲಗಳನ್ನು ವ್ಯಯಿಸುತ್ತಿರುವುದು ನಿಜಕ್ಕೂ ಶೋಚನೀಯ ಸಂಗತಿ. ಎದೆಹಾಲಿನ ಬದಲು ಬಾಟಲಿ ಹಾಲಿಗೆ ಮೊರೆಹೋಗುತ್ತಿರುವುದು ಅವರಲ್ಲಿಯ ಅಜ್ಞಾನ ಮತ್ತು ತಿಳುವಳಿಕೆಯ ಅಭಾವದಿಂದ ಉಂಟಾಗಿದೆ ಎಂಬುದು ಸ್ಪಟಿಕದಷ್ಟೇ ಸ್ಪಷ್ಟ: ತಾಯಿಯ ಹಾಲು ಮಗುವಿಗೆ ಸರ್ವಶ್ರೇಷ್ಠ. ಅಮೃತವೆಂಬುದು ವೈಜ್ಞಾನಿಕವಾಗಿ ಬೆಳಕಿಗೆ ಬಂದಿದೆ. ತಾಯಿಯ ಜೀವಂತ ದ್ರವವಾದ ಎದೆಹಾಲು ಮಗುವಿಗೆ ಸರ್ವೋತ್ಕೃಷ್ಟ ಆಹಾರವಾಗಿದೆ. ತಾಯಿ ಮಗುವಿಗೆ ಮೊಲೆಯುಣಿಸುವಾಗ ಆಕೆ ತನ್ನ ಮಗುವನ್ನು ಅಪ್ಯಾಯವಾಗಿ ಅಪ್ಪಿಹಿಡಿದು ಅದಕ್ಕೆ ಆಹಾರ ಕೊಡುವುದಲ್ಲದೆ, ಪ್ರೀತಿ ವಾತ್ಸಲ್ಯವನ್ನೂ ಧಾರೆಯೆರೆಯುತ್ತಾಳೆ. ಅದು ಅವರಿಬ್ಬರ ಮಧ್ಯೆ ಮಧುರ ಬಾಂಧವ್ಯವನ್ನೂ ಬೆಳೆಸುತ್ತದೆ. 'ಹಾಲಿನೊಡನೆ ಪ್ರೇಮರಸವ ಜೀವದಲ್ಲಿ ತುಂಬಿದೆ' ಎಂದು ವರಕವಿ ಬೇಂದ್ರೆಯವರು ಹಾಡಿದ್ದಾರೆ. ಹೀಗಾಗಿ ಎದೆಹಾಲು ಉಣಿಸುವುದು ಒಂದು ಕ್ರಿಯೆ ಅಷ್ಟೇ ಅಲ್ಲ, ಅದರ ಮೂಲಕ ಆಕೆ ಪ್ರೀತಿವಾತ್ಸಲ್ಯ ಕೊಡುವುದರಿಂದಾಗಿ ಆ ಜೀವದ್ರವವನ್ನು ಕುರಾನ್

ರಕ್ತಕ್ಕೆ ಸಮನಾಗಿ ಕಂಡಿದೆ. ಈ ಕಾರ್ಯದಲ್ಲಿ ತಾಯಿ ಒಂದು ಅನಿರ್ವಚನೀಯವಾದ ಸುಖವನ್ನು ಸವಿಯುತ್ತಾಳೆ.

"....ಶಿಶುವಿಗೂಡಿಸಿ ಶಿವಗೆ ನೈವೇದ್ಯ
ಹಸುಳೆಯನು ಮೀಯಿಸಲು ಹರನಿಗಭಿಷೇಕ।
ತಾಪ ಕೊಲ್ಲದುದು ತಾಯ್ತನಕೆ ಸಾಧ್ಯ
ಕಂದನಲ್ಲಿ ಶಿವನ ಕಾಣುವ ಬಂಧನವೇ ಮುಕ್ತಿ ॥"

ಎಂದು ರಾಷ್ಟ್ರಕವಿ ಕುವೆಂಪು ಅವರು ವರ್ಣಿಸಿರುವುದು ಅತಿಶಯೋಕ್ತಿಯಲ್ಲ. ತಾಯಿಯ ಮಡಿಲಲ್ಲಿ ಮಲಗಿ, ಆ ಬೆಚ್ಚನೆಯ ಸ್ವರ್ಗದಲ್ಲಿ ಹಾಲುಣ್ಣುವ ಮಗುವಿಗಂತೂ ತಾಯಿಯ ಆ ನಿಕಟ ಸಂಪರ್ಕ ತುಂಬಾ ಹಿತಕರ ಮತ್ತು ಆಪ್ಯಾಯಮಾನ. ಕೆಲ ಅತ್ಯಾಧುನಿಕ ತರುಣಿಯರಿಗೆ ಇದೆಲ್ಲಾ ಭಾವುಕತೆ ಎಂದು ತೋರಬಹುದು. ಆದರೆ ವೈಜ್ಞಾನಿಕವಾಗಿಯೂ ತಾಯಿಯ ಹಾಲೆ ಮಗುವಿಗೆ ಸರ್ವಶ್ರೇಷ್ಠ ಆಹಾರವೆಂಬುದು ಸಿದ್ಧವಾಗಿದೆಯಲ್ಲದೆ, ಆದರಿಂದ ಇನ್ನೂ ಹಲವಾರು ಪ್ರಯೋಜನಗಳಿವೆ. 'ಕೃಷ್ಣ ಕುಮಾರಿ'ಯಲ್ಲಿ ವರಕವಿ ಬೇಂದ್ರೆಯವರು

"ಮೊಲೆಯ ಹಾಲನು ಕುಡಿಸಿ ಮಮತೆಯನ್ನುಣಿಸಿದ।
ಮೊಲೆಯ ಹಾಲಿನ ಕೂಡ ಮೈಯೆಲ್ಲ ಬಣ್ಣಿಸಿದ।
ಮೊಲೆಯ ಹಾಲಿನೊಡನೆ ಸರ್ವವನು ಹಣ್ಣಿಸಿದಂಥ
ದೇವಸ್ವರೂಪ ತಾಯಿ ॥"

ಎಂದು ಹಾಡಿ ಹರಿಸಿರುವುದು ಅರ್ಥಪೂರ್ಣವಾಗಿದೆ. ಸ್ತನಪಾನದ ಬಗ್ಗೆ ತಿರಸ್ಕಾರ ತಾಳಿದ್ದ ಪಾಶ್ಚಿಮಾತ್ಯರಲ್ಲಿ, ಇಂದು ಸ್ತನಪಾನದ ಬಗ್ಗೆ ಉತ್ಸಾಹ ಕಂಡುಬಂದಿದೆ. ಆದರೆ ನಿಸರ್ಗದತ್ತ ಈ ಕೊಡುಗೆಯನ್ನು ಕೈಬಿಟ್ಟು ಕೃತಕ ಹಾಲಿನತ್ತ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅದರಲ್ಲೂ ನಗರ ಪಟ್ಟಣಗಳಲ್ಲಿನ ಸ್ತ್ರೀಯರು ಸಾಗುತ್ತಿರುವುದು ನಿಜಕ್ಕೂ ಆತಂಕವನ್ನುಂಟು ಮಾಡುವ ಸಂಗತಿಯಾಗಿದೆ. "ಎಳೆಯ ಮಕ್ಕಳಿಗೆ ಯೋಗ್ಯ ಆಹಾರ, ಪ್ರೀತಿ ವಾತ್ಸಲ್ಯ, ಪ್ರೋತ್ಸಾಹ ಮತ್ತು ಸೋಂಕುಗಳ ವಿರುದ್ಧ ರಕ್ಷಣೆಬೇಕು. ಎದೆಹಾಲು ಕೊಡುಗೆ ಈ ಎಲ್ಲ ಅಗತ್ಯಗಳನ್ನು ಪೂರೈಸಿ, ಅವರ ಜೀವನಕ್ಕೆ ಅತ್ಯುತ್ತಮ ಬುನಾದಿಯನ್ನು ಹಾಕುತ್ತದೆ. ಅದು ಜೈವಿಕ ಕಾರ್ಯಕ್ರಿಯೆಯ ಮೂಲಭೂತ ಭಾಗ" ಎಂದು ಜಾಗತಿಕ ಆರೋಗ್ಯಸಂಸ್ಥೆ ಸಾರಿ, ಈ ನಿಟ್ಟನಲ್ಲಿ ಜನಜಾಗೃತಿ ಉಂಟುಮಾಡಲು ಎದೆಹಾಲು ಕೊಡುಗೆ ಯಶಸ್ವಿಯಾಗಿ ರೂಪಗೊಂಡು ಮುಂದುವರಿಯಲು ತಾಯಿಗೆ ಕುಟುಂಬ, ಸಮಾಜ ಮತ್ತು ಜನಾರೋಗ್ಯ ಕಾರ್ಯಕರ್ತರು ಪ್ರೋತ್ಸಾಹ ನೀಡಬೇಕು" ಎಂದು ಕೋರಿದೆ.

ಮೊಲೆಹಾಲು ಮಗುವಿನ ವಯಸ್ಸಿಗೆ ತಕ್ಕಂತ ಹಾಲು. ಅಪಕ್ವವಾದ ಶಿಶುವಿಗೆ, ಮೊದಲ ದಿನದ ಮಗುವಿಗೆ, ಹತ್ತನೇ ದಿನದ ಮಗುವಿಗೆ, ಮೂರು ತಿಂಗಳ ಮಗುವಿಗೆ ಅದರ ಅವಶ್ಯಕತೆಗೆ ತಕ್ಕಂತೆ ಹಾಲು ಮಾರ್ಪಾಡಾಗುವುದರಿಂದ ಆದರ್ಶವಾದ ಹಾಲಾಗುತ್ತದೆ. ಈ ಮಾರ್ಪಾಡು ಹಾಲಿನ ನೀರಿನಾಂಶ ಶಕ್ತಿ (ಕ್ಯಾಲರಿ) ಮತ್ತು ಲವಣಾಂಶಗಳಲ್ಲಿ ಆಗುತ್ತದೆ. ಈ ಹಾಲು ಎಳೆಯ ಕಂದನಿಗೆ ತುಂಬ ಸೂಕ್ತ ಆಹಾರ

ವಾಗಿದ್ದು, ಅಗತ್ಯವಾದ ಎಲ್ಲ ಪೌಷ್ಟಿಕ ವಸ್ತುಗಳನ್ನು ಪೂರೈಸಲು ಸಮರ್ಥವಾಗಿದೆ. ಅವರಲ್ಲಿಯ ಖನಿಜ ಲವಣಗಳು (ಕ್ಯಾಲ್ಸಿಯಂ, ಕಬ್ಬಿಣ ಇತ್ಯಾದಿ) ಮಗುವಿನ ಅಗತ್ಯಕ್ಕೆ ಅನುಗುಣವಾಗಿದ್ದು, ಶಿಶುವಿನ ಬೆಳವಣಿಗೆಯ ಅವಶ್ಯಕತೆಗಳನ್ನು ಪೂರೈಸಬಲ್ಲವು. ಜೀವಸತ್ವಗಳೆಲ್ಲವೂ ಹಾಲಿನಲ್ಲಿದ್ದು ಅವು ಶಿಶುವಿನ ಆರೋಗ್ಯ ಸಂವರ್ಧನೆಗೆ ಕಾರಣವಾಗಿವೆ. ಇವೆಲ್ಲವನ್ನು ಮನಗಂಡ ಸುಶ್ರುತ 'ಹಾಲಿನಿಂದ ತುಂಬಿದ ಸಾಲು ಸಾಗರಗಳು ಸದಾ ನಿನ್ನ ಸ್ತನದಲ್ಲಿ ಹರಿದು, ಅದರಿಂದ ಮಗುವಿನ ಶಕ್ತಿ, ಸಾಮರ್ಥ್ಯ ಮತ್ತು ಬಲ ಹೆಚ್ಚಲಿ' ಎಂದು ಹಾರೈಸಿದ್ದಾನೆ. ತಾಯಿಗೆ ದೈವದತ್ತವಾದ ಈ ಸಾಮರ್ಥ್ಯವನ್ನು ಕುರಿತು ಯಹೂದಿ ಗಾದೆ ಹೇಳುವ ಮಾತು ಎಷ್ಟೊಂದು ಸಮಂಜಸಃ' ದೇವರು ಎಲ್ಲ ಕಡೆಯೂ ಇರಲಾರನಾದುದರಿಂದ ಆತ ತಾಯಿಯನ್ನು ನಿರ್ಮಿಸಿದ್ದಾನೆ.

ಹೆರಿಗೆಯಾದ ಅರ್ಧ ಗಂಟೆಯಿಂದಲೇ ನವಜಾತ ಶಿಶುವಿಗೆ ಮೊಲೆಯುಣಿಸಲು ಪ್ರಾರಂಭಿಸಬೇಕು. ಆಗ ಸ್ತನಗಳಿಂದ ಹಳದಿ ಹಸಿರು ವರ್ಣದ 'ಗಿನ್ನಹಾಲು' ಗಟ್ಟಿಯಾಗಿ, ಜಿಗುಟಾಗಿ, ಜಿನುಗಿ ಹೊರಬರುತ್ತದೆ. ಇದು ಮೊದಲ ಮೂರುದಿನ ಸ್ರವಿಸುವುದು. ಇದರಲ್ಲಿ ಪ್ರೋಟೀನ್ ವಿಪುಲವಾಗಿದ್ದು ಗ್ಲೋಬ್ಯುಲಿನ್ ಅಂಶಗಳನ್ನು ಒಳಗೊಂಡಿರುತ್ತದೆ. ಕೊಬ್ಬು ಮತ್ತು ಸಕ್ಕರೆ ಪ್ರಮಾಣ ಕಡಿಮೆ ಇರುತ್ತದೆ. 'ಎ' ಅನ್ನಾಂಗ ಹೇರಳವಾಗಿರುತ್ತದೆ. ಇದು ಇರುಳುಗಣ್ಣು ಹಸುಗೂಸುಗಳ ಸಮೀಪ ಸುಳಿಯದಂತೆ ಮಾಡುತ್ತದೆ. ಗಿನ್ನಹಾಲು ರೋಧಕ ವಸ್ತುಗಳನ್ನು ಮತ್ತು ಬಿಮಕಣಗಳನ್ನು ವಿಶೇಷವಾಗಿ ಹೊಂದಿರುವುದರಿಂದ ಬಾಲ್ಯದಲ್ಲಿ ಅನೇಕ ರೋಗಾಣುಗಳಿಂದ ಉದ್ಭವಿಸುವ ಸೋಂಕು ರೋಗಗಳ ವಿರುದ್ಧ ಸೆಣಸಬಲ್ಲ ಶಕ್ತಿ ಸಾಮರ್ಥ್ಯವನ್ನು ತಂದು ಕೊಡುತ್ತದೆ.

ಅನೇಕರಲ್ಲಿ ಗಿನ್ನಹಾಲಿನ ಬಗ್ಗೆ ತಪ್ಪು ತಿಳುವಳಿಕೆಗಳಿವೆ. ಇದು ಜಡ-ಪದಾರ್ಥ. ಹಸುಗೂಸಿಗೆ ಅಜೀರ್ಣವಾಗುವುದು ಎಂದು ಭಾವಿಸಿ ಕೂಸಿಗೆ ಕುಡಿಸುವುದಿಲ್ಲ. ಕೆಲವರಂತೂ ಹಿಂಡಿ ಮೊಲೆಯಿಂದ ಹೊರತೆಗೆದು ಚೆಲ್ಲುವರು. ಜನರಲ್ಲಿ ಮಡುಗಟ್ಟಿರುವ ಅಜ್ಞಾನ, ಅಶಿಕ್ಷತೆ ಇದಕ್ಕೆ ಕಾರಣ. ಅವರಿಗೆ ಇದರ ಬಗ್ಗೆ ತಿಳುವಳಿಕೆ ಮಾಡಿಕೊಡಬೇಕು. ಇದು ಇಂದಿನ ಅವಶ್ಯಕತೆ.

ಪ್ರಾರಂಭದಲ್ಲಿ ೧-೨ ಚಮಚೆಯಷ್ಟು ಮಾತ್ರ ಹಾಲಿನ ಪ್ರಮಾಣ ಇದ್ದರೂ, ಮಗುವಿನ ಅವಶ್ಯಕತೆಗೆ ಅಷ್ಟೇ ಸಾಕು ಎಂಬುದನ್ನು ಮರೆಯಬಾರದು. ಶೈಶವಾವಸ್ಥೆಯ ಪ್ರಾರಂಭದಲ್ಲಿ ಮತ್ತಾವ ವಸ್ತುವಿನ ಅಗತ್ಯವಿಲ್ಲ. ವಿನಾಕಾರಣ ಸಕ್ಕರೆ ನೀರು ನೀಡುವರು. ಇದು ಅಮೃತವನ್ನು ಚೆಲ್ಲಿ, ವಿಷವನ್ನು ಕೈಯಾರೆ ಕುಡಿಸಿದಂತೆ ಎಂದರೆ ತಪ್ಪಾಗಲಿಕ್ಕಿಲ್ಲ. ಕೆಲವರು ಜೇನುತುಪ್ಪವನ್ನು ಚೀಪಿಸುವರು, ಮತ್ತೆ ಕೆಲವರು ಔಡಲಎಣ್ಣೆಯನ್ನು ನೆಕ್ಕಿಸುವರು. ಇದರಿಂದ ಅನಾಹುತಗಳಿಗೆ ಆಹ್ವಾನ ನೀಡಿದಂತಾಗುವುದು. ಗಿನ್ನಹಾಲು ದಿನಗಳೆದಂತೆ ನೀರಾಗುತ್ತ ನವಜಾತ ಶಿಶುವಿನ ಅಪಕ್ವ ಮೂತ್ರಪಿಂಡದ ಮೇಲೆ ಹೊರೆಯನ್ನು ಹೇರದೆ ಮಗುವಿನ ಬೇಕು ಬೇಡಿಕೆಗಳನ್ನು ಪೂರೈಸುತ್ತದೆ.

ಬೆಳೆಯುತ್ತಿರುವ ಮಗುವಿನ ಬೇಡಿಕೆಗಳಿಗನುಗುಣವಾಗಿ ಹೆರಿಗೆಯಾದ ಮೂರನೇ ದಿನದಿಂದ ಹಾಲು ತಯಾರಿಕೆಯು ತೀವ್ರಗೊಂಡು ಪ್ರಮಾಣ ಹೆಚ್ಚುತ್ತದೆ. ಮಗು ಮೊಲೆ ಚೀಪುವುದು ಹಾಲಿನ ಉತ್ಪಾದನೆಗೆ ಪ್ರಚೋದನೆ ನೀಡುತ್ತದೆ. ತಾಯಿ ಹಾಲು ಪರಿಶುದ್ಧವಾಗಿರುತ್ತದೆ. ಅದು ರೋಗಾಣುಗಳಿಂದ ಮುಕ್ತವಾಗಿರುತ್ತದೆ. ಮಗುವಿಗೆ ಬೇಕಾದಂತೆ ಸಮಶೀತೋಷ್ಣವಾಗಿರುತ್ತದೆ. ಬೇಕೆಂದಾಗ ಸಿಗುತ್ತದೆ. ಕಾಯಬೇಕಾದ ಅವಶ್ಯಕತೆಯಿಲ್ಲ; ಕಾಸು ಕೊಡಬೇಕಾಗಿಲ್ಲ. ಹಾಲು ಕುಡಿಸುವಿಕೆ ಮಧುರ ಬಾಂಧವ್ಯ ಹೆಚ್ಚಿಸುವುದರ ಜೊತೆಗೆ, ಮಗುವನ್ನು ಮಾನಸಿಕವಾಗಿ ಹೆಚ್ಚು ಆರೋಗ್ಯವಂತನನ್ನಾಗಿ ಮಾಡುತ್ತದೆ. ತಾಯಿ ಹಾಲು ಬೇರೆ ಹಾಲಿಗಿಂತ ಸಿಹಿಯಾಗಿರುತ್ತದೆ. ಅದಕ್ಕೆಂದೇ "ಸ್ತನಾಮೃತ ಸೇವಿಸುವ ಶಿಶು ಸಕ್ಕರೆಯ ಸಿಟ್ಟಿಸುವುದೇ?" ಎಂದು ಕವಿ ಕೇಳಿದ್ದಾರೆ. ಅದು ಅಷ್ಟು ಸಿಹಿಯಾಗಿರಲು, ತಾಯಿ ಹಾಲಿನಲ್ಲಿರುವ ಲ್ಯಾಕ್ಟೋಜ ಕಾರಣ. ಇದು ಮಗುವಿನ ಮೆದುಳಿನ ಬೆಳವಣಿಗೆಗೆ ಬೇಕಾಗುವ ಗ್ಯಾಲಕ್ಟೋಸ್‌ನ್ನು ಹೇರಳವಾಗಿ ಪೂರೈಸುವುದು. ಮೆದುಳಿನ ಬೆಳವಣಿಗೆ ಶಿಶುವಿನಲ್ಲಿ ಅತ್ಯಂತ ವೇಗವಾದ್ದರಿಂದ ಇದರ ಅವಶ್ಯಕತೆ ಹೆಚ್ಚು ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ.

ಎದೆಹಾಲಿನಲ್ಲಿ 'ಬೈಫಿಡಸ್ ಫ್ಯಾಕ್ಟರ್' ಇರುತ್ತದೆ. ಇದು ಕಂದಮ್ಮಗಳ ಕರುಳಲ್ಲಿ ಲ್ಯಾಕ್ಟೋಬ್ಯಾಸಿಲಸ್ ಬೈಫಿಡಸ್ ಬೆಳವಣಿಗೆಯನ್ನು ಪ್ರಚೋದಿಸುತ್ತದೆ. ಇವುಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲ್ಪಟ್ಟ ಲ್ಯಾಕ್ಟಿಕ್ ಆಮ್ಲ ಮತ್ತು ಫಾರ್ಮಿಕ್ ಆಮ್ಲ ಕರುಳಿನಲ್ಲಿ ನೆಲೆನಿಂತಿರುವ ಅಪಾಯಕಾರಿ ಬ್ಯಾಕ್ಟೀರಿಯಾ ಇಕೋಲೈ ಸಂಖ್ಯಾಭಿವೃದ್ಧಿಯನ್ನು ಹತ್ತಿಕ್ಕುವುದು. ಜೊತೆಗೆ ಉಪಕಾರಿ ಸೂಕ್ಷ್ಮ ಜೀವಿಗಳ ಬೆಳವಣಿಗೆಯನ್ನು ಪ್ರಚೋದಿಸಿ, ಅವುಗಳಿಂದ ಜೀವಸತ್ವಗಳು ರೂಪುಗೊಳ್ಳುವಂತೆ ಮಾಡುತ್ತದೆ. ಲ್ಯಾಕ್ಟಿಕ್ ಆಮ್ಲದ ಸಹಾಯದಿಂದ ಮಗು ಮೂಳೆಗಳ ಬೆಳವಣಿಗೆಗೆ ಬೇಕಾದ ಕ್ಯಾಲ್ಸಿಯಂ ಮತ್ತು ಫಾಸ್ಫರಸ್ ಲವಣಗಳನ್ನು ಹೀರಿಕೊಳ್ಳುತ್ತದೆ. ತಾಯಿ ಹಾಲಿನಲ್ಲಿ ಅಲರ್ಜಿ ನಿರೋಧಕ ಶಕ್ತಿ ಸಹ ಇರುತ್ತದೆ. ಇದು ಹಸುಗೂಸುಗಳ ಗಜಕರ್ಣ, ಆಹಾರದ ಅಲರ್ಜಿಗಳ ಹಾವಳಿಯನ್ನು ಹತ್ತಿಕ್ಕುವುದು.

ಸಂಶೋಧನೆಗಳು ತಾಯಿ ಹಾಲಿನಲ್ಲಿ ರೋಗ ನಿರೋಧಕ ಶಕ್ತಿ ಇರುವುದನ್ನು ಸಾದರಪಡಿಸಿದೆ. ಇದು ಕೊಲೆಸ್ಟ್ರಂನಲ್ಲಿ ಅತ್ಯಧಿಕ. ತಾಯಿ ಹಾಲಿನಲ್ಲಿ ಐ.ಜಿ.ಎ, ಐ.ಜಿ.ಜಿ. ಮತ್ತು ಐ.ಜಿ.ಎಂ. ಪ್ರತಿಕಾಯಗಳು ಇರುತ್ತವೆ. ಈ ರೋಗ ನಿರೋಧಕ ವಸ್ತುಗಳು ರೋಗಕಾರಕ ಸೂಕ್ಷ್ಮ ಜೀವಿಗಳಿಂದ ಬರಬಹುದಾದ ನೆಗಡಿ, ಕೆಮ್ಮು, ಪೋಲಿಯೊ, ನ್ಯೂಮೋನಿಯಾ, ಭೇದಿಗಳಿಂದ ರಕ್ಷಣೆಯನ್ನೊದಗಿಸುತ್ತವೆ. ತಾಯಿ ಅಪೌಷ್ಟಿಕತೆಯ ಕಪಿಮುಷ್ಟಿಯಲ್ಲಿ ತತ್ತರಿಸುತ್ತಿದ್ದರೂ, ಉತ್ಪನ್ನವಾದ ಹಾಲು ನೀರಾದರೂ ಅಮೀಬ, ಜಿಯಾರ್ಡಿಯಾ ಮುಂತಾದ ಭೇದಿ ಕ್ರಿಮಿಗಳನ್ನು ಅದು ಯಶಸ್ವಿಯಾಗಿ ನಾಶಮಾಡುತ್ತದೆ. ಹೀಗಾಗಿ ತಾಯಿ ಹಾಲುಂಡು ಬೆಳೆವ ಮಕ್ಕಳಲ್ಲಿ ಅತಿಸಾರದ ಹಾವಳಿ ಅಪರೂಪ.

ನಿರ್ಜಲೀಕರಣದಂಥ ಅಪಾಯ ತಲೆದೋರುವುದು ಅಸಾಮಾನ್ಯ. ತಾಯಿ ಹಾಲು ಕುಡಿದು ಬೆಳೆದ ಮಕ್ಕಳಿಗೆ ವಯಸ್ಸಾದ ಮೇಲೆ ಬರುವ ಇನ್ಸುಲಿನ್ ಬೇಕಾಗುವ ಸಕ್ಕರೆ ಕಾಯಿಲೆ, ರಕ್ತನಾಳ ಪೆಡಸುಗಟ್ಟುವಿಕೆ, ಕೆಲತರಹದ ಕ್ಯಾನ್ಸರ್ ಮತ್ತು ನರಗಳ ಕಾಯಿಲೆಗಳು ಕಡಿಮೆ ಎಂಬುದನ್ನು ಅಂಕಿ ಅಂಶಗಳು ಸ್ಪಷ್ಟಪಡಿಸಿವೆ.

ಎದೆ ಹಾಲಿನಲ್ಲಿರುವ ಪ್ರೋಟೀನ್ ತುಂಬ ಹೆಚ್ಚಿನ ಪೌಷ್ಟಿಕ ಮೌಲ್ಯವನ್ನು ಪಡೆದಿದ್ದು ಅದು ಹಸುವಿನ ಹಾಲಿನಲ್ಲಿರುವ ಪ್ರೋಟೀನ್‌ಗಿಂತ ಹೆಚ್ಚು ಸುಲಭವಾಗಿ ಪಚನಗೊಳ್ಳುತ್ತದೆ. ಅದಕ್ಕೆ ಕಾರಣ ಅದರಲ್ಲಿ ಲ್ಯಾಕ್ಟಾಲ್ಬುಮಿನ್, ಲ್ಯಾಕ್ಟೋಗ್ಲಾಬ್ಯುಲಿನ್ ವಿಪುಲ ಪ್ರಮಾಣದಲ್ಲಿರುವುದೇ ಆಗಿದೆ. ಕೇಸಿನ ಕಡಿಮೆ ಪ್ರಮಾಣದಲ್ಲಿರುತ್ತದೆ. ಹಸುವಿನ ಹಾಲಿನಲ್ಲಿ ಇದು ಹೆಚ್ಚು ಇರುವುದರಿಂದ ಹಾಲು ಬೇಗ ಹೆಪ್ಪುಗಟ್ಟುತ್ತದೆ. ಇದರಿಂದ ಮಕ್ಕಳು ಅಜೀರ್ಣದ ತೊಡು ತೊಂದರೆಗಳನ್ನು ಹೊಂದಬಹುದು. ಹೊಟ್ಟೆ ಉಬ್ಬಬಹುದು. ಹೊಟ್ಟೆ ನುಲಿತದಿಂದ ನರಳಬಹುದು. ಮೊಲೆಹಾಲು ಕುಡಿದ ಮಕ್ಕಳಲ್ಲಿ ಇಂಥ ಸಾಧ್ಯತೆಗಳು ಕಡಿಮೆ. ಎದೆ ಹಾಲಿನಲ್ಲಿ ಅನೇಕ ಅವಶ್ಯಕ ಅಮೈನೊ ಆಮ್ಲಗಳಿದ್ದು, ಅವು ಮಗುವಿನ ಬೆಳವಣಿಗೆಗೆ ಮತ್ತು ಅದರ ದೇಹದಲ್ಲಿ ಉಂಟಾಗುವ ರಿಪೇರಿ ಕಾರ್ಯಕ್ಕೆ ಬೇಕಾದ ಪ್ರಮಾಣದಲ್ಲಿರುತ್ತದೆ.

ತಾಯಿ ಹಾಲಿನಲ್ಲಿರುವ ಕೊಬ್ಬಿನಲ್ಲಿ ಲಿನೋಲಿಯಿಕ್ ಮೇದೋ ಆಮ್ಲ ಹೆಚ್ಚಿನ ಪ್ರಮಾಣದಲ್ಲಿದ್ದು, ಸುಲಭವಾಗಿ ಹೀರಲ್ಪಡುತ್ತದೆ. ಮೆದುಳಿನ ಬೆಳವಣಿಗೆಗೆ ಸಹಾಯಕವಾಗುತ್ತದೆ. ಈ ಕೊಬ್ಬು ಕೊಡುವ ಕ್ಯಾಲರಿ ಕಡಿಮೆಯಾಗಿದ್ದರೂ, ಮಗುವಿನ ಅವಶ್ಯಕ ಕ್ಯಾಲರಿಗಳನ್ನು ಪೂರೈಸುತ್ತದೆ. ಸುಲಭವಾಗಿ ಪಚನಗೊಳ್ಳುತ್ತದೆ. ಇಂಥ ಹಾಲುಂಡು ಬೆಳೆದ ಮಕ್ಕಳಲ್ಲಿ ಬೊಜ್ಜು ಶೇಖರಗೊಳ್ಳುವುದಿಲ್ಲ.

ಎದೆ ಹಾಲಿನಲ್ಲಿ ನೀರಿನಲ್ಲಿ ಕರಗುವ 'ಸಿ' ಮತ್ತು 'ಬಿ' ಸಂಕೀರ್ಣದ ಜೀವಸತ್ವಗಳು ಮತ್ತು ನೀರಿನಲ್ಲಿ ಕರಗುವ ವಿಶೇಷವಾದ 'ಡಿ' ಜೀವಸತ್ವ ಇರುತ್ತವೆ. ಇವು ಮಗುವಿನ ಸಾಮಾನ್ಯ ಬೆಳವಣಿಗೆಗೆ ಸಹಾಯಕಾರಿ. ಹಾಗೆಯೇ ಕೊಬ್ಬಿನಲ್ಲಿ ಕರಗುವ 'ಡಿ' ಜೀವಸತ್ವ 'ರಿಕೆಡ್ಸ್'ನ್ನು ನಿವಾರಿಸುತ್ತದೆ. ಕೊಬ್ಬಿನಲ್ಲಿ ಕರಗುವ 'ಎ' ಜೀವಸತ್ವ ಗಿನ್ನದ ಹಾಲಿನಲ್ಲಿ ಹೆಚ್ಚಿದ್ದು ಅಂಧತ್ವ ನಿವಾರಣೆಗೆ ಅನುಕೂಲಕರವಾಗಿರುವುದು. ಎದೆ ಹಾಲಿನಲ್ಲಿ ಕ್ಯಾಲ್ಸಿಯಂ ಮತ್ತು ಪಾಸ್ಪರಸ್ ಲವಣಾಂಶಗಳು ಹಸು, ಎಮ್ಮೆ ಮತ್ತು ಸೂತ್ರದ ಹಾಲಿಗಿಂತ ಕಡಿಮೆ ಇದ್ದರೂ, ಅವು ಮೌಲಿಕವಾಗಿ ಮಹತ್ವವುಳ್ಳವುಗಳಾಗಿದ್ದು ರಕ್ತಕ್ಕೆ ಸಂಪೂರ್ಣ ಸೇರುತ್ತದೆ.

ಮೊಲೆಹಾಲು ಕುಡಿಸುವುದರಿಂದ ತಾಯಿಯ ಗರ್ಭಕೋಶ ಬೇಗ ಸಂಕುಚಿತವಾಗುತ್ತದೆ. ಹಾಲು ಕುಡಿಸುವ ತಾಯಂದಿರಲ್ಲಿ ಮುಂದಿನ ಗರ್ಭಧಾರಣೆ ನಿಧಾನವಾಗುತ್ತದೆ. ಹಾಗೆಯೇ ಗರ್ಭಿಣಿಯರಿಗೆ ತೊಡೆ ಮತ್ತು ಪೃಷ್ಟಭಾಗದಲ್ಲಿಯ ಕೊಬ್ಬು ಹಾಲು ಕುಡಿಸುವುದರಿಂದ ಕರಗುತ್ತದೆ. ಹಾಲೂಡಿಸುವ ತಾಯಿ ಸ್ಥಳೀಯವಾಗಿ ದೊರಕುವ ಆಹಾರ ವಸ್ತುಗಳು, ಸ್ಥಳೀಯ

ಪದ್ಧತಿ, ನೀತಿ ನಿಯಮಗಳನ್ನು ಅನುಸರಿಸಿ ಸಮತೋಲನ ಆಹಾರವನ್ನು ಸೇವಿಸ ಬೇಕು. ಮೊಲೆಯುಣಿಸುವ ಮತ್ತು ಹಸು ಳೆಯ ಆರೈಕೆ ಮಾಡುವ ವಿಧಾನಗಳ ಬಗೆಗೆ ಯೋಗ್ಯ ಸಲಹೆ ಸೂಚನೆಗಳನ್ನು ತಾಯಿ ಯಾಗುವವಳು ಮೊದಲೇ ಅನುಭವಸ್ಥರ ಜೊತೆಗೆ ಮಾತನಾಡಿ, ಚರ್ಚಿಸಿ ತಿಳಿದು ಕೊಂಡಿರಬೇಕು. ಸಂಶಯಗಳನ್ನು ನಿವಾರಿಸಿ ಕೊಂಡಿರಬೇಕು. ಆಗ ಮಗುವಿನ ಆರೈಕೆ ಮತ್ತು ಹಾಲುಡಿಕೆಯನ್ನು ಸಮರ್ಪಕ ವಾಗಿ ಮಾಡಬಹುದು.

ಅಳುವ ಮಗುವಿಗೆ ತಾನೆ ಮೊಲೆ ಹಾಲು? ಮಗು ಹಸಿದಾಗ ಅಳತೊಡಗು ತ್ತದೆ. ಕಾರಣ ಮಗು ಹಸಿದಾಗ ಮೊಲೆ ಯುಣಿಸುವುದು ಅತ್ಯುತ್ತಮ ವಿಧಾನ. ಅದರ ಬದಲು ವೇಳಾಪಟ್ಟಿಯನ್ನನುಸರಿಸಿ ಹಾಲು ಕುಡಿಸುವುದು ಸರಿಯಲ್ಲ. ಹಾಲು ಸಾಕಷ್ಟಿದ್ದರೆ ಮಗುವೇ ಮೂರು ನಾಲ್ಕು ಗಂಟೆಗಳಿಗೊಮ್ಮೆ ಹಾಲು ಕುಡಿಯುವ ಪದ್ಧತಿಗೆ ಹೊಂದಿಕೊಳ್ಳುತ್ತದೆ. ಮಗುವಿನ ಬೇಡಿಕೆಯನ್ನು ಅನುಸರಿಸಿ ಮೊಲೆಯುಣಿಸ ಬೇಕು. ಇದು ತಲೆತಲಾಂತರದಿಂದ ರೂಢಿ ಗೊಂಡಿದ್ದು ಅದನ್ನೇ ಅನುಸರಿಸುವುದು ಉತ್ತಮ ಮಾರ್ಗ. ಅದರಿಂದ ಹಾಲು ಸ್ರವಿಕೆ ಹೆಚ್ಚುವುದು. ಅಸಮರ್ಪಕವಾದ ಮೊಲೆ ಕೊಡುಗೆ ಹಾಲು ತಯಾರಿಕೆಯನ್ನು ಹತ್ತಿಕ್ಕುವುದು. ಹಾಲೂಡಿಸುವುದರಿಂದ ತಾಯಿಯ ಆಕಾರ ವಿಕಾರಗೊಳ್ಳುವು ದೆಂಬುದು ತಪ್ಪು.

ಸೂತ್ರದನ್ವಯ ಸಿದ್ಧಪಡಿಸಿದ ಹಾಲು, ಹಸು ಮತ್ತು ಎಮ್ಮೆಯ ಹಾಲು ಎಳೆಯ ಮಗುವಿನ ಎಲ್ಲ ಅವಶ್ಯ ಕತೆಗಳನ್ನು ಪೂರೈಸುವಲ್ಲಿ ಅಸಮರ್ಥ ವಾಗಿದೆ. ಶಿಶುವಿಗೆ ಎದೆ ಹಾಲೇ ಅತ್ಯುತ್ತಮ ಆಹಾರವಾಗಿದ್ದು, ಕಲಬೆರಿಕೆಗೆ ಅವಕಾಶ ವಿರುವುದಿಲ್ಲ. ಅದರಿಂದ ಮಗುವಿನ ಹೊಟ್ಟೆ ಕೆಡುವುದಿಲ್ಲ, ಅತಿಸಾರ ಅಪ್ಪುವುದಿಲ್ಲ; ಮಲಬದ್ಧತೆ ಉಂಟಾಗುವುದಿಲ್ಲ, ಅಲರ್ಜಿ ಕಾಯಿಲೆಗಳೂ ಅಪರೂಪ. ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಸಮರ್ಪಕವಾಗುವುದು. ಇಂಥ ಅಪೂರ್ವ ಗುಣಗಳಿಂದ ರೂಪಗೊಂಡಿರುವ ತಾಯಿಯ ಹಾಲು ಅತ್ಯುತ್ತಮ ಆಹಾರವಾಗಿದ್ದು, ಅದಕ್ಕೆ ಮಗು ಯಾವ ತೊಂದರೆಯಿಲ್ಲದೆ ಹೊಂದಿಕೊಳ್ಳುತ್ತದೆ. ತಾಯಿ ಹಾಲಿನ ರಚನೆಯನ್ನು ಬೇರೆ ಯಾವ ಹಾಲೂ ಪಡೆಯಲು ಸಾಧ್ಯವಿಲ್ಲ. ಕುವೆಂಪು ಹೇಳು ವಂತೆ 'ತಾಯಿ ಮೊಲೆ ಹಾಲು ಬಾಯ್ಗೆ ಸವಿಜೇನು' ಆಕೆಯಪ್ಪುಗೆ ಮೈಗೆ ಬಲು ಸೊಗಸು.

ವಿಶ್ವಕ್ಕೆ ಸ್ಫೂರ್ತಿ ಮತ್ತು ಬೆಳಕನ್ನು ನೀಡುವ ಸತ್ಯ ಸಿದ್ಧಾಂತವನ್ನು ಸಾರುವ ಶಕ್ತಿ ಬಂದಾಗಲೇ ಬಾಳು ಹಸನಾಗುವುದು.

ರಮಣ ಮಹರ್ಷಿ

ಕುಷ್ಠರೋಗ—ಪಾಪದ ಫಲವಲ್ಲ

ಎನ್. ಆರ್. ಪಾಟೀಲ

"ಕುಷ್ಠರೋಗಿಯನ್ನು ರೋಗ ಸಾಯಿಸುವುದಿಲ್ಲ ಸಮಾಜ ಸಾಯಿಸುತ್ತದೆ"–ಎಂಬ ಮಾತು ಕುಷ್ಠರೋಗದ ಬಗೆಗೆ ನಮ್ಮ ಸಮಾಜಕ್ಕಿರುವ ದೃಷ್ಟಿಯನ್ನು ಎತ್ತಿ ತೋರಿಸುತ್ತದೆ. ಕುಷ್ಠರೋಗ ತನಗೆ ತಗುಲಿದೆ ಎಂದು ತಿಳಿದಾಗ ಅವನು ಸಾವಿಗಿಂತಲೂ ಹೆಚ್ಚಾಗಿ ಸಮಾಜಕ್ಕೆ ಹೆದರುತ್ತಾನೆ. ಮನೆಮಂದಿಯಿಂದ ಹಿಡಿದು ನೆರೆಹೊರೆಯವರಾದಿಯಾಗಿ ಎಲ್ಲರೂ ಕುಷ್ಠಪೀಡಿತನನ್ನು ತಿರಸ್ಕಾರ ಭಾವದಿಂದಲೇ ನೋಡುತ್ತಾರೆ. ಮೈಮುಖದಲ್ಲಿನ ಬಿಳಿ ಕಲೆಗಳಿಂದಾರಂಭವಾಗುವ ಈ ರೋಗಕ್ಕೆ ದಿನಗಳೆದಂತೆ ಕೈಕಾಲುಗಳ ಬೆರಳುಗಳು ಬಲಿಯಾದಾಗ ರೋಗಿ ಎಲ್ಲರಿಂದಲೂ ತಿರಸ್ಕಾರಗೊಂಡು ಜೀವಂತಶವವಾಗುತ್ತಾನೆ. ಈಗ ಅವನಿಗಿರುವ ಆಶ್ರಯತಾಣಗಳೆಂದರೆ ರಸ್ತೆಗಳು. ತಮ್ಮ ಮುರುಟಿದ ಕೈಕಾಲುಗಳನ್ನೇ ತೋರಿಸುತ್ತ ದಾರಿಹೋಕರ ಮನಕರಗುವಂತೆ ಭಿಕ್ಷೆ ಬೇಡುವ ಈ ಜನರಿಗೆ ಹೃದಯವಂತರು ನೀಡಿದ ನಾಲ್ಕಾಣೆ ಎಂಟಾಣೆಗಳು ದಿನದ ಹಸಿವನ್ನು ನೀಗುತ್ತವೆ. ಹಣಕೊಟ್ಟರೂ ಹೊಟೆಲಿನವರು ಅವರನ್ನು ಹೊರಗೇ ನಿಲ್ಲಿಸಿ ಕಳಸಲು ಅನ್ನ ನೀಡುತ್ತಾರೆ. ಇದು ನಮ್ಮ ದೇಶದ ಕುಷ್ಠರೋಗಿಗಳ ಹೃದಯ ಹಿಂಡುವ ಕರುಣಾಜನಕ ಕಥೆ.

ಕುಷ್ಠರೋಗ

ದೇಹದ ಯಾವುದೇ ಭಾಗದಲ್ಲಿನ, ಸ್ಪರ್ಶಜ್ಞಾನವಿಲ್ಲದ ಸಣ್ಣ ಭಾಗವನ್ನು ಕುಷ್ಠರೋಗದ ಆರಂಭದ ಲಕ್ಷಣವೆಂದು ತಿಳಿದುಕೊಳ್ಳಬೇಕು, ಕೆಲವರಲ್ಲಿ ದೇಹದ ಚರ್ಮದಲ್ಲಿ ಬಣ್ಣ ಬದಲಾದ ಮಚ್ಚೆಗಳೂ ಕುಷ್ಠದ ಪ್ರಥಮ ಚಿಹ್ನೆಗಳಾಗಿ ತೋರಬಹುದು. ಕೆಂಪೇರಿಕೆ, ನರೋದ್ರೇಕವೂ ಕಂಡು ಬರಬಹುದು. ಮಚ್ಚೆಗಳು ೨ ರಿಂದ ೩ ಸೆಂ.ಮೀ. ಇದ್ದು ದೇಹದ ಯಾವುದೇ ಭಾಗದಲ್ಲಿ ಕಂಡು ಬರಬಹುದು. ಚರ್ಮದ ಬಣ್ಣ ಹಾಗೂ ಸ್ವಲ್ಪಮಟ್ಟಿನ ಸ್ಪರ್ಶಜ್ಞಾನ ಲೋಪವಾಗಿರುವುದನ್ನು ಗಮನಿಸಿ ಇವುಗಳನ್ನು ಪತ್ತೆ ಮಾಡಬಹುದು.

ಕುಷ್ಠರೋಗಿಗಳಲ್ಲಿ ಮೈಕ್ರೋಬ್ಯಾಕ್ಟೀರಿಯಂ ಲೆಪ್ರೇಸೂಕ್ಷ್ಮಾಣುಗಳು ನರವ್ಯೂಹಗಳಲ್ಲಿ ಚರ್ಮದಲ್ಲಿ, ಶ್ವಾಸನಾಳದ ಮೇಲ್ಬದಿಯಲ್ಲಿ, ಮೂಗಿನ ಲೋಳೆ ಪದರದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಸೋಂಕು ತಗುಲಿದ ಎಲ್ಲರಲ್ಲೂ ಕುಷ್ಠರೋಗ ಪ್ರಬಲವಾಗಿ ಬೆಳೆಯುವುದಿಲ್ಲ. ಮೊದಲ ಸೋಂಕು

ತನ್ನಷ್ಟಕ್ಕೇ ಗುಣವಾಗಲೂಬಹುದು. ಇದನ್ನು "ಇಂಡಿಟರ್ಮಿನೇಟ್" ಎನ್ನುತ್ತಾರೆ. ಒಂದು ವೇಳೆ ತನ್ನಿಂದ ತಾನೇ ಗುಣವಾಗದೇ ರೋಗ ಬೆಳೆದರೆ ಅದಕ್ಕೆ "ಡಿಟರ್ಮಿನೇಟ್" ಅನ್ನುತ್ತಾರೆ. ಬೆಳೆದ ರೋಗ ಕುಷ್ಠದ ವಿಧಗಳಾದ ಟುಬರ್ಕ್ಯುಲಾಯ್ಡ್, ಲೆಪ್ರೊಮೆಟಸ್, ಬಾರ್ಡರ್ ಲೈನ್ ಕುಷ್ಠಗಳಾಗಬಹುದು. ಇದು ಆಯಾ ವ್ಯಕ್ತಿಯಲ್ಲಿನ ರೋಗ ನಿರೋಧಕ ಶಕ್ತಿ ಹಾಗೂ ದೇಹ ಪ್ರವೇಶ ಪಡೆದ ರೋಗಾಣುವಿನ ಸಂತಾನಾಭಿವೃದ್ಧಿಯ ಮೇಲೆ ಅವಲಂಬಿಸಿರುತ್ತದೆ.

"ಟ್ಯುಬರ್ಕ್ಯುಲಾಯ್ಡ್"

ಕುಷ್ಠದ ಸೌಮ್ಯಸ್ವರೂಪವಿದಾಗಿದ್ದು ತನ್ನಷ್ಟಕ್ಕೆ ತಾನೆ ಗುಣವಾಗಲೂಬಹುದು. ಇದರ ಮಚ್ಚೆಯಲ್ಲಿ ಸ್ವಲ್ಪ ಸ್ಪರ್ಶಜ್ಞಾನವೂ ಇರಬಹುದು. ಈ ಮಚ್ಚೆಗಳು ತುಂಬ ಕಡಿಮೆ ಸಂಖ್ಯೆಯಲ್ಲಿದ್ದು, ಸಮತಟ್ಟಾದ ಮಧ್ಯ ಭಾಗ ಹೊಂದಿದ್ದು, ಹೆಚ್ಚಾಗಿ ತಿಳಿ ಬಣ್ಣ ಹೊಂದಿರುತ್ತವೆ. ಈ ಮಚ್ಚೆಗಳು ಕಪ್ಪು ಬಣ್ಣದವರಲ್ಲಿ ತಿಳಿ ಬಣ್ಣವನ್ನು ಹೊಂದಿದ್ದರೆ, ಕೆಂಪು ಮೈಯಲ್ಲಿ ತಾಮ್ರದ ಬಣ್ಣ ಹೊಂದಿರುತ್ತವೆ. ಈ ಮಚ್ಚೆಗಳ ಮೇಲಿನ ಭಾಗ ಹೆಚ್ಚಾಗಿ ಹೊಳಪುಳ್ಳದ್ದಾಗಿದ್ದು, ಹೊಟ್ಟು ಎದ್ದಂತೆ ಕಂಡು ಬರುತ್ತದೆ ಇವು ಹೆಚ್ಚಾಗಿ ತೋಳಿನ ಹೊರ ಬದಿಗಳಲ್ಲಿ, ಕಾಲುಗಳಲ್ಲಿ, ಕಂಡುಬರುತ್ತವೆ. ಇದರ ರೋಗಾಣುಗಳು ರೋಗಿಯ ದೇಹದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದು ಪತ್ತೆ ಹಚ್ಚುವುದಕ್ಕೆ ಕಷ್ಟಕರ. ಇವು ಯಾವುದೇ ಹಾನಿಯುಂಟುಮಾಡುವುದಿಲ್ಲ.

"ಲಿಪ್ರೊಮೇಟಿಸ್"

ಕುಷ್ಠ ತೀವ್ರ ಸ್ವರೂಪದ ಕುಷ್ಠರೋಗವಾಗಿದೆ. ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದು ಹೆಚ್ಚು. ಆರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಮಾಡಿಸಿಕೊಳ್ಳದೇ ಇದ್ದಲ್ಲಿ ಇದು ತನ್ನ ಉಗ್ರಸ್ವರೂಪವನ್ನು ತೋರಿಸಿ ರೋಗಿಯನ್ನು ಕಂಗೆಡಿಸುತ್ತದೆ. ಇದರ ರೋಗಾಣುಗಳು ಗುಂಪುಗುಂಪಾಗಿ ದೇಹ ಸೇರಿಕೊಂಡಿರುತ್ತವೆ. ಇವು ರಕ್ತದೊಂದಿಗೆ ಹರಿದು ನರಗಳನ್ನು, ಕಣ್ಣುಗಳನ್ನು, ಮೂಗಿನ ಒಳಭಾಗವನ್ನು, ಶ್ವಾಸನಾಳದ ಮೇಲ್ಪದಿ, ಕೈಕಾಲುಗಳ ಎಲುಬುಗಳನ್ನು ತಲುಪುತ್ತವೆ. ಅಲ್ಲೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯುತ್ತವೆ.

ಇವು ಆರಂಭದಲ್ಲಿ ಮಚ್ಚೆಗಳ ಮೂಲಕ ಕಾಣಿಸಿಕೊಳ್ಳುತ್ತದೆ. ಮಚ್ಚೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಚರ್ಮದ ಬಣ್ಣ ಬದ ಲಾಗಿರುವುದನ್ನು ಸುಲಭವಾಗಿ ಗುರುತಿಸ ಬಹುದು. ಕಾಯಿಲೆ ಹೆಚ್ಚಾದಂತೆ ಚರ್ಮದ ಮೇಲಿನ ಭಾಗದಲ್ಲಿ ಗಡ್ಡೆಗಳೂ ಕಂಡು ಬರುತ್ತವೆ. ಹುಬ್ಬಿನ ಕೂದಲುಗಳು ಬಿದ್ದು ಹೋಗಬಹುದು. ಹುಬ್ಬು ಹಾಗೂ ಕಿವಿಯ ಮೇಲಿನ ಭಾಗ ದಪ್ಪವಾಗಬಹುದು. ನರಗ ಆಲಸ್ಯ ಕಂಡು ಬರುತ್ತದೆ. ಮಚ್ಚೆಗ ಜಾಗದಲ್ಲಿ ಸ್ಪರ್ಶಜ್ಞಾನ ಇಲ್ಲದಿರುವುದ ಹಾಗೂ ಚರ್ಮದ ಬಣ್ಣ ಬದಲಾವ ಗೊಂಡಿರುವುದನ್ನು ಗಮನಿಸಿ ಬೇಗ ಚಿಕಿತ್ ಆರಂಭಿಸಬೇಕು. ಇಲ್ಲದೇ ಹೋದಲ್ಲಿ ಇದ ಹೆಚ್ಚಿನ ತೊಂದರೆಯನ್ನು ಉಂಟುಮಾಡು ತ್ತದೆ.

"ಬಾರ್ಡರ್‌ಲೈನ"

ಕುಷ್ಠವು ಟ್ಯುಬರ್ಕ್ಯುಲಾಯ್ಡ್ ಕುಷ್ಠ ಹಾಗೂ ಲೆಪ್ರೊಮೇಟಸ್ ಕುಷ್ಠಗಳ ಮಧ್ಯದ ಲಕ್ಷಣಗಳನ್ನು ತೋರುತ್ತದೆ. ಬಾರ್ಡರ್‌ಲೈನ್ ಕುಷ್ಠರೋಗದಲ್ಲಿ ಕೆಲವು ರೋಗಿಗಳು ಟ್ಯುಬರ್ಕ್ಯುಲಾಯ್ಡ್‌ದ ರೋಗ ಲಕ್ಷಣ ತೋರಿದರೆ ಇನ್ನೂ ಕೆಲವರು ಲೆಪ್ರೊಮೇಟಸ್‌ಗೆ ಸಮೀಪದ ರೋಗ ಲಕ್ಷಣಗಳನ್ನು ತೋರುತ್ತಾರೆ. ವ್ಯಕ್ತಿಯಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಗಿದ್ದರೆ ಇದು ಸೌಮ್ಯ ಸ್ವರೂಪದ್ದಾಗಬಹುದು. ಒಂದು ವೇಳೆ ರೋಗ ನಿರೋಧಕ ಶಕ್ತಿ ಸೋತು ಹೋದರೆ ತೀವ್ರ ಸ್ವರೂಪದ ಲೆಪ್ರೊಮೇಟಸ್ ಕುಷ್ಠವಾಗಿ ಹೊರಹೊಮ್ಮಬಹುದು.

ಮೂಢ ನಂಬಿಕೆ

ಕುಷ್ಠರೋಗವು ವ್ಯಕ್ತಿಯ ಪೂರ್ವ ಜನ್ಮದ ಪಾಪದ ಫಲವಾಗಿ ದೊರೆತ ಬಳುವಳಿ ಎಂಬ ನಂಬಿಕೆ ಇದೆ. ಆದರೆ ಇದು ಶುದ್ಧ ತಪ್ಪು ಕಲ್ಪನೆಯಾಗಿದ್ದು, ಒಂದು ಮೂಢ ನಂಬಿಕೆಯೇ ಆಗಿದೆ. ಮಾನವನನ್ನು ಕಾಡುವ ಅನೇಕ ರೋಗಗಳಂತೆ ಕುಷ್ಠರೋಗವೂ ಒಂದು ಸಾಮಾನ್ಯ ರೋಗವಾಗಿದ್ದು, ಆರಂಭದಲ್ಲೇ ಚಿಕಿತ್ಸೆ ಪಡೆದರೆ ಅದು ಗುಣಮುಖವಾಗುವ ಸರಳ ರೋಗವೂ ಆಗಿದೆ. ಮೇಲಾಗಿ ಇದು ಅಷ್ಟೊಂದು ಭಯಾನಕವೂ ಅಲ್ಲ. ಇದು ಸುಲಭದಲ್ಲೇ ಚಿಕಿತ್ಸೆಗೆ ಬಗ್ಗುವಂಥದ್ದು. ಆರಂಭದಲ್ಲೇ ಚಿಕಿತ್ಸೆಗೊಳಪಟ್ಟರೆ ಯಾವುದೇ ರೀತಿಯ ಹೆಚ್ಚಿನ ನಷ್ಟ ಉಂಟಾಗುವುದಿಲ್ಲ. ವ್ಯಕ್ತಿ ಕಣ್ಣನ್ನಾಗಲಿ ಇನ್ನಿತರ ಅಂಗಗಳನ್ನಾಗಲಿ ಕಳೆದುಕೊಳ್ಳಲಾರ.

ಇನ್ನೊಂದು ಮುಖ್ಯ ಅಂಶವೆಂದರೆ ಅದು ತೀವ್ರವಾದ ಸಾಂಕ್ರಾಮಿಕ ರೋಗವಲ್ಲ. ಕುಷ್ಠರೋಗಿಗಳೊಂದಿಗೆ ಅತಿ ಸಮೀಪದ ಸಹವಾಸ ಇಟ್ಟುಕೊಂಡರೂ ಸಹ ಶೇಕಡಾ ೯೦ ರಷ್ಟು ಜನರಿಗೆ ಇದರ ಸೋಂಕು ತಗುಲುವುದಿಲ್ಲ. ಉಳಿದ ಶೇಕಡಾ ೧೦ ಜನರಲ್ಲಿ ಮಾತ್ರ ಇದು ತೋರಬಹುದು. ಇದರಲ್ಲೂ ಹೆಚ್ಚಾಗಿ ಸೌಮ್ಯಸ್ವರೂಪದ ಕುಷ್ಠವೇ ಆಗಿರುತ್ತದೆ. ಶೇಕಡಾ ೫ ರಷ್ಟು ಜನರು ಮಾತ್ರ ತೀವ್ರ ಸ್ವರೂಪದ ಕುಷ್ಠದಿಂದ ಬಳಲಬಹುದು. ಅದರಲ್ಲೂ ವ್ಯಕ್ತಿಯ ಮೇಲೆ ಕುಷ್ಠರೋಗದ ಪ್ರಭಾವ ಆ ವ್ಯಕ್ತಿಯ ರೋಗನಿರೋಧಕ ಶಕ್ತಿಯನ್ನೂ ಅವಲಂಬಿಸಿರುತ್ತದೆ. ಕುಷ್ಠದ ರೋಗಾಣುಗಳು ವ್ಯಕ್ತಿಯ ದೇಹವನ್ನು ಪ್ರವೇಶಿಸಿದರೂ ಅವನಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿದ್ದಲ್ಲಿ ರೋಗಾಣುಗಳು ರೋಗ ತಾರದೇ ಸಾಯಲೂಬಹುದು. ಕಾರಣ ಕುಷ್ಠರೋಗಿಯನ್ನು ತಿರಸ್ಕಾರದಿಂದ ನೋಡಬಾರದು.

ಕುಷ್ಠರೋಗಿಯಿಂದ ಮಾರು ದೂರ ಜಗಿಯುವ ಪ್ರವೃತ್ತಿ ಇಂದಿಗೂ ನಮ್ಮಲ್ಲಿದೆ. ಇದಕ್ಕೆ ಕಾರಣ ಕುಷ್ಠರೋಗದ ಬಗೆಗೆ ನಮ್ಮ ದೇಶದ ಜನರಿಗೆ ಇರುವ ಅಜ್ಞಾನ, ತಪ್ಪು ತಿಳುವಳಿಕೆ, ಮೂಢ ನಂಬಿಕೆಗಳೇ ಕಾರಣ. ಇಂದಿನಕ್ಕಿಂತಲೂ ಹಿಂದೆ ಕುಷ್ಠರೋಗಿಗಳ ಬದುಕು ತುಂಬ ಕಷ್ಟಮಯವಾಗಿತ್ತು. ಜನರು ಮನೆಯಿಂದ ಕುಷ್ಠರೋಗಿಗಳನ್ನು ಹೊರಹಾಕುತ್ತಿದ್ದರು. ಆದರೆ ಚಿಕಿತ್ಸೆಯನ್ನು ಕಂಡು ಹಿಡಿದಿರುವ, ಔಷಧಿಗೆ ಸುಲಭವಾಗಿ ನಿವಾರಣೆಯಾಗುವ ಇಂದಿನ ಕಾಲದಲ್ಲೂ ನಮ್ಮ ಸಾಮಾಜಿಕ ಸ್ಥಿತಿ ಈಗಲೂ ಹಾಗೆಯೇ ಇರುವುದು

ಶೋಚನೀಯ ಸಂಗತಿಯೇ ಆಗಿದೆ. ಅತ್ಯಂತ ವೇಗವಾಗಿ ಹಬ್ಬುವ ಹಾಗೂ ವ್ಯಕ್ತಿಯನ್ನು ತೀವ್ರವಾಗಿ ಸಾಯಿಸುವ ಪ್ಲೇಗ್, ಕಾಲರಾ. ರೋಗಿಗಳನ್ನು ನಮ್ಮವರು ಮನೆಯಲ್ಲಿಟ್ಟುಕೊಳ್ಳುತ್ತಾರೆ. ಅವರ ಸೇವೆ ಮಾಡುತ್ತಾರೆ. ಆದರೆ ನಿಧಾನವಾಗಿ ಹರಡುವ ಹಾಗೂ ನಿಧಾನವಾಗಿ ರೋಗಿಗೆ ತೊಂದರೆ ಉಂಟು ಮಾಡುವ ಕುಷ್ಠಕ್ಕೆ ಹೆದರುತ್ತಾರೆ. ಈ ಭಯ ಈಗಲೂ ಕೇವಲ ಅನಕ್ಷರಸ್ಥರಲ್ಲಿ ಮಾತ್ರ ಅಲ್ಲ. ವಿದ್ಯಾವಂತರಲ್ಲೂ ಕುಷ್ಠದ ಬಗೆಗೆ ತುಂಬ ಭಯವಿದೆ. ಅಷ್ಟೇ ಏಕೆ ಕೆಲವು ವೈದ್ಯರೂ ಕೂಡ ಕುಷ್ಠರೋಗಿಗಳನ್ನು ತಾತ್ಸಾರದಿಂದಲೇ, ಭಯದಿಂದಲೇ ಪರೀಕ್ಷಿಸುತ್ತಾರೆ.

ಕುಷ್ಠರೋಗದ ಬಗೆಗಿನ ಮೂಢನಂಬಿಕೆ ನಮ್ಮಲ್ಲಿ ಎಷ್ಟೊಂದು ಬಲಾಢ್ಯವಾಗಿತ್ತೆಂದರೆ ಒಂದು ಶತಮಾನದ ಹಿಂದೆ ಕುಷ್ಠರೋಗಿಗಳನ್ನು ನಿಯಂತ್ರಿಸಲು ಕಾನೂನನ್ನೇ ಮಾಡಲಾಗಿತ್ತು. ಕ್ರಿ.ಶ. ೧೮೯೮ರ ಲೆಪರ್ಸ್ ಆ್ಯಕ್ಟ್ ಪ್ರಕಾರ ಕುಷ್ಠರೋಗಿ ಇತರರೊಂದಿಗೆ ಮುಕ್ತವಾಗಿ ಬೆರೆಯುವಂತಿರಲಿಲ್ಲ. ಶಾಲೆಗೆ ಹೋಗುವುದಾಗಲಿ, ನೌಕರಿಯಲ್ಲಿ ಮುಂದುವರೆಯುವುದಾಗಲಿ ಸಾಧ್ಯವಿರಲಿಲ್ಲ. ೧೯೩೮ರ ಇನ್ನೊಂದು ಕಾನೂನು ಕುಷ್ಠರೋಗಿ ಸಾರ್ವಜನಿಕ ಸ್ಥಳಗಳಲ್ಲಿ ಸ್ನಾನಮಾಡುವುದು, ಸಾರ್ವಜನಿಕರೊಂದಿಗೆ ಬೆರೆಯುವುದು, ಸಾರ್ವಜನಿಕ ಸ್ಥಳಗಳಲ್ಲಿನ ಸೌಲಭ್ಯಗಳನ್ನು ಉಪಯೋಗಿಸುವುದು ಕಾನೂನಿನ ದೃಷ್ಟಿಯಲ್ಲಿ ಅಪರಾಧವಾಗಿತ್ತು. ಆದರೆ ೧೯೮೩ರಲ್ಲಿ ಜಾರಿಗೆ ಬಂದ ಹೊಸ ಕಾನೂನು ಕುಷ್ಠ ಪೀಡಿತರ ಮೇಲೆ ಹಾಕಿದ್ದ ಎಲ್ಲ ನಿರ್ಬಂಧಗಳನ್ನು ಕಿತ್ತು ಹಾಕಿದೆ. ಈಗ ಕುಷ್ಠರೋಗಿಗಳು ಇತರರಂತೆಯೇ ಸಾರ್ವಜನಿಕ ಸ್ಥಳ, ವಸ್ತುಗಳನ್ನು ಉಪಯೋಗಿಸಬಹುದು. ಶಾಲೆಗೆ ಹೋಗಬಹುದು, ನೌಕರಿ ಮಾಡಬಹುದು. ನೌಕರರಿಗಾಗಿ ಕುಷ್ಠಮುಕ್ತರಿಗೆ ಸರಕಾರಿ ಉದ್ಯೋಗಾವಕಾಶಗಳಲ್ಲಿ ವಿದ್ಯಾರ್ಹತೆ ಹಾಗೂ ವಯೋಮಿತಿಯಲ್ಲಿ ಸಡಿಲಿಕೆಯಿದೆ.

ಚಿಕಿತ್ಸೆ

ಕುಷ್ಠರೋಗದ ಅಣುಗಳನ್ನು ಮೊಟ್ಟಮೊದಲು ವಿಜ್ಞಾನಿ ಡಾ|| ಹ್ಯಾನ್‌ಸನ್ಸ್ ೧೮೭೩ರಲ್ಲಿ ಕಂಡುಹಿಡಿದರು. ಮುಂದೆ ೧೯೫೩ರಲ್ಲಿ ಡಾ|| ರಾಬರ್ಟ್ ಕಾಕ್‌ರೈನ್ ಮತ್ತು ಡಾ|| ದರ್ಮೇಂದ್ರ ಇವರು ಜಂಟಿಯಾಗಿ ಚೆಂಗಲ್‌ಪೇಟೆ ಲೆಪ್ರಸಿ ಹಾಸ್ಪಿಟಲ್ ಮದ್ರಾಸಿನಲ್ಲಿ ಕಾರ್ಯನಿರ್ವಹಿಸಿ ಕುಷ್ಠರೋಗದ ಮೊದಲ ಔಷಧಿ ಡಿ.ಡಿ.ಎಸ್. ಅನ್ನು ಕಂಡುಹಿಡಿದರು. ೧೯೫೫ರಲ್ಲಿ ಡಾ|| ಪೌಲ್‌ಬ್ರ್ಯಾಂಡ್ ವೆಲ್ಲೂರಿನಲ್ಲಿ ಕುಷ್ಠರೋಗದಿಂದುಂಟಾಗುವ ಅಂಗವೈಕಲ್ಯವನ್ನು ಸರಿಪಡಿಸುವ ಶಸ್ತ್ರ ಚಿಕಿತ್ಸೆಯನ್ನು ಕಂಡುಹಿಡಿದರು. ಮುಖದ ಕುರೂಪವನ್ನು ಮುಚ್ಚುವ ಶಸ್ತ್ರ ಚಿಕಿತ್ಸೆಯನ್ನು ಮೊಟ್ಟಮೊದಲು ಡಾ|| ಎನ್. ಹೆಚ್. ಆಂಟಿಯಾ ಅವರು ೧೯೫೮ರಲ್ಲಿ ಮುಂಬಯಿಯಲ್ಲಿ ಮಾಡಿದರು. ಭಾರತದಲ್ಲಿ ಕುಷ್ಠರೋಗಿಗಳಿಗಾಗಿ ಸೇವೆಮಾಡಲು ಪ್ರಥಮವಾಗಿ ಮುಂದೆ ಬಂದ ಸಂಸ್ಥೆ “ಮಿಶನ್ ಟು ಲೆಪರ್ಸ್” ಈಗ ಅದನ್ನು ಲೆಪ್ರಸಿಮಿಶನ್ ಎಂದು ಕರೆಯಲಾಗುತ್ತಿದೆ.

ಈಗ ಕುಷ್ಠರೋಗದ ಚಿಕಿತ್ಸೆ ಭಯಾನಕವಾದುದೇನೂ ಅಲ್ಲ. ಇದಕ್ಕೆ ಈಗ ಲಭ್ಯ

ವಿರುವ ಬಹುವಿಧ ಔಷಧಿ ಅತ್ಯಂತ ಪರಿಣಾಮಕಾರಿ ಎನ್ನಲಾಗಿದೆ. ಡಿ.ಡಿ.ಎಸ್. ರಿಫಾಂಪಿಸಿನ್, ಕ್ಲೋರೋಫ್ರೊಪಸಿನ್ ಮೊದಲಾದ ಔಷಧಿಗಳು ಈಗ ಲಭ್ಯವಿದ್ದು, ವೈದ್ಯರ ಸಲಹೆಯ ಮೇರೆಗೆ ಇವುಗಳನ್ನು ಸೇವಿಸುತ್ತ ಬಂದರೆ ಒಂದೆರಡು ವರ್ಷಗಳಲ್ಲಿ ತೀವ್ರಸ್ವರೂಪದ ಕುಷ್ಠವೂ ಸೌಮ್ಯಗೊಳ್ಳುತ್ತದೆ. ಬಹುವಿಧ ಔಷಧಿ ೧೯೮೩ ರಿಂದಲೂ ಕುಷ್ಠ ಚಿಕಿತ್ಸೆಗಾಗಿ ಬಳಕೆಯಾಗುತ್ತಲಿದೆ. ೧೯೯೪ ರ ಡಿಸೆಂಬರ್ ೩೦ ರಂದು ರಾಷ್ಟ್ರಪತಿಗಳು ಒಂದು ಆದೇಶ ನೀಡಿ "ಬಹವಿಧ ಔಷಧಿ ದೇಶದ ಪ್ರತಿಯೊಂದೂ ಜಿಲ್ಲೆಗೂ ಲಭ್ಯವಾಗುವಂತೆ ಕಡ್ಡಾಯವಾಗಿ ನೀಡಬೇಕೆಂದು" ಸೂಚಿಸಿದ್ದಾರೆ. ಈ ಔಷಧಿಗಳು ರೋಗಿಗಳಿಗೆ ಸರಕಾರದಿಂದ ಉಚಿತವಾಗಿ ದೊರೆಯುತ್ತವೆ.

ಕುಷ್ಠರೋಗದಿಂದ ಮುಕ್ತವಾಗುವ ಸುಲಭ ಸೂತ್ರವೆಂದರೆ ಅದು ಕಂಡು ಬಂದ ತಕ್ಷಣ ಚಿಕಿತ್ಸೆ ಆರಂಭಿಸಬೇಕು ಇಲ್ಲದೆ ಹೋದರೆ ಅದು ಶಾಶ್ವತ ಅಂಗವಿಕಲತೆಯನ್ನು ಉಂಟುಮಾಡುವ ಶಕ್ತಿಯನ್ನು ಹೊಂದಿದೆ.

ಕ್ರಿ.ಶ. ೨೦೦೦ ದ ಹೊತ್ತಿಗೆ ಕುಷ್ಠ ನಿರ್ಮೂಲನಾ ಕಾರ್ಯವನ್ನು ಪೂರ್ಣಗೊಳಿಸಬೇಕೆನ್ನುವುದು ಭಾರತ ಸರಕಾರದ ಆಶಯವಾಗಿದೆ. ಆದರೆ ಇದು ಅಷ್ಟೊಂದು ಸುಲಭವಲ್ಲ ಅನಿಸುತ್ತಲಿದೆ. ಏಕೆಂದರೆ ಇದರ ಬಗೆಗೆ ನಮ್ಮ ಜನರಲ್ಲಿ ಇನ್ನೂ ಭಯಾನಕ ವಾತಾವರಣವೆ ತುಂಬಿದೆ. ಎಲ್ಲಿಯವರೆಗೆ ಜನರಲ್ಲಿ ಕುಷ್ಠದ ಬಗೆಗಿನ ಮೂಢನಂಬಿಕೆ, ಅಜ್ಞಾನ, ಮಾಯವಾಗುವುದಿಲ್ಲವೋ ಅಲ್ಲಿಯವರೆಗೆ ಕುಷ್ಠ ನಿರ್ಮೂಲನ ಅಸಾಧ್ಯ ಎನ್ನಲೇಬೇಕಾಗಿದೆ. ಮೇಲಾಗಿ ಕುಷ್ಠರೋಗ ಬರದಂತೆ ತಡೆಯುವ ಲಸಿಕೆ ಇನ್ನೂ ಲಭ್ಯವಾಗಿಲ್ಲ. ಸಿಡುಬನ್ನು ವಿಶ್ವದಿಂದಲೇ ನಿರ್ಮೂಲನ ಮಾಡುವಲ್ಲಿ ಸಿಡುಬಿನ ಲಸಿಕೆ ಮಹತ್ವದ ಪಾತ್ರವಹಿಸಿದ್ದು, ಇಲ್ಲಿ ಸ್ಮರಣೀಯ. ೨೦೦೦ ಇಸ್ವಿಗೆ ಈಗ ಉಳಿದಿರುವ ಅವಧಿ ಕೇವಲ ನಾಲ್ಕು ವರ್ಷ. ಶತಮಾನದುದ್ದಕ್ಕೂ ಆಗದ ಈ ಕೆಲಸ ಇನ್ನು ಕೇವಲ ನಾಲ್ಕೇ ವರ್ಷಗಳಲ್ಲಾಗುತ್ತದೆ ಎಂದು ಭಾವಿಸುವುದು ಮರೀಚಿಕೆಯಾದೀತು. ಆದರೂ ಘನಸರಕಾರದ ಈ ಆಶಯಕ್ಕೆ ಬದ್ಧರಾಗಿ ಬುದ್ಧಿವಂತರು, ವಿಚಾರವಂತರು, ಸಮಾಜ ಸುಧಾರಕರು, ನಾಡಿನ ನಾಯಕರು ದುಡಿಯಲಾರಂಭಿಸಿ, ಜನರಲ್ಲಿದ್ದ ಕುಷ್ಠದ ಬಗೆಗಿನ ಮೂಢನಂಬಿಕೆಯನ್ನು ಹೋಗಲಾಡಿಸಲು ಪ್ರಯತ್ನಿಸಿದರೆ ಈ ಕಾರ್ಯ ಕಷ್ಟ ಅನಿಸಲಾರದು. ಕುಷ್ಠರೋಗಿಗಳಿಗೆ ಮಾನವತ್ವ ನೀಡಲು ಶ್ರಮಿಸಿದ ಹಾಗೂ ಶ್ರಮಿಸುತ್ತಿರುವ ಗಾಂಧೀಜಿ, ಮದರ್ ಥೆರೇಸಾ, ಬಾಬಾ ಆಮ್ಟೆಯಂಥಹ ಮಹಾಮಾನವರಿಂದ ಪಾಠಕಲಿತು ಸರ್ವರೂ ಕುಷ್ಠದ ನಿರ್ಮೂಲನಕ್ಕಾಗಿ ಟೊಂಕಕಟ್ಟಿದರೆ ೨೦೦೦ದ ಹೊತ್ತಿಗೆ ದೇಶವನ್ನು ಕುಷ್ಠಮುಕ್ತವಾಗಿಸಬಹುದಾಗಿದೆ.

ಎರಡು ಹೆಣ್ಣು ಒಂದು ಗಂಡು

ಲೇ: ವಿಮಲ್ ಮಿತ್ರ ಅನು: ಡಿ. ಎನ್. ಶ್ರೀನಾಥ್

(ಮುಂದುವರಿದುದು)

"ಈ ಹುಡುಗಿ ಖಂಡಿತವಾಗಿಯೂ ದುರುದ್ದೇಶದಿಂದ ಇಲ್ಲಿಗೆ ಬಂದಿದ್ದಾಳೆ."

"ಇಲ್ಲಿಂದ ಇವಳನ್ನು ಓಡಿಸಿದರೇ ಸರಿಯಾಗುತ್ತೆ" ಒಬ್ಬೊಬ್ಬರು ಒಂದೊಂದು ಮಾತು ಹೇಳಿದರು. ನನಗೂ ರೇಗುತ್ತಿತ್ತು. ಈ ಹುಡುಗಿ ಅಟಲ್‌ದಾರವರ ಜೀವನವನ್ನೇ ಹಾಳುಮಾಡಲು ಬಂದಿರುವಂತಿದೆ. ಇಷ್ಟು ಕುರೂಪಿಯಾದವಳು ಅಟಲ್‌ದಾರವರ ಹೆಂಡತಿಯಾಗಲಾರಳು. ಇವಳನ್ನು ನೋಡಿದರೇ ಜಿಗುಪ್ಸೆಹುಟ್ಟುತ್ತಿದೆ....

ಆಗಲೇ ಹುವನದೆದುರು ರೇಶ್ಮೆ ಸೀರೆ ಧರಿಸಿ ನಿಂತಿದ್ದ ನವ ವಧುವಿನ ಮುಖ ಕಂಡಿತು. ಅವಳೆಲ್ಲಿ, ಇವಳೆಲ್ಲಿ?

ಗುಂಪಿನಲ್ಲಿ ಪಿಸು ಪಿಸು ಮಾತು ಪ್ರಾರಂಭವಾಯಿತು. ಕಡೆಗೆ ಜನ ಬಾಯಿಗೆ ಬಂದಂತೆ ಮಾತನಾಡಲಾರಂಭಿಸಿದರು—

"ಇವಳು ಒಂದನೇ ನಂಬರ್ ಬದ್ಮಾಶ್ ....ಇವಳಿಗೆ ಇನ್ನ್ಯಾರೂ ಸಿಗಲಿಲ್ವಾ?"

"ಹೊಡೆದೋಡಿಸಿ, ಇವಳನ್ನು!"

"ಪೋಲೀಸರಿಗೆ ಫೋನ್ ಮಾಡಿ"

ವಧುವಿನ ತಂದೆ ಅವಮಾನವನ್ನು ಸಹಿಸುವವರಾಗಿರಲಿಲ್ಲ. ಅವರು ಮತ್ತೆ ಆಶುಬಾಬುಗಳ ಭುಜ ಹಿಡಿದು ಕೇಳಿದರು, "ಬೀಗರೇ, ಏನ್ ಮಾಡೋದು, ಹೇಳಿ?"

"ನೀವು ಸ್ವಲ್ಪ ತಾಳಿ, ನಾನು ಇನ್ನೊಂದು ಸಲ ಹುಡುಗಿಗೆ ತಿಳುವಳಿಕೆ ಹೇಳಿ ನೋಡ್ತೀನಿ" ಎಂದರು ಆಶು ಬಾಬು.

ಅನ್ಯಮನಸ್ಕಳಾಗಿ ನಿಂತಿದ್ದ ಹುಡುಗಿಯ ಬಳಿ ಬಂದು ಆಶುಬಾಬುಗಳು ಮತ್ತೆ ಹೇಳಿದರು, "ನೋಡಮ್ಮ, ನಾನು ಅಟಲ್ ದಾನ ತಂದೆ. ನಿನ್ನ ಮಾತುಗಳನ್ನೆಲ್ಲಾ ನಾನು ನಾಳೆ ಖಂಡಿತಾ ಕೇಳ್ತೀನಿ. ಈಗ ನೀನಿಲ್ಲಿಂದ ಹೋಗು. ಈಗಿಲ್ಲಿ ಗಲಾಟೆ ಮಾಡೋದರಿಂದ ಏನೂ ಪ್ರಯೋಜನವಿಲ್ಲ."

"ಈ ಮದುವೆ ನಡೆಯೋದಕ್ಕೆ ನಾನು ಬಿಡಲ್ಲ" ಹುಡುಗಿ ಮತ್ತೆ ಹಟ ಹಿಡಿದಳು.

"ಆದರೆ ತಾಳಿ ಕಟ್ಟಿಯಾಗಿದೆ" ಆಶುಬಾಬುಗಳು ಬೆವರೊರೆಸಿಕೊಂಡರು.

"ಇಲ್ಲ, ಈ ಮದುವೆಯಾಗಿಲ್ಲ"

"ನೀನು ಹೇಳಿಬಿಟ್ಟರೆ ಆಯ್ತಾ? ನಡಿ ಇಲ್ಲಿಂದ!" ಯಾರೋ ವ್ಯಂಗ್ಯ ಬಾಣ ಬಿಟ್ಟರು.

"ಇಲ್ಲ, ನಾನು ಹೋಗಲ್ಲ. ಇದೇ ವರನೊಂದಿಗೆ ಒಂದು ಸಲ ನನ್ನ ಮದುವೆಯಾಗಿದೆ!"

"ಯಾವಾಗ ಆಯ್ತು" ಆಶುಬಾಬುಗಳು ಉತ್ತೇಜಿತರಾದರು.

"ನಿಮಗೆ ಸಾಕ್ಷಿ ಬೇಕಾ?" ಹುಡುಗಿಯೂ ಧೈರ್ಯ ಕಳೆದುಕೊಂಡಿದ್ದಳು.

"ಸಾಕ್ಷಿ ತೋರಿಸಿದರೆ ನಾನು ನಂಬ್ತೀನಿ ಅಂತ ತಿಳ್ಕೊಂಡಿದ್ದೀಯಾ? ನೀನು ಯಾರ ಮಗಳು? ಎಲ್ಲಿಯವಳು?" ಆಶುಬಾಬುಗಳು ಸ್ವಲ್ಪ ಧೈರ್ಯ ವಹಿಸಿದರು.

"ನೀವು ಅವಕಾಶ ಕೊಟ್ಟರೆ, ನಾನೆಲ್ಲವನ್ನು ಹೇಳಲು ಸಿದ್ಧ"

"ಆದ್ರೆ ನಮಗೀಗ ಪುರುಸೊತ್ತಿಲ್ಲ. ಬೀಗರಿಗೆ ಊಟವೂ ಆಗಿಲ್ಲ"

"ಎಲ್ಲಾ ಇವತ್ತೇ ನಿರ್ಧಾರವಾಗಬೇಕು. ನಾಳೆ ವಿಷಯ ನನಗೊತ್ತಿಲ್ಲ"

"ಸರಿ. ಹೇಳು, ನಿನ್ನ ತಂದೆಯ ಹೆಸರೇನು? ನಿನ್ನ ಗೋತ್ರ ಯಾವುದು?"

"ನೋಡಿ, ನನಗೆ ಗೋತ್ರ-ಗೀತ್ರ ಒಂದೂ ಗೊತ್ತಿಲ್ಲ. ಗೊತ್ತಾಗೋದೂ ಬೇಡ. ನಮ್ಮಿಬ್ಬರ ಮದುವೆಯಾಗಿರುವುದಷ್ಟೇ ನನಗೊತ್ತು. ನಾನು ತುಂಬಾ ದೂರದಿಂದ ಬಂದಿರುವೆ. ಸದ್ಯ, ಕಡೇ ಗಳಿಗೆಗೆ ನನಗೆ ವಿಷಯ ತಿಳೀತು. ನಾನೂ ಏನೂ ತಿಂದಿಲ್ಲ."

"ಹಾಗಾದ್ರೆ, ಈಗೇನು ಮಾಡ್ತೀಯಾ?"

"ನಾನಿಲ್ಲಿಂದ ಅವರನ್ನು ಎತ್ತಿಕೊಂಡು ಹೋಗ್ತೀನಿ."

"ನಿನಗಿಷ್ಟು ಧೈರ್ಯವೇ! "ಆಶು ಬಾಬುಗಳಿಗೆ ಸಿಟ್ಟನ್ನು ತಡೆದುಕೊಳ್ಳಲಾಗಲಿಲ್ಲ. ವಧುವಿನ ತಂದೆಯೂ ರೇಗಿದರು.

"ಪೋಲೀಸರನ್ನ ಕರೆಸಿ. ಅಲ್ಲ, ಈ ಹುಡುಗಿಯ ಧೈರ್ಯ ನೋಡಿ ಎಷ್ಟಿದೆ!" ಯಾರೋ ಕೂಗಾಡಿದರು.

ಆದರೆ, ಅಷ್ಟರಲ್ಲಿ ಆ ಹುಡುಗಿ ಮುಂದೆ ಬಂದು ಅಟಲ್ ದಾರವರ ಕೈ ಹಿಡಿದುಕೊಂಡು ಹೇಳಿದಳು, "ನೀವು ಏಳಿ, ಇಲ್ಲಿಂದ ನಡೀರಿ" ಅಟಲ್ ದಾ ಮಾತ್ರ ಈ ಹಿಂದಿನಂತೆಯೇ ತಲೆ ತಗ್ಗಿಸಿಕೊಂಡು ಕೂತಿದ್ದರು. ಮೇಲೇಳುವ ಧೈರ್ಯ ಅವರಲ್ಲಿರಲಿಲ್ಲ. ಈಗ ಹುಡುಗಿ ಅವರ ಕೈ ಹಿಡಿದು ಎಳೆಯಲಾರಂಭಿಸಿದಳು.

"ಏಳಿ! ನಡೀರಿ! ನಡೀರಿ, ನನ್ನ ಜೊತೆ! ನೀವು ನನಗೆ ಮದುವೆ ವಿಷಯ ತಿಳಿಸಲೇ ಇಲ್ಲವಲ್ಲ! ನನಗೇನೂ ಗೊತ್ತಾಗಲ್ಲ ಅಂತ ತಿಳ್ಕೊಂಡಿದ್ದಿರಾ? ಸದ್ಯ, ಸರಿಯಾದ ಸಮಯಕ್ಕೆ ನನಗೆ ವಿಷಯ ತಿಳೀತು. ನೀವು ಇವತ್ತು ನನ್ನ ಸರ್ವನಾಶ ಮಾಡಲು ಹೊರಟಿದ್ದೀರ?"

ಎಲ್ಲರೂ ನಿಬ್ಬೆರಗಾಗಿ ಈ ದೃಶ್ಯವನ್ನು ನೋಡುತ್ತಿದ್ದೆವು. ವಾಸ್ತವವಾಗಿಯೂ, ಅಟಲ್ ದಾ ಈ ಕುರೂಪಿ ಹೆಣ್ಣನ್ನು ಮದುವೆಯಾಗಿದ್ದಾರೆಯೇ? ಈ ಮಾತು ನಿಜವಾಗಿದ್ದರೆ, ಇಂಥಾ ಹೆಣ್ಣನ್ನು ಅವರು ಯಾವ ಕಾರಣಗಳಿಂದ ಮದುವೆಯಾದರು? ಹೀಗೆ ಇವರು ಎಲ್ಲರ ಮುಖಕ್ಕೆ ಮಸಿ ಬಳಿದಿದ್ದಾದರೂ ಯಾಕೆ?

ಆಗಲೇ ವಧುವಿನ ತಂದೆ ಮತ್ತೆ ಗೂರ್ಖಾನನ್ನು ಕೂಗಿದರು—"ಬಹಾದ್ದೂರ್!"

ನಿಶ್ಚಿತ ದಿನಾಂಕವನ್ನು ಹೇಳಲಾರೆ. ಆದರೆ ಅಟಲ್ ದಾರವರ ವಿವಾಹವೆಂದು ರಾತ್ರಿ ನಾವೆಲ್ಲಾ ನಾಚಿ ನೀರಾದದ್ದು ಮಾತ್ರ ನಮಗೆ ನೆನಪಿದೆ. ಅಟಲ್ ದಾ ಹೀಗೇಕೆ ಮಾಡಿಬಿಟ್ಟರು? ಹೀಗೆ ತಮ್ಮನ್ನು

ತಾವು ಸಣ್ಣವರನ್ನಾಗಿ ಮಾಡಿಕೊಳ್ಳುವುದೇ! ಅಲ್ಲದೆ, ನನಗೂ ಅವಮಾನ ಮಾಡಿದಂತಾಯಿತು!

ಆ ಘಟನೆ ನಡೆದು ಅನೇಕ ವರ್ಷಗಳಾದ ಮೇಲೆ ಅಟಲ್ ದಾರವರ ಭೇಟಿಯಾಗಿತ್ತು. ನಾಚಿಕೆಯಿಂದಾಗಿ, ಅದೆಷ್ಟೋ ಹೊತ್ತು ನಾನು ಮಾತನಾಡದಿದ್ದದ್ದು ನನಗಿನ್ನೂ ನೆನಪಿದೆ.

ಘಾಟಶಿಲೆಗೆ, ಸಭೆಯೊಂದಕ್ಕೆ ನಾನು ಅಧ್ಯಕ್ಷನಾಗಿ ಹೋಗಿದ್ದೆ. ೧೯೪೩ನೇ ಇಸವಿ ಇರಬೇಕು. ದೇಶದಲ್ಲಿ ಎಲ್ಲೆಲ್ಲೂ ಕ್ಷಾಮ ವುಂಟಾಗಿತ್ತು. ಕಲ್ಕತ್ತೆಯಲ್ಲಿ ಬಾಂಬು ಧಾಳಿ ನಡೆಯುತ್ತಿತ್ತು. ಕಲ್ಕತ್ತಾ ನಿವಾಸಿಗಳು ಅನಾಶ್ರಿತರಾಗಿ, ಎಲ್ಲೆಲ್ಲಿಗೋ ಹೋಗಿ ತಮ್ಮ ಜೀವವುಳಿಸಿಕೊಳ್ಳುತ್ತಿದ್ದರು. ಆದರೆ ಆಗಲೂ ಸಭೆ-ಸಮಾರಂಭಗಳು ನಡೆಯುತ್ತಿದ್ದವು. ಕೆಲವು ವಿದ್ಯಾರ್ಥಿಗಳ ಒತ್ತಾಯಕ್ಕೆ ಮಣಿದು ನಾನು ಘಾಟಶಿಲೆಯ ಶಾಲೆಯ ಸಮಾರಂಭವೊಂದರಲ್ಲಿ ಭಾಗವಹಿಸಲೇಬೇಕಾಯಿತು.

ಸಭೆಯ ಕಾರ್ಯಕಲಾಪಗಳನ್ನೆಲ್ಲಾ ನಾನು ನಿಯಮಪೂರ್ವಕವಾಗಿ ನೆರವೇರಿಸಿದೆ. ಸಭೆಯ ಕಾರ್ಯಕಲಾಪಗಳೆಲ್ಲವೂ ಸುಗಮವಾಗಿಯೇ ನೆರವೇರಿದವು. ಆದರೆ, ಅಲ್ಲಿಂದ ಮರಳಿ ಬರುವಾಗ ಒಂದು ಘಟನೆ ಜರುಗಿತು.

ಶಾಲೆಯ ಹಿರಿಯ ಉಪಾಧ್ಯಾಯರಾಗಿದ್ದ ಅಕ್ಷಯ ಬಾಬುಗಳು ನನ್ನ ಬಳಿ ಬಂದು ಹೇಳಿದರು, "ನಮ್ಮ ಮುಖ್ಯೋಪಾಧ್ಯಾಯರು ಗಂಭೀರ ಖಾಯಿಲೆಯಿಂದ ನರಳುತ್ತಿದ್ದಾರೆ. ಅವರನ್ನು ನೀವು ನೋಡಿದ್ದರೆ ಚೆನ್ನಾಗಿತ್ತು."

"ಅವರು ಯಾರು?" ನಾನು ಅಕ್ಷಯ ಬಾಬುಗಳನ್ನು ನೋಡಿದೆ.

"ಅವರು ಈ ಶಾಲೆಯ ಜೀವಾಳ. ಆದ್ರೆ, ಈಗವರ ಆರೋಗ್ಯ ತುಂಬಾ ಕೆಟ್ಟಿದೆ. ಶಾಲೆ ಮುಂದು ಬರೋದಕ್ಕೆ ಅವರೇ ಕಾರಣ ಕರ್ತರು." ಅಕ್ಷಯ ಬಾಬುಗಳು ಸ್ವಲ್ಪ ತಡೆದು ಅವರ ಭಾವ ಚಿತ್ರದೆಡೆಗೆ ಸನ್ನೆ ಮಾಡಿದರು, "ಇಲ್ಲಿ ನೋಡಿ, ಇದು ಅವರ ಫೋಟೋ."

ಆ ಭಾವ ಚಿತ್ರವನ್ನು ನೋಡಿದಾಕ್ಷಣ ನಾನು ಅವಾಕ್ಕಾದೆ. ಅದು ನಮ್ಮ ಅಟಲ್ ದಾರವರ ಫೋಟೋ ಆಗಿತ್ತು!

"ನಿಮ್ಮ ಮುಖ್ಯೋಪಾಧ್ಯಾಯರ ಹೆಸರೇನು?"

"ಅಟಲ್ ಬಿಹಾರೀ ಬಾಸು."

ಇಂದು ಜ್ಞಾಪಿಸಿಕೊಳ್ಳಬಲ್ಲೆ... ಅಂದು, ಟಿನ್ನಿನ ಚಪ್ಪರದ ಕೆಳಗೆ ಕೂತು ಅಟಲ್ ದಾರವರ ಗೃಹಸ್ಥ ಜೀವನವನ್ನು ಕಣ್ಣುಗಳನ್ನಗಲಿಸಿ ನೋಡುತ್ತಿದ್ದೆ. ಅಲ್ಲೊಂದು ಹಳೆಯ ಲಾಟೀನು. ಮರದ ಒಂದು ಚಿಕ್ಕ ಟೇಬಲ್‌ನ ಮೇಲೆ ದೇವರುಗಳ ಪಟಗಳು. ಕೋಣೆಯ ಮತ್ತೊಂದು ಮೂಲೆಯಲ್ಲಿ ಒಂದು ಕಾಲುಮಣೆ. ಅದರ ಮೇಲೆ ಹರಕು ಚಾಪೆ. ಬಳಿಯೇ ಒಂದು ಕೊಳಕಾದ ತಲೆ ದಿಂಬು. ಕಾಲುಮಣೆಯ ಮೇಲೆ ಅನೇಕ ಪುಸ್ತಕಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

"ಅಟಲ್ ದಾ...." ಸಮಯ ನೋಡಿ ಅವರ ಮುಖವನ್ನೇ ಗಮನಿಸಿದೆ.

"ಹೇಳು! ಏನು ಹೇಳಬೇಕೆಂದಿದ್ದೀಯಾ?"

"ನಿನಗೆ ದುಃಖವಾಗ್ತಿಲ್ವಾ?"

"ದುಃಖ?"

ನನ್ನ ನೋಡಿ ಮೊದಲು ಅಟಲ್ ದಾ ವಿಸ್ಮಿತರಾದರು. ನನ್ನ ಕಣ್ಣಂಚಿನಲ್ಲಿ ಮೂಡಿದ್ದ ಕಣ್ಣೀರನ್ನು ಅಟಲ್ ದಾ ಬಹುಶಃ ನೋಡಿದ್ದರು. ಅಟಲ್ ದಾರವರ ಘೋರ ಬಡತನ ಕಂಡು ನನ್ನ ಮನಸ್ಸಿಗೆ ವ್ಯಥೆಯಾಗಿತ್ತು. ಅಲೀಪುರದ ಆ ಭವ್ಯ ಬಂಗ್ಲೆಯೆದರು ಈ ಟಿನ್ನಿನ ಮನೆ!.... ಅಟಲ್ ದಾರವರಂತಹ ಪುತ್ರನ ಪ್ರಾಪ್ತಿ ಎಲ್ಲರ ಅದೃಷ್ಟದಲ್ಲಿಲ್ಲವೆಂಬುದು ಬದಾಮತಲ್ಲೆ ಜನರ ಅಭಿಪ್ರಾಯವಾಗಿತ್ತು. ಆದರೆ....

ಆ ಘಟನೆ ನಡೆದ ಅನೇಕ ದಿನಗಳ ನಂತರ, ಅಟಲ್ ದಾರವರ ಹಳೆಯ ಮನೆ ಮತ್ತೂ ಕುಸಿಯುತ್ತಿರುವುದನ್ನು ನೋಡಿದೆ. ಅನೆಷ್ಟೋ ಬಾರಿ ಅವರ ಮನೆ ಯೆದುರು ಹಾಯ್ದು ಹೋಗುವಾಗ ಒಮ್ಮೆಲೆ ನಿಂತುಬಿಡುತ್ತಿದ್ದೆ. ಅಟಲ್ ದಾ ರವರು ಆ ಮನೆಯಿಂದ ಹೊರಟು ಹೋದ ಮೇಲೆ ಒಂದು ದಿನಕ್ಕಾದರೂ ಅಟಲ್ ದಾ ರವರ ಕೋಣೆಯ ಕಿಟಕಿ ಬಾಗಿಲುಗಳನ್ನು ತೆರೆದಿರಲಿಲ್ಲ.

ಆಶುಬಾಬುರವರು ಈ ಮೊದಲಿ ನಂತೆಯೇ ಚೀಲ ಹಿಡಿದು ಪೇಟೆಗೆ ಹೋಗು ತ್ತಿದ್ದರು. ನಾನು ಚೀಲ ಹಿಡಿದುಕೊಳ್ಳಲು ಮುಂದೆ ಬಂದರೆ, ತಡೆಯುತ್ತಿದ್ದರು.

"ಅಂಕಲ್, ಈಗ ಹೇಗಿದ್ದೀರಿ?" ಸಮಯ ನೋಡಿ ವಿಚಾರಿಸುತ್ತಿದ್ದೆ.

"ನಾನಾ? ಚೆನ್ನಾಗಿಯೇ ಇದ್ದೀನಿ."

"ಅಟಲ್ ದಾ ಈಗೆಲ್ಲಿದ್ದಾರೆ?"

"ಎಲ್ಲಿದ್ದಾನೋ ಏನೋ, ಯಾರಿಗೆ ಗೊತ್ತಪ್ಪಾ? ಅವನೇನೂ ನನಗೆ ತಿಳಿಸಲ್ಲ."

ಕಡೆಗೆ, ಆಗಾಗ್ಯೆ ನಾನು ಅಟಲ್ ದಾ ರವರ ಮನೆಗೂ ಹೋಗಲು ಪ್ರಾರಂಭಿಸಿದೆ. ನನ್ನ ಕಾಲು ಸಪ್ಪಳ ಕೇಳಿ ಅಟಲ್ ದಾ ರವರ ತಾಯಿ "ಯಾರು?" ಎಂದು ಪ್ರಶ್ನಿಸುತ್ತಿದ್ದರು.

"ನಾನು ಚಿಕ್ಕಮ್ಮ."

"ಬಾರಪ್ಪಾ-ಬಾ. ನನ್ಮ ನೆನಪು ಬಂತಲ್ಲ."

ಆಗ ನನ್ನಿಂದ ಮಾತೇ ಹೊರಡುತ್ತಿರ ಲಿಲ್ಲ.

"ಅಟಲ್ ದಾನನ್ನು ನೋಡೋದಕ್ಕೆ ಬಂದಿದ್ದೀಯಾ. ಆದ್ರೆ ಅವನೇ ಇಲ್ಲ." ಚಿಕ್ಕಮ್ಮನ ಕಂಠ ಒತ್ತಿ ಬರುತ್ತಿತ್ತು.

ಅಟಲ್ ದಾ ಇಲ್ಲ!

ಕ್ರಮೇಣ ಎಲ್ಲಾ ವಿಷಯಗಳನ್ನು ಹೇಗೆ ಸಹಿಸಲಾಗುತ್ತಿದೆಯೋ ಅಂತೆಯೇ ಒಂದು ದಿನ ಈ ವಿಷಯವನ್ನು ಸಹಿಸ ಲಾಯಿತು.

ಆಶುಬಾಬು, ಚಿಕ್ಕಮ್ಮ, ಬದಾಮ ತಲ್ಲೆಯ ಜನ-ಎಲ್ಲರೂ ಅಟಲ್ ದಾರವ ರನ್ನು ಮರೆತರು. ಮನುಷ್ಯ, ಬದುಕ ಲೋಸುಗ ಬಹಳಷ್ಟನ್ನು ಮರೆಯಲೇ ಬೇಕಾಗುತ್ತದೆ....

ಆಗಾಗ್ಯೆ ಆಶುಬಾಬುಗಳು ಪಾರ್ಕಿನಲ್ಲಿ ಕೋಲೂರುತ್ತಾ ಹೋಗುತ್ತಿದ್ದರು. ಕಡೆಗೆ ಅವರೆದುರು ನಾನು ಹೋದರೂ, ನನ್ನನ್ನು ಗುರುತಿಸದಷ್ಟು, ಅವರ ದೃಷ್ಟಿ ಮಂದ ವಾಯಿತು. ಒಂದೊಂದು ಸಲ ನಾನೇ ಹೋಗಿ ಅವರ ಕಾಲುಮುಟ್ಟಿ ನಮಸ್ಕರಿಸುತ್ತಿದ್ದೆ.

"ಮಗು, ಯಾರು ನೀನು?" ಆಶುಬಾಬು ಗಳು ನೋಡಲು ಪ್ರಯತ್ನಿಸುತ್ತಿದ್ದರು.

ಅಂಕಲ್, ಅಟಲ್ ದಾರವರ ವಿಚಾರ ತಿಳಿಯಿತೇ?"

"ಓಹ್-ನೀನು! ಇಲ್ಲಪ್ಪ, ತಿಳೀಲಿಲ್ಲ."

"ಈ ಬಗ್ಗೆ ಯಾವುದಾದರೂ ಪತ್ರಿಕೆಗೆ ಹಾಕಿಸಿ, ಅಂಕಲ್." ನನ್ನ ಈ ಮಾತಿಗೆ ಅವರು ನಕ್ಕುಬಿಡುತ್ತಿದ್ದರು.

ಹೀಗೇ ದಿನಗಳು ಉರುಳಿದವು. ಆದೊಂದು ದಿನ ಅಟಲ್ ದಾರವರ ತಾಯಿ ಸ್ವರ್ಗಸ್ಥರಾದ ವಿಷಯ ತಿಳಿಯಿತು. ಶವವನ್ನು ನಾವೇ ಸ್ಮಶಾನಕ್ಕೊಯ್ಯಬೇಕಾಯಿತು. ಮಗನ ವಿಷಯ ತಿಳಿದಿರಲಿಲ್ಲವಾದ್ದರಿಂದ ನಾನೇ ಚಿತೆಗೆ ಅಗ್ನಿಸ್ಪರ್ಶ ಮಾಡಿಸಬೇಕಾಯಿತು. ಅಟಲ್ ದಾ ಬದುಕಿರುವಂತೆಯೇ ಹೀಗಾಯಿತು!.... ಕಡೆಗೆ, ಈ ಹಿಂದಿನಂತೆಯೇ ಜಗತ್ತು ಮುಂದುವರೆಯಿತು.

"ನನಗ್ಯಾಕೆ ದುಃಖ, ಮಗು! ನಾನೇಕೆ ದುಃಖ ಪಡಲಿ?" ಆಶುಬಾಬುರವರು ಒಂದೊಂದು ಸಲ ಹೇಳುತ್ತಿದ್ದರು.

"ಅದ್ರೆ, ಅಟಲ್ ದಾ ಹೀಗೆ ಮಾಡೋದು ಸರಿಯಲ್ಲ. ಇಷ್ಟೆಲ್ಲಾ ಆದರೂ ಒಂದು ಕಾಗದ ಹಾಕುತ್ತಿಲ್ಲವೆಂದರೆ...."

"ಅವನಿಗೆ ಬೇಡವಾದರೆ, ಹೋಗಲಿ! ಏನಾಯ್ತೀಗ? ನನಗೆ ಮಗನೇ ಇರಲಿಲ್ಲವೆಂದು ಮನಸ್ಸು ಗಟ್ಟಿಮಾಡಿಕೊಳ್ತೀನಿ. ಇದ್ದರೂ, ಅವನು ಸತ್ತುಹೋಗಿದ್ದಾನೆಂದೇ ತಿಳಿದುಕೊಳ್ತೀನಿ." ಆಶುಬಾಬುಗಳು ಒಣನಗೆ ಚೆಲ್ಲುತ್ತಿದ್ದರು.

ಘಾಟ್‌ಶಿಲಾದಲ್ಲಿ ಅಟಲ್ ದಾರವರೊಂದಿಗೆ ಕೂತಾಗ ನನಗದೇ ಹಳೆಯ ವಿಷಯಗಳು ನೆನಪಾಗುತ್ತಿದ್ದವು. ಇಷ್ಟು ನಿರ್ದಯಿಯ ಬಗ್ಗೆ ನಾನೇನು ತಾನೇ ಅಪಾದನೆ ಮಾಡಲಿ?.... ಅಟಲ್ ದಾರವರ ಹೆಂಡತಿ ಒಂದು ಕಪ್ ಚಹಾ ತಂದಿಟ್ಟು ಹೊರಡಲನುವಾದಳು.

"ಲೇ!, ಸ್ವಲ್ಪ ಕೇಳಿಲ್ಲಿ" ಅಟಲ್ ದಾ ತಮ್ಮ ಹೆಂಡತಿಯನ್ನು ತಡೆದರು.

ಅವಳು ಅಲ್ಲೇ ನಿಂತಳು. ನನಗಂತೂ ಅವಳೆಡೆಗೆ ಕಣ್ಣೆತ್ತಿ ನೋಡಲೂ ಭಯವಾಗುತ್ತಿತ್ತು. ವಾಸ್ತವವಾಗಿ, ನನ್ನಲ್ಲಿ ಜಿಗುಪ್ಸೆ ಮೂಡಿತ್ತು.

ಈ ಎಲ್ಲಾ ಸಮಸ್ಯೆಗಳಿಗೆ ಈ ಹೆಣ್ಣೇ ಕಾರಣವಲ್ಲವೇ?

"ಇವಳು ನಿನ್ನ ಅತ್ತಿಗೆ, ನಮಸ್ಕಾರ ಮಾಡು" ಎಂದು ಅಟಲ್ ದಾ ಹೇಳಿದರೂ ನಾನು ಕೇವಲ ನನ್ನ ಕೈಗಳನ್ನಷ್ಟೇ ಜೋಡಿಸಿದೆ.

"ನಿಮ್ಮ ಪುಸ್ತಕಗಳನ್ನು ನಾನು ಓದ್ತಾ ಇರ್ತೀನಿ. ತುಂಬಾ ಚೆನ್ನಾಗಿರುತ್ತೆ" ಅವಳು ನನ್ನೆಡೆಗೆ ಹೊರಳಿದಳು.

ನಾನು ತಲೆತಗ್ಗಿಸಿ ಕೂತಿದ್ದೆ. ಅವಳು ತುಂಬಾ ಮಾತನಾಡಲು ಮುಂದಾದ್ದನ್ನು ಕಂಡು ನಾನು ಅಕಸ್ಮಾತ್ ಪ್ರಶ್ನಿಸಿದೆ, "ಅಟಲ್ ದಾ ಅಪ್ಪ ಹೇಗಿದ್ದಾರೆ ಅಂತ ನೀನು ಕೇಳಲೇ ಇಲ್ವಲ್ಲ?"

"ಅಪ್ಪ?" ಅಟಲ್ ದಾ ಮೊದಲು ಗಾಬರಿಗೊಂಡರು. ಕಡೆಗೆ ಮೌನ ತಾಳಿದರು.

"ಅಟಲ್ ದಾ, ನಿನ್ನ ಮನಸ್ಸಿನಲ್ಲಿ ದಯೆ, ಕರುಣೆ, ಮಮತೆಯಿಲ್ವಾ? ನೀನು ಇಷ್ಟು ಕಲ್ಲು-ಹೃದಯಿಯಾದದ್ದು ಎಂದಿನಿಂದ? ನೀನು ಹೀಗಿರಲಿಲ್ಲವಲ್ಲ!"

ಅಟಲ್ ದಾ ಏನೋ ಯೋಚಿಸುತ್ತಿರುವಂತೆ ಕಂಡಿತು. ಅಕಸ್ಮಾತ್, ಅವರಿಗೆ ಮನೆಯ ನೆನಪಾದಂತೆ ಕಂಡಿತು. ಕೈಯಲ್ಲಿ ಹಿಡಿದಿದ್ದ ಪುಸ್ತಕದ ಹಾಳೆಗಳನ್ನು ತಿರುವುತ್ತಾ ಮನಸ್ಸಿನಲ್ಲಿ ಏನೋ ವಟಗುಟ್ಟಿದರು. ನಾನು, ನನಗೇ ತಿಳಿಯದಂತೆ ಅವರ

ಮನಸ್ಸಿನ ಗಾಯವನ್ನು ಕೆದಕಿದ್ದೆ ; ಅವರ ನೋವಿನಿಂದ ಅವರಿಡೀ ಆತ್ಮ ವಿಲಿ-ವಿಲಿ ಒದ್ದಾಡುತ್ತಿದೆಯೆಂದು ನನಗನ್ನಿಸಿತು.

"ಬಾಲ್ಯದಿಂದ ನೀನು ನಮ್ಮೆಲ್ಲರ ಆದರ್ಶವಾಗಿದ್ದೆ ಅಟಲ್ ದಾ. ನಿನ್ನನ್ನು ಹೊರತು ಪಡಿಸಿ ಬೇರೆ ಆದರ್ಶ ವ್ಯಕ್ತಿಗಳಿದ್ದಾರೆ ಎಂಬುದೂ ನಮಗೆ ತಿಳಿದಿರಲಿಲ್ಲ. ಈ ವಿಷಯ ನಿನಗೂ ಗೊತ್ತಿತ್ತು, ಅಟಲ್ ದಾ!" ನಾನು ಅಟಲ್ ದಾರವರನ್ನೇ ಗಮನಿಸುತ್ತಿದ್ದೆ.

ಅಟಲ್ ದಾ ತುಟಿ ಎರಡು ಮಾಡದೆ ಅನ್ಯಮನಸ್ಕರಾಗಿ, ಪುಸ್ತಕದ ಹಾಳೆಗಳನ್ನು ತಿರುವುತ್ತಿದ್ದರು.

"ನಿನ್ನ ತಂದೆ-ತಾಯಿ, ಕೊನೆಯ ಗಳಿಗೆಯಲ್ಲಿ ಅದೆಷ್ಟು ಕಷ್ಟ ಅನುಭವಿಸಿದರೆಂಬುದು ನಿನಗ್ಗೊತ್ತಾ? ಹೇಳು, ಮಾತಾಡು!"

ಅಟಲ್ ದಾ ವಿಸುಕಾಡಲೂ ಇಲ್ಲ.

"ಆದ್ರೆ, ಈ ಮೊದ್ಲು ನೀನು ಹೀಗಿರಲಿಲ್ಲ. ಅನ್ಯಾಯದ ವಿರುದ್ಧ ಪ್ರಪ್ರಥಮವಾಗಿ ನೀನೇ ಧ್ವನಿಯೆತ್ತುತ್ತಿದ್ದೆ. ಯಾವುದೇ ಕೆಟ್ಟ ಕೆಲಸ ನಿನ್ನಿಂದ ಬಹು ದೂರವಿರುತ್ತಿತ್ತು.... ಅಟಲ್ ದಾ, ನಾನಿವತ್ತು ನಿನ್ನನ್ನು ಸುಮ್ಮನಿರಲು ಬಿಡಲ್ಲ. ನಿನ್ನ ಕಾಲಿಗೆ ಬೀಳ್ತೀನಿ. ನನ್ನ ಮಾತಿಗೆ ಕಡೆಪಕ್ಷ ಏನಾದರೂ ಉತ್ತರಿಸು. ಒಂದು ಸಲವಾದರೂ ಬಾಯಿಬಿಡು. ಹೀಗೆಲ್ಲಾ ಯಾಕಾಯ್ತು? ಇದಕ್ಕೆಲ್ಲಾ ಯಾರು ಹೊಣೆ? ನೀನು ಯಾರಿಗಾಗಿ, ಯಾವ ಕರ್ತವ್ಯವನ್ನು ಪಾಲಿಸುತ್ತಿದ್ದೀಯಾ? ಅಂಥಾ ವ್ಯಕ್ತಿ ಯಾರು? ಆ ವ್ಯಕ್ತಿ ನಿನ್ನ ತಂದೆ-ತಾಯಿಗಿಂತಲೂ ಹೆಚ್ಚೇ? ಹೇಳು....ಹೇಳು...."

ಅಟಲ್ ದಾ, ಈಗ ಸ್ವಲ್ಪ ವಿಚಲಿತರಾದವರಂತೆ ಕಂಡರು.

"ಹೆದರಬೇಡ ಅಟಲ್ ದಾ, ಆ ವ್ಯಕ್ತಿ ಯಾರೆಂದು-ಅವರ ಹೆಸರೇನೆಂದು ನಾನು ಕೇಳ್ತಿಲ್ಲ....ಆ ವ್ಯಕ್ತಿಯ ಬಗ್ಗೆಯೂ ನಾನು ಏನನ್ನೂ ಹೇಳುವುದಿಲ್ಲ...."

ಅಟಲ್ ದಾ, ನನ್ನೆರಡೂ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡರು.

"ನೋಡು, ನೀನಿವತ್ತು ನನ್ನ ಹತ್ತಿರವೇ ಇದ್ದು ಬಿಡು."

"ಯಾಕೆ?"

"ನಿನ್ನ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರ ಕೊಡ್ತೀನಿ. ಆದ್ರೆ, ಇವತ್ತು ನೀನು ನನ್ನ ಜೊತೆಗಿರಬೇಕಾಗುತ್ತೆ."

"ನಿನ್ನ ಮನೇಲಿ....?"

"ಯಾಕೆ, ನಿನಗೆ ಅಷ್ಟು ಕೆಲಸ ಏನೆಯಾ?"

"ಇಲ್ಲ-ಇಲ್ಲ. ಕೆಲಸದ ಬಗ್ಗೆ ನಾನು ಹೇಳ್ತಿಲ್ಲ. ನಿನ್ನ ಮನೆಯ ದೃಶ್ಯ ಕಂಡು ನನಗೆ ಸಂಕೋಚವಾಗುತ್ತಿದೆ. ನಾನೆಲ್ಲಿ ಇರೋದು? ಉಸಿರು ಕಟ್ಟಿಸುವ ನಿನ್ನ ಈ ಚಪ್ಪರದ ಮನೆಯಲ್ಲಿ....?

"ಇವತ್ತೊಂದು ದಿನ ಉಳಿ. ಇಲ್ಲಿ ನೋಡು, ಒಂದು ಹೊಸ ಪುಸ್ತಕ ಕೊಂಡು ತಂದಿದ್ದೀನಿ. ನಿನಗೂ ಓದಿ ಹೇಳ್ತೀನಿ."

ಆದರೆ, ನನಗಂತೂ ಈಗ ಪುಸ್ತಕದ ಬಗ್ಗೆ ಆಸಕ್ತಿಯಿರಲಿಲ್ಲ.

ಅಟಲ್ ದಾ ಇಂಥಾ ಭಯಾನಕ ಬಡತನವನ್ನು ಯಾಕೆ ಒಪ್ಪಿಕೊಂಡರು? ಯಾರಿಗಾಗಿ ಒಪ್ಪಿಕೊಂಡರು? ಯಾತಕ್ಕಾಗಿ ಒಪ್ಪಿಕೊಂಡರು? ಅಲೀಪುರದ ವಿವಾಹ ಮಂಟಪದಲ್ಲಿ ಕಂಡ ಕರಿಯ ಹೆಣ್ಣಿನ ಆಕರ್ಷಣೆ

ಇಷ್ಟು ಬಲವಾಗಿದೆಯಾ! ಅವಳ ಬಗ್ಗೆ ಇಷ್ಟೊಂದು ಮೋಹವೇ! ಮಿಲ್ಲಿನ ದಪ್ಪ ಸೀರೆ ಉಟ್ಟ ಆ ಹೆಣ್ಣನ್ನು ಇಂದೂ ನಾನು ಮತ್ತೆ ನೋಡಿದೆ. ಇವಳಲ್ಲಿ ಅಂಥಾ ಯಾವ ಆಕರ್ಷಣೆಯಿದೆ?”

ಬ್ರಹ್ಮಮುಹೂರ್ತದಲ್ಲೆದ್ದು ಮನಸ್ಸಿನ ಸ್ಥೈರ್ಯವನ್ನು ವೃದ್ಧಿಸಿಕೊಳ್ಳಲು ಗೋಡೆಯಲ್ಲಿದ್ದ ಬಿಂದುವನ್ನು ಎವೆಯಿಕ್ಕದೆ ಗಮನಿಸುತ್ತಿದ್ದ, ಹಾಗೂ ವಿವೇಕಾನಂದರ ಬ್ರಹ್ಮಚರ್ಯೆಗೆ ಸಂಬಂಧಿಸಿದ ಪುಸ್ತಕ ಪಠನದಿಂದ ತಮ್ಮ ಮನಸ್ಸನ್ನು ಗಟ್ಟಿ ಮಾಡಿಕೊಂಡಿದ್ದ ಅಟಲ್ ದಾ ಈ ಅಧೋಗತಿಗಿಳಿಯುವುದೆಂದರೆ! ಅಟಲ್ ದಾ ಒಂದು ಶಾಲೆಯ ಮುಖ್ಯೋಪಾಧ್ಯಾಯರಾಗಿ, ಅಲ್ಲಿಯ ಮಕ್ಕಳನ್ನು ಮನುಷ್ಯರನ್ನಾಗಿ ಮಾಡುತ್ತಿರುವುದಂತೂ ಮೆಚ್ಚತಕ್ಕ ಸಂಗತಿಯೇ. ಆದರೆ ಅವರು, ತಮ್ಮನ್ನು ತಾವು ಏನು ಮಾಡಿಕೊಂಡು ಬಿಟ್ಟರು? ನಾನು ಮಾಡಿದ್ದು ಸರಿ ಎಂದು ಎಲ್ಲರೆದುರು ಅವರು ತಲೆಯೆತ್ತಿ ಹೇಳಬಲ್ಲರು....?

“ಲೇs, ಕೇಳೇ ಇಲ್ಲಿ, ಇವರು ಇವತ್ತು ಇಲ್ಲೇ ಇರ್ತಾರೆ. ಇಲ್ಲೇ ಊಟ ಮಾಡ್ತಾರೆ. ತಿಳೀತಾ?–ಇವರಿಗೆ ನನ್ನ ಕೋಣೆಯಲ್ಲೇ ಹಾಸಿಗೆ ಹಾಕು.” ಅಟಲ್ ದಾರವರ ಮಾತಿನಿಂದ ನನ್ನ ಯೋಚನಾ-ಕೊಂಡಿ ಕಳಚಿತು.

ಆ ಕೂಡಲೇ ಆ ಹೆಣ್ಣು ಹೊರ ಬಂದು ನನ್ನನ್ನು ವಿಚಾರಿಸಿದಳು, “ನೀವು ರಾತ್ರಿಗೆ ಚಪಾತಿ ತಿನ್ತೀರೋ ಅಥವಾ ಊಟ ಮಾಡ್ತೀರೋ?”

“ನನಗೋಸ್ಕರ ಏನೂ ಮಾಡ್ಬೇಡಿ. ನೀವೇನು ಮಾಡ್ಕೊತೀರೋ ಅದೇ ನನಗೂ ಸಾಕು–” ಎಂದೆ.

“ನನ್ನ ಕಷ್ಟದ ಬಗ್ಗೆ ನೀವು ಯೋಚ್ನೆ ಮಾಡ್ತಿದ್ದೀರಲ್ಲ; ಆದ್ರೆ ಹೆಂಗಸರಿಗೆ ಅಡುಗೆ ಮಾಡೋದು ಕಷ್ಟವಲ್ಲ” ಅವಳು ನಕ್ಕಳು.

“ಇವರಿಗೆ ಬದನೆಕಾಯಿ ಪಲ್ಯ ಮಾಡು” ಅಟಲ್ ದಾ ತಮ್ಮ ಹೆಂಡತಿಗೆ ಆಜ್ಞಾಪಿಸಿದರು.

“ನಿಮಗೇನೋ ಬದನೆಕಾಯಿ ಪಲ್ಯ ಇಷ್ಟವೆಂದರೆ, ಅದು ಎಲ್ಲರಿಗೂ ಇಷ್ಟವಾಗುತ್ತಾ?” ಹೆಣ್ಣು,ಅಟಲ್ ದಾರವರನ್ನು ನೋಡಿತು.

“ನೋಡಿ ಅತ್ತಿಗೆ, ನಿಮಗಿಷ್ಟ ಬಂದದ್ದನ್ನು ಮಾಡಿ.”

ಹೆಂಡತಿ ಒಳ ಹೋದ ಮೇಲೆ ಅಟಲ್ ದಾ ನನ್ನನ್ನು ನೋಡುತ್ತಾ ಹೇಳಿದರು, “ಇಲ್ಲಿ ನಿನಗಂತೂ ತೊಂದ್ರೆಯಾಗುತ್ತೆ....”

“ಇಲ್ಲ. ಇಲ್ಲ, ತೊಂದ್ರೆ ಏನು ಬಂತು! ನೀನು ಹೀಗೆಲ್ಲಾ ಯೋಚಿಸಲೇ ಬೇಡ, ಅಟಲ್?”

“ಈಚೆಗೆ ಇಲ್ಲಿ ಸೊಳ್ಳೆ ಹಾವಳಿ ತುಂಬಾ.”

“ಅಟಲ್ ದಾ, ಏನಾದರಾಗಲಿ, ನಾನಿವತ್ತು ನಿನ್ನ ಕಥೆಯನ್ನು ಖಂಡಿತಾ ಕೇಳುವೆ.”

ಮನುಷ್ಯ ಯೋಚಿಸುವುದೇ ಒಂದಾದರೆ, ಆಗುವುದು ಇನ್ನೊಂದು. ಇಷ್ಟು ದಿನಗಳ ನಂತರ ಭೇಟಿಯಾದಾಗ್ಯೂ ಅಟಲ್ ದಾರವರ ಬದುಕಿನ ಕಥೆ ಕೇಳುವುದರಿಂದ ನಾನು ವಂಚಿತಗೊಳ್ಳುತ್ತೇನೆಂದು ಯೋಚಿಸಲೂ ಸಾಧ್ಯವಿತ್ತೇ? ವಿವಾಹ ನಡೆದ ರಾತ್ರಿಯಿಂದ ಎಲ್ಲಾ ಘಟನೆಗಳೂ ರಹಸ್ಯಮಯವಾಗಿದ್ದವು. ಇಂದು ಆ ರಹಸ್ಯಗಳೆಲ್ಲವೂ ಬಯಲಾಗುವುದಿತ್ತು. ಆದರೆ ಮತ್ತೆ

ಅಟಲ್ ದಾರವರ ಕತೆ ಅಜ್ಞಾತವಾಗಿರ ಬೇಕಾಯಿತು.

ಅಟಲ್ ದಾರವರಿಗೆ ಜೀವನದಲ್ಲಿ ಶಾಂತಿ ಸಿಕ್ಕಿತೇ?

ಅವರು ಒಮ್ಮೆಯಾದರೂ ಪಶ್ಚಾತ್ತಾಪ ಪಡಲಿಲ್ಲವೇ?

ಈ ಬಗ್ಗೆ ಬಿಡುವಾದಾಗಲೆಲ್ಲಾ ನನ್ನ ಮನಸ್ಸಿನಲ್ಲಿ ಕುತೂಹಲವುಂಟಾಗಿದೆ. ಆದರೆ ವಿಷಯ ತಿಳಿಯಲು ಸಾಧ್ಯವಾಗಲೇ ಇಲ್ಲ. ಅದೆಷ್ಟೋ ಬಾರಿ ಘಾಟಶಿಲೆಯ ನಿಲ್ದಾಣದಿಂದ ಹಾದು ಹೋಗಿದ್ದೆ. ಅವರನ್ನು ಭೇಟಿಯಾಗಲೂ ಮನಸ್ಸು ಬಯಸಿತ್ತು. ಆದರೆ ಅಂದಿನ ಆ ಕಹಿ ಅನುಭವವನ್ನು ನೆನಪಿಸಿಕೊಂಡಾಗ ಘಾಟಶಿಲೆಗೆ ಹೋಗುವ ಧೈರ್ಯವಾಗಲಿಲ್ಲ. ಯಾಕೆ? ಯಾಕೆ?....

ಆ ಕಥೆಯನ್ನೇ ಇಂದು ಹೇಳುವೆ.

ಅಟಲ್ ದಾರವರು ಅಂದು ರಾತ್ರಿ ತಮ್ಮ ಕಥೆಯನ್ನು ಹೇಳಲು ಬಯಸಿದ್ದರು. ಹೀಗಾಗಿ ಅಂದು ರಾತ್ರಿ ಘಾಟಶಿಲೆಯ ಅವರ ಮನೆಯಲ್ಲಿ ಉಳಿದುಕೊಳ್ಳಲು ಒಪ್ಪಿಕೊಂಡಿದ್ದೆ. ಅವರ ಕಥೆ ಕೇಳುವ ಕುತೂಹಲಿಯಾಗಿದ್ದೆ.

ಅದೂ-ಇದೂ ಮಾತುಕತೆಯಾದ ಮೇಲೆ ಕೈಕಾಲು ತೊಳೆಯಲೋಸುಗ ಹೊರ ಬಂದೆ. ನೀರು ಎಲ್ಲಿದೆ ಎಂದು ಹುಡುಕುತ್ತಿರುವಾಗಲೇ ಅಟಲ್ ದಾರವರ ಹೆಂಡತಿ ಅಲ್ಲಿಗೆ ಬಂದಳು.

"ಕಾಲು ತೊಳೆಯಲು ನೀರು ಬೇಕಾಗಿತ್ತು...."

"ನೀವಿಲ್ಲಿಗೆ ಬಂದದ್ದು ಯಾಕೆ?"

ಅವಳ ಈ ಮಾತಿಗೆ ನಾನು ಗಾಬರಿಗೊಂಡೆ; ಅವಳ ಧ್ವನಿ ಅಷ್ಟು ಗಡುಸಾಗಿತ್ತು.

"ನೀವೆಲ್ಲಾ ನನ್ನ ಮನೆಗೆ ಯಾಕೆ ಬರ್ತೀರಾ? ಯಾಕೆ?"

ನಾನು ಮತ್ತೂ ಗಾಬರಿಯಿಂದ ಅವಳನ್ನು ನೋಡಿದೆ. ಕತ್ತಲಲ್ಲೂ ಅವಳ ಸಿಟ್ಟಿನ ಮುಖ ಹಾಗೂ ಉತ್ತೇಜಿತ ಧ್ವನಿಯನ್ನು ಗುರಿತಿಸುತ್ತಿದ್ದೆ.

"ನೀವೆಲ್ಲಾ ನನ್ನನ್ನು ಸಂಪೂರ್ಣ ನಾಶ ಮಾಡಲು ಬರ್ತಿದ್ದೀರಾ? ನಿಮಗೆ ನಾನೇನು ಕೆಡಕು ಮಾಡಿದ್ದೇನೆ? ನಾನೇನು ಅಪರಾಧ ವೆಸಗಿದ್ದೇನೆ?"

"ನಿಮ್ಮ ಮಾತು ನನಗರ್ಥವಾಗಲಿಲ್ಲ" ಎಂದೆ.

"ನೀವೆಲ್ಲಾ ಸೇರಿ ನನ್ನ ವಿರುದ್ಧ ಸಂಚು ಹೂಡ್ತಿದ್ದೀರ. ನಾನಿಲ್ಲಿ ನನ್ನ ಗಂಡನೊಂದಿಗೆ ಸಂಸಾರ ಮಾಡ್ತಿರೋದು ನಿಮ್ಮೆಲ್ಲರ ಕಣ್ಣಿಗೆ ಚುಚ್ಚುತ್ತಿದೆ."

"ಹೀಗೆಲ್ಲಾ ಯಾಕೆ ಮಾತಾಡ್ತಿದ್ದೀರ?" ನನಗೆ ಆಶ್ಚರ್ಯವಾಗಿತ್ತು.

"ಈ ನನ್ನ ಕೊಳಕು ಸೀರೆ, ಈ ಹರಕು ಗುಡಿಸಲು–ಇಲ್ಲಿರುವ ಬಡತನ ನಿಮಗೆ ಕಾಣಿಸುತ್ತಿಲ್ಲವೇ? ನಿಮಗೆ ಕಣ್ಣಿಲ್ಲವೇ? ಇದನ್ನೆಲ್ಲಾ ನೋಡಿಯೂ ನೀವಿಲ್ಲಿ ಉಳಿದುಕೊಂಡು ಊಟ ಮಾಡುವುದಕ್ಕೆ ಒಪ್ಪಿಕೊಂಡಿರಲ್ಲ!"

"ನೀವ್ರೂ, ಉಳಿದುಕೊಳ್ಳುವಂತೆ ಈಗ್ಯೆ ಸ್ವಲ್ಪ ಮುಂಚೆಯಷ್ಟೇ ಹೇಳಿದ್ದಿರಿ, ನನ್ನ ಊಟದ ಬಗ್ಗೆ ಪ್ರಶ್ನಿಸಿದ್ದಿರಿ...." ನಾನು ಸಂಕೋಚ ವ್ಯಕ್ತಪಡಿಸಿದೆ.

(ಮುಂದುವರಿಯುವುದು)

ಪುಸ್ತಕ ಪರಿಚಯ

ಡಂಕೆಲ್ ಪ್ರಸ್ತಾವನೆಯ ಬೆಳಕಿನಲ್ಲಿ ಸ್ಯಾಟಲೈಟ್ ಟಿ. ವಿ.— ಲೇಖಕರು: ಜಿ. ಎನ್. ಮೋಹನ್; ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಬೆಂಗಳೂರು ೫೬೦ ೦೦೧; ಪುಟಗಳು: ೧೦೪; ಬೆಲೆ: ೨೦ರೂ.

ಜಿ. ಯನ್. ಮೋಹನ್ ಈ ಗ್ರಂಥದಲ್ಲಿ ನಾವು ನಮಗರಿವಿಲ್ಲದೆ ದಾಸ್ಯದ ಕಡೆಗೆ ಸಾಗುತ್ತಿರುವುದನ್ನು ತಿಳಿಸಿ, ಮುಂದೆ ನಮಗೆ ಒದಗಬಹುದಾದ ವಿಪತ್ತಿನ ಬಗೆಗೆ ಚರ್ಚಿಸಿ, ಅಪಾಯದ ಗಂಟೆಯನ್ನು ಬಾರಿಸಿದ್ದಾರೆ. ಡಂಕೆಲ್ ಪ್ರಸ್ತಾವನೆಯ ಸ್ವೀಕಾರ ಹಾಗೂ ಅದನ್ನು ಹಿಂಬಾಲಿಸಿ ಭಾರತದೊಳಗೆ ನುಗ್ಗಿದ ಪೆಪ್ಸಿ ಕೋಲಾ, ಸ್ಯಾಟಲೈಟ್ ಟಿ.ವಿ. ಮತ್ತು ಅವು ಭಾರತೀಯ ಮಾರುಕಟ್ಟೆ ಹಾಗೂ ಸಂಸ್ಕೃತಿ ಮೇಲೆ ಮಾಡಿದ ದಾಳಿಯ ಕುರಿತು ವಿವರಿಸಲಾಗಿದೆ.

ನಮ್ಮ ಮಕ್ಕಳಿಗೆ ಹಸುವಿನ ಹಾಲು ಬೇಕೆ? ಅಥವಾ ವಿದೇಶೀ ಚಾಕಲೇಟು, ಕೋಲಾ (ವಿದೇಶೀ ಶರಬತ್ತು)ಬೇಕೇ? ಎನ್ನುವ ವಿಚಾರದಲ್ಲಿ ನಮ್ಮ ವ್ಯಕ್ತಿಗತ ನಿರ್ಧಾರದ ಅಗತ್ಯವನ್ನು ಹೇಳುತ್ತದೆ.

ಜನಸಾಮಾನ್ಯರ 'ಕೊಳ್ಳುಬಾಕ'ತನದ ದಾಹವನ್ನು ವಿದೇಶೀ ಸ್ಯಾಟಲೈಟ್ ಟಿ.ವಿ.ಗಳ 'ಪಾಪ್' ಸಂಗೀತ, ಧಾರಾವಾಹಿಗಳು ಮತ್ತು ಜಾಹೀರಾತುಗಳು ಕೈಮೀರಿದ ಮಟ್ಟಕ್ಕೆ ಎಳೆಯುವ ವಾಸ್ತವಿಕತೆಯನ್ನು ತೋರಿಸಿದೆ ಈ ಗ್ರಂಥ.

ಡಂಕೆಲ್ ಪ್ರಸ್ತಾವನೆಯ 'ಪೇಟೆಂಟ್' ಎಂಬ ಅಸ್ತ್ರವನ್ನು ಉಪಯೋಗಿಸಿಕೊಂಡು ಮುಂದುವರಿದ ದೇಶಗಳು ಬಡ ತೃತೀಯ ರಾಷ್ಟ್ರಗಳ ಮೇಲೆ ತಮ್ಮ ವಾಣಿಜ್ಯ 'ಸ್ವಾಮಿತ್ವ'ವನ್ನು ಸ್ಥಾಪಿಸುವ ತಂತ್ರದ ಕುರಿತು ವಿಚಾರ ಮಾಡಲಾಗಿದೆ.

ಈ ಗ್ರಂಥದಲ್ಲಿ ಕೇಬಲ್ ಜಾಲದ ಉಗಮ, ಅಲ್ಲಿಂದ ಸ್ಯಾಟಲೈಟ್ ಟಿ.ವಿ. ಪ್ರಸಾರದ ಆವಿಷ್ಕಾರ ಹಾಗೂ ಆ ಸ್ಯಾಟಲೈಟ್‌ಗಳಿಂದ ಸಂವಹನವಾಗುವ ಕಾರ್ಯಕ್ರಮಗಳ ವಿತರಣೆಗೆ ಏಕ ಸ್ವಾಮಿತ್ವದ ದೃಷ್ಟಿಯಿಂದ ಅಳವಡಿಸಲಾಗುತ್ತಿರುವ ಅತಿ ವಿಸ್ತೃತ ಕೇಬಲ್‌ಜಾಲ ಮತ್ತು ಅವು ಸುದ್ದಿ ಪ್ರಸಾರ—ಮನರಂಜನೆಗಳೆಂಬ ಹೆಸರಿನಲ್ಲಿ ಕೊಡುತ್ತಿರುವ ಏಕಮುಖದ ಸುದ್ದಿ, ಕ್ರೌರ್ಯ, ಅಶ್ಲೀಲ ದೃಶ್ಯಗಳು ತುಂಬಿದ ಚಿತ್ರ ಕಾರ್ಯಕ್ರಮಗಳ ಪ್ರಸಾರ ಹಾಗೂ ಅವು ಯುವಜನರ ಮೇಲೆ ಬೀರಬಹುದಾದ ದುಷ್ಪರಿಣಾಮಗಳ ಮುನ್ಸೂಚನೆಯನ್ನು ಕೊಡಲಾಗಿದೆ.

ಮನರಂಜನಾ ಮಾಧುರ್ಯ, ನೀತಿ ಬೋಧನೆ, ಶಿಕ್ಷಣಮೌಲ್ಯ ಆದಿಯಾಗಿ ಯಾವುದೇ ತತ್ವಗಳಿಲ್ಲದೆ, ವೀಕ್ಷಕರನ್ನು ಕೇವಲ ಭ್ರಾಂತರನ್ನಾಗಿಸಿ ಟಿ.ವಿ.ಯ ಕೊಠಡಿಯೊಳಗೆ ಸೆರೆಯಾಳುಗಳನ್ನಾಗಿ ಕೂರಿಸುವ ಸಾಮರ್ಥ್ಯವುಳ್ಳ ವಿದೇಶಿ ಸ್ಯಾಟಲೈಟ್ ಟಿ.ವಿ. ಚಾನಲ್‌ಗಳು ವೀಕ್ಷಕರನ್ನು ಸಾಂಸ್ಕೃತಿಕ ಮತ್ತು ವಾಣಿಜ್ಯ ದಾಸ್ಯದೆಡೆಗೆ ಎಳೆಯಬಹುದೆಂಬ ಭಯವನ್ನು ವ್ಯಕ್ತಪಡಿಸಿದೆ.

ಆಕಾಶವಾಣಿಯ ಉಪಯುಕ್ತತೆ, ಸತ್ಪರಿಣಾಮಗಳ ವಿವರಣೆಯಿದೆ. ಈ ಎಲ್ಲ ಪ್ರಸಾರಮಾಧ್ಯಮಗಳು ಆಯುಧಗಳಂತೆ ಇದ್ದು, ಅವು ಕೊಡುವ ಪರಿಣಾಮಗಳು ಅವನ್ನು ಉಪಯೋಗಿಸುವವರ ಕೈಯಲ್ಲಿದೆ. ಅವುಗಳ ಮೇಲೆ ಸರಕಾರದ ನೀತಿ ಸಂಹಿತೆಯ ಹಿಡಿತದ ಅಗತ್ಯವನ್ನು ಒತ್ತಿ ಹೇಳಲಾಗಿದೆ.

ಬಹುರಾಷ್ಟ್ರೀಯರ ಮಾಲುಗಳು ಹಾಗೂ ಸ್ಟಾರ್ ಟಿ.ವಿ. ಮೊದಲಾದ ವಿದೇಶಿ ಚಾನಲ್‌ಗಳನ್ನು ಬಹಿಷ್ಕರಿಸಿ ವಿದೇಶೀ ತಾಂತ್ರಿಕ ಮತ್ತು ಸಾಂಸ್ಕೃತಿಕ ದಾಸ್ಯದಿಂದ ಮುಕ್ತಿಯನ್ನು ಪಡೆಯುವ ದಾರಿಯನ್ನು ಸೂಚಿಸಿದೆ ಈ ಗ್ರಂಥ.

ಈ ಗ್ರಂಥದೊಳಗೆ ಬರುವ ಶೀರ್ಷಿಕೆಗಳನ್ನು ಅನುಸರಿಸಿ ಇನ್ನೂ ಹೆಚ್ಚಿನ ನಿಖರತೆ ಮತ್ತು ಕ್ರಮಾಗತ ಸರಣಿಯಲ್ಲಿ ಆ ಶೀರ್ಷಿಕೆಗಳ ಪುಷ್ಟೀಕರಣವನ್ನು ಮಾಡಿದರೆ ಅದರ ಮನನ ಸುಲಭವಾಗುವುದಲ್ಲದೆ, ಹೆಚ್ಚು ಪ್ರಭಾವಶಾಲಿಯಾಗಬಹುದು.

ಈ ಗ್ರಂಥದಲ್ಲಿ ಒಂದು ಗಂಭೀರ ಸಮಸ್ಯೆಯನ್ನು ಮುಂದಿಟ್ಟು, ಆಮೂಲಾಗ್ರವಾಗಿ ಅದರ ಚರ್ಚೆಗೆ ಅವಕಾಶವನ್ನು ಮಾಡಿದೆ. ಗ್ರಂಥಕರ್ತರಾದ ಜಿ. ಎನ್. ಮೋಹನ್ ಅವರಂತೆ ಎಲ್ಲರೂ ಈ ವಿಷಯದ ಕುರಿತು ಆಳವಾಗಿ ಆಲೋಚಿಸಿ, ಪರಿಸ್ಥಿತಿಯ ಯಥಾರ್ಥವನ್ನು ಗಮನಿಸಿ ಮುಂದುವರಿಯಬೇಕಾಗಿದೆ.

ಬಿ. ಸುರೇಶ

*   *   *   *

ನಾನು ಕೊಂಡ ಹಸು: ಲೇಖಕರು: ಗಿಜುಭಾಯ್ ಬದೇಕಾ; ಅನುವಾದ: ಜಿ. ಆರ್. ರಂಗಸ್ವಾಮಯ್ಯ; ಪ್ರಕಾಶಕರು: ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ. ಪುಟ ೩೦; ಬೆಲೆ: ರೂ. ೬–೫೦.

ಗಿಜುಭಾಯ್ ಬದೇಕಾರವರ ಹಿಂದಿ ಕಥೆಯನ್ನು ರಂಗಸ್ವಾಮಯ್ಯನವರು 'ನಾನು ಕೊಂಡ ಹಸು' ಶೀರ್ಷಿಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ. ನವಸಾಕ್ಷರರ ಅಭಿರುಚಿ, ಭಾಷಾ ಸಾಮರ್ಥ್ಯಗಳನ್ನು ಆಧಾರಿಸಿ ಕಥಾ ರೂಪದಲ್ಲಿ ನಿರೂಪಿಸಿದ್ದಾರೆ.

ಬ್ರಾಹ್ಮಣ ಕುಟುಂಬ ಒಂದು ಹಸು ತಂದು ಸಾಕಲು ಮನಸ್ಸು ಮಾಡುತ್ತದೆ. ಹಸುವನ್ನು ಗೊಲ್ಲನಿಂದ ಪಡೆದು–ಚೆನ್ನಾಗಿ ಸಾಕುತ್ತಾರೆ. ಹಸುವಿನ ಆಗಮನದಿಂದ ನೆರೆ ಹೊರೆಯವರ ಸೌಹಾರ್ದ ಬೆಳೆಯುತ್ತದೆ. ಮಾನವೀಯ ಸಂಬಂಧಗಳಿಂದ ಎಲ್ಲರೂ ಹತ್ತಿರವಾಗುತ್ತಾರೆ. ಹಾಲಿನ ಉತ್ಪನ್ನವಾದ ಮಜ್ಜಿಗೆಯ ಹಂಚಿಕೆಯಿಂದ ಅದು ಮತ್ತಷ್ಟು ಬೆಳೆಯುತ್ತದೆ. ಗೋವಿನ ಆಗಮನದಿಂದ ಸಂಪತ್ತು ಹೆಚ್ಚಿ

ಬ್ರಾಹ್ಮಣ ದಂಪತಿಗಳಲ್ಲಿ 'ಅಹಂ' ಕಾಣಿಸಿಕೊಂಡಾಗ ಹಸು ತನ್ನ ತಕರಾರಿಂದ ಅವರಿಗೆ ಬುದ್ಧಿ ಕಲಿಸುತ್ತದೆ. ಬ್ರಾಹ್ಮಣನಿಗೆ ಹೆಚ್ಚಿನ ಪೌರೋಹಿತ್ಯ, ಹರಿಕಥೆಗೆ ಆಹ್ವಾನಗಳು ಬಂದು ಕೀರ್ತಿ ಹೆಚ್ಚುತ್ತದೆ. ಆ ದೇಶದ ರಾಜನಿಗೆ ಬ್ರಾಹ್ಮಣನ ಹಸುವಿನ ಮೇಲೆ ಕಣ್ಣು ಬೀಳುತ್ತದೆ. ಅದನ್ನು ಪಡೆಯಲು ಯತ್ನಿಸಿ ವಿಫಲನಾಗುತ್ತಾನೆ. ಹೀಗೆ ಊರು, ರಾಜ್ಯಗಳಲ್ಲಿ ಹಸು, ಬ್ರಾಹ್ಮಣ ದಂಪತಿಗಳ ಕೀರ್ತಿ ಬೆಳೆಯುತ್ತದೆ. ಹಸುವಿನ ಕರುಗಳನ್ನು ಊರಿನ ಜನರಿಗೆ ಹಂಚುತ್ತಾರೆ. ಇದರಿಂದ ಗೋಸಂಪತ್ತು ಹೆಚ್ಚಿ ರಾಜ್ಯ ಸಮೃದ್ಧವಾಗುತ್ತದೆ. ಈ ಎಲ್ಲಾ ವಿವರಗಳನ್ನು ಲೇಖಕರು ಸಹಜ ಎನ್ನುವಂತೆ ಚಿತ್ರಿಸಿದ್ದಾರೆ. ಹಿಂದಿ ಕಥೆಗಾರ ಪ್ರೇಮಚಂದರಲ್ಲಿ ಹಸು ಸಾಕುವ ಹಂಬಲ 'ಶೋಷಣೆ'ಗೆ ಮೂಲವಾಗುವುದನ್ನು ಅವರ 'ಗೋದಾನ' ಕಾದಂಬರಿಯಲ್ಲಿ ಪ್ರತಿಬಿಂಬಿತವಾಗಿದೆ. ಇಲ್ಲಿ 'ಹಸುವಿನ ಹಂಬಲ' ಮಾನವೀಯ ಸಂಬಂಧಗಳ ಹಾಗೂ ಸಮೃದ್ಧಿಯ ಸಂಕೇತವಾಗುತ್ತದೆ. ಪುರಾಣ ಹಾಗೂ ಆಧುನಿಕ ಜೀವನದ ಸಂವೇದನೆಗಳು ಲೇಖಕರಲ್ಲಿ ಚೆನ್ನಾಗಿ ವ್ಯಕ್ತವಾಗಿವೆ. ಪುಸ್ತಕದಲ್ಲಿನ ಚಿತ್ರಗಳು, ಮುದ್ರಣ ಚೆನ್ನಾಗಿದೆ. ಅನುವಾದ ಉತ್ತಮ.

ಬಕಪಕ್ಷಿ ದೊರಕಿಸಿಕೊಟ್ಟ ಆಕಳು: ಲೇಖಕರು: ಇಂದ್ರದಾನ ದೇಥಾ ಅನುವಾದ: ಉಪೇಂದ್ರ; ಪ್ರಕಾಶಕರು: ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ; ಪುಟ: ೪೦; ಬೆಲೆ: ೮-೦೦ ರೂ.

ಹೊಸದಾಗಿ ಓದು-ಬರಹ ಕಲಿತವರಿಗೆ ಅಕ್ಷರ ಜ್ಞಾನವನ್ನೂ ಉಳಿಸಿ ಬೆಳೆಸಿಕೊಳ್ಳಲು ಅಗತ್ಯವಾದ ಸಾಹಿತ್ಯ ರಚಿಸಲು ಬರಹಗಾರರು ಕೆಲವು ಅಂಶಗಳನ್ನು ಗಮನಿಸಬೇಕು.

೧) ವಿಷಯದ ಖಚಿತತೆ
೨) ಪರಿಚಯವಾದ ಪದಗಳ ಬಳಕೆ
೩) ಅನಾವಶ್ಯಕಪದಗಳನ್ನು ಕೈಬಿಡುವುದು
೪) ಬರವಣಿಗೆಯಲ್ಲಿ ವೈವಿಧ್ಯತೆ
೫) ಮಾದರಿ ವ್ಯಕ್ತಿ, ವಿಷಯಗಳ ಅಳವಡಿಕೆ
೬) ರಚನೆಯಾದ ಸಾಹಿತ್ಯದ ಮೌಲ್ಯಮಾಪನೆ.

ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬರಹಗಾರರು ತಮ್ಮ ಕೃತಿಗಳನ್ನು ಪರಿಷ್ಕರಿಸಿಕೊಳ್ಳುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಇಂದ್ರದಾನದೇಥಾರವರ 'ಬಕಪಕ್ಷಿ ದೊರಕಿಸಿಕೊಟ್ಟ ಆಕಳು' ಕತೆಯಲ್ಲಿ ಕಾಣಬಹುದಾಗಿದೆ.

ಬಕಪಕ್ಷಿ (ಅಲ್ಲಲ್ಲಿ ಕೊಕ್ಕರೆ ಎಂದಿದೆ!) ಒಂದನ್ನು, ರೈತ ಹೊಲದಲ್ಲಿ ಕಾಳುತಿನ್ನುವುದೆಂದು ಬಂಧಿಸುತ್ತಾನೆ. ಹಾದಿಯಲ್ಲಿ ಬರುವ ಗೊಲ್ಲ ಹಕ್ಕಿಯನ್ನು ರೈತನಿಂದ ಬಿಡಿಸುತ್ತಾನೆ. ಕೃತಜ್ಞತೆಗಾಗಿ ಗೊಲ್ಲ, ಹಸು ಒಂದನ್ನೂ ರೈತನಿಗೆ ನೀಡುತ್ತಾನೆ. ಹೀಗಾಗಿ ಗೊಲ್ಲ ಹಾಗೂ ರೈತನ ಕುಟುಂಬದವರು ಪರಸ್ಪರ ಹತ್ತಿರವಾಗುತ್ತಾರೆ. ಗೊಲ್ಲನ ಕುಟುಂಬ ರೈತನಿಗೆ ಹಸು-ಕರುಗಳ ಪಾಲನೆ

ಯಲ್ಲಿ ವಹಿಸಬೇಕಾದ ಎಚ್ಚರ, ಅವುಗಳಿಗೆ ನೀಡುವ ಆಹಾರ, ಹೈನುಗಾರಿಕೆಯ ವಿವಿಧ ಹಂತಗಳು, ಹಾಲಿನಿಂದ ತಯಾರಿಸುವ ಅಡಿಗೆಗಳು ಇತ್ಯಾದಿ ವಿವರಗಳನ್ನು ತಿಳಿಸಲಾಗುತ್ತದೆ. ಗೊಲ್ಲನ ಪತ್ನಿ ಪಶುವೈದ್ಯ ಪರಕಾಯ ಪ್ರವೇಶ ಮಾಡಿದಂತೆ ಹೊತ್ತು, ಗೊತ್ತಿಲ್ಲದೆ ತಿಳಿಸುತ್ತ ಹೋಗುತ್ತಾಳೆ. ಪುಸ್ತಕದಲ್ಲಿ ಕೆಲವೊಂದು ಆಭಾಸಗಳು ಕಂಡಿವೆ. ಉದಾ :–ಗೊಲ್ಲನ ಹೆಂಡತಿ ರೈತನಿಗೆ ಹಸು ಬೆದೆಗೆ ಬರುವ ಸಂದರ್ಭದಲ್ಲಿ ಅದರ ವರ್ತನೆ, ಇತ್ಯಾದಿ ಅಂಶಗಳನ್ನು ತಿಳಿಸುತ್ತಾಳೆ. ಆ ಸಂದರ್ಭ ಅಶ್ಲೀಲಕ್ಕೆ ಎಡೆಯಾಗುತ್ತದೆ. (ಪುಟ ೨೫, ೨೬, ೨೭) ಅನುವಾದದಲ್ಲಿ ಕೆಲವು ದೋಷಗಳಿವೆ.

ಉದಾ : ಗೊಲ್ಲ ಗೋಪಾಲನ ಹೆಸರೇ ಗೋಪಾಲ (ಪುಟ ೮) ಕೆಚ್ಚಲು, ತೊಟ್ಟು ಎನ್ನುವಲ್ಲಿ 'ಸ್ತನ' (ಪುಟ ೨೯, ೩೦) ಸಂಕರ ಎನ್ನುವಲ್ಲಿ 'ಸಂತರ' (ಪುಟ ೧೯) ಎಂದಿದೆ. ಪುಸ್ತಕದಲ್ಲಿನ ಚಿತ್ರಗಳು ಹಾಗೂ ಮುದ್ರಣ ಅಂದವಾಗಿದೆ. ಅನುವಾದದ ದೋಷ ಎದ್ದು ಕಾಣುತ್ತದೆ.

ಎ. ಡಿ. ನಂಜುಂಡಸ್ವಾಮಿ



ಹಿಂಸೆಯಿಂದ ಶಾಂತಿ ಸಿಗಲಾರದು. ಅದು ಆ ಉದ್ದೇಶವನ್ನೇ ವಿಫಲಗೊಳಿಸುವುದು. ಅಶಾಂತಿ ನೆಲೆಸಿದಾಗ ಪರಸ್ಪರ ಹೃದಯ ಪರಿವರ್ತನೆಗೆ ಪ್ರಯತ್ನಿಸುವುದರಿಂದ ಸಮಸ್ಯೆ ಬಗೆ ಹರಿಯಬಹುದು. ಒಂದು ಸಭ್ಯ ಮಾತು, ಕೃಪಾದೃಷ್ಟಿ, ಸಹೃದಯತೆಯಿಂದ ಕೂಡಿದ ನಗು, ಇವುಗಳಿಂದ ಬೇಕಾದ ಸಮಸ್ಯೆಯನ್ನಾದರೂ ನಾವು ಎದುರಿಸಿ ಶಾಂತಿ ಸ್ಥಾಪಿಸಬಹುದು. ಹಿಂಸೆಯಿಂದ ಸಮಸ್ಯೆಯನ್ನು ನಾಶಮಾಡಿಯೇ ಶಾಂತಿಗೊಳಿಸಬೇಕೆಂದೇನಿಲ್ಲ.

—ಹಜರತ್

Statement of ownership and other particulars about the monthly periodical **"PUSTAKA PRAPANCHA"** as required to be published under rule 8 of the Registration of Newspapers (Central) Rules 1956.

FORM IV

Place of Publication	— Karnataka State Adult Education Council. 5/1 Vinoba Road, Manasagangothri, Mysore-6
Periodicity	— Monthly
Printer's Name	— Sri A. D. Nanjunda Swamy
Nationality & Address	— Indian Karnataka State Adult Education Council Printing Press 5/1 Vinoba Road, Manasagangothri, Mysore-6
Publisher's Name & Address	— Dr. H. M. Nagaraju General Secretary Karnataka State Adult Education Council 5/1 Vinoba Road, Manasagangothri, Mysore-6
Nationality	— Indian
Editor's Name	— Sri Chandrashekhararadhya
Nationality	— Indian
Address	— Karnataka State Adult Education Council 5/1 Vinoba Road, Manasagangothri, Mysore-6

I, the General Secretary hereby declare that the particulars given above are true to the best of my knowledge and belief.

H. M. Nagaraju
General Secretary
KARNATAKA STATE ADULT EDUCATION COUNCIL
MYSORE

1 March 1996

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಪ್ರೊ|| ಜಿ. ಟಿ. ನಾರಾಯಣರಾವ್
ನಂ. ೮, 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರ, ಮೈಸೂರು-೯

೨. ಎಸ್. ರೋಹಿಣಿಶರ್ಮ
ತ್ಯಾಗರಾಜ ಬಡಾವಣೆ, ಅಜ್ಜಂಪುರ, ತರಿಕೆರೆ–೫೭೭ ೫೪೭

೩. ಸಿ. ನಾಗಣ್ಣ, ಪ್ರಾಧ್ಯಾಪಕರು
ಇಂಗ್ಲೀಷ್ ವಿಭಾಗ, ಮಹಾರಾಜ ಕಾಲೇಜು, ಮೈಸೂರು.

೪. ಡಿ. ರಾಮಚಂದ್ರ
೭೦/೭೧ ಹೂಟಗಳ್ಳಿ, ಇಂಡ್ರಸ್ಟ್ರಿಯಲ್ ಎಸ್ಟೇಟ್, ಮೈಸೂರು–೫೭೧೧೮೬

೫. ಜಿ. ಟಿ. ರಾಘವೇಂದ್ರ
'ದ್ವಾರಕಾ' ಶಾಲಾ ರಸ್ತೆ, ಮಡಿಕೇರಿ

೬. ಮಾಧವರಾವ್ ಮುಧೋಳ್, "ರಮಾಶ್ರೀ" ನಂ. ೧೧೬೭–ಬಿ೧,
ಹೆಚ್.ಐ.ಜಿ. ೨ನೇ ಹಂತ, ಶ್ರೀರಾಮಪುರ, ಮೈಸೂರು.

೭. ಗೋಪಾಲ ಆಶ್ರಿತ, "ರಮಾ ನಿಲಯ", ಜವಾಹರ ನಗರ,
ರಾಯಚೂರು- ೫೮೪ ೧೦೧

೮. ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ' ಸಾವಯುವ ಪಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ, ಮೈಸೂರು–೫೭೦ ೦೦೭

೯. ಡಾ|| ಕೃಷ್ಣ ಹಾಸನ, 'ಚೈತ್ರಪಲ್ಲವಿ' ಎಂ. ೨೬, ಸಿ.ಐ.ಟಿ.ಬಿ.
೨ ನೇ ಹಂತ, ಕುವೆಂಪುನಗರ, ಮೈಸೂರು–೫೭೦ ೦೨೩

೧೦. ಡಾ|| ಕರವೀರಪ್ರಭು ಕ್ಯಾಲಕೊಂಡ, ವೈದ್ಯಾಧಿಕಾರಿ
೨೦೩, ಶಸ್ತ್ರಚಿಕಿತ್ಸಾ ವಿಭಾಗ, ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ–೫೮೦೦೨೨

೧೧. ಎನ್. ಆರ್. ಪಾಟೀಲ್
ಸಾರ್ಟಿಂಗ್ ಕಛೇರಿ, ಆರ್.ಎಂ.ಎಸ್. ಹೊಸಪೇಟೆ–೬೮೩ ೨೦೧

೧೨. ಡಿ. ಎನ್. ಶ್ರೀನಾಥ್, ಅಧ್ಯಾಪಕ
ಕಸ್ತೂರ್ ಬಾ ವಿದ್ಯಾರ್ಥಿನಿಯರ ಪದವಿಪೂರ್ವ ಕಾಲೇಜು (ಹೈಸ್ಕೂಲ್ ವಿಭಾಗ)
ಅಂಚೆ ಪೆಟ್ಟಿಗೆ ನಂ. ೧೫, ಶಿವಮೊಗ್ಗ–೫೭೭ ೨೦೧

೧೩. ಬಿ. ಸುರೇಶ, ಎಂ–೪೭, ೩ನೇ ಹಂತ, ಜೆ.ಟಿ.ಕೆ ಬಡಾವಣೆ
ಕುವೆಂಪುನಗರ, ಮೈಸೂರು–೫೭೦ ೦೨೩

೧೪. ಎ. ಡಿ. ನಂಜುಂಡಸ್ವಾಮಿ
ನಂ. ೨, ೧ನೇ ತಿರುವು, ಕೆ.ಎನ್. ಪುರ, ಉದಯಗಿರಿ, ಮೈಸೂರು.

Reg. No. KRNN.29 / WPP 6

LICENCE No. 21
LICENCED TO POST WITH PAYMENT

ತಲಾ ರೂ. ೨–೫೦ ದರದಲ್ಲಿ ಸಮಿತಿಯ ಕೆಳಕಂಡ ಪ್ರಕಟಣೆಗಳು ದೊರೆಯುತ್ತವೆ.

ಪ್ರತಿ ಪುಸ್ತಕಗಳು ಅಷ್ಟದಳದಲ್ಲಿ ಗರಿಷ್ಠ ೩೨ ಪುಟಗಳನ್ನು ಹೊಂದಿರುತ್ತವೆ. ಅಂಚೆ ಮೂಲಕ ಪುಸ್ತಕಗಳನ್ನು ಅಪೇಕ್ಷಿಸುವವರು, ಅಂಚೆ ವೆಚ್ಚ ಪ್ರತ್ಯೇಕವಾಗಿ ಕಳುಹಿಸಬೇಕು.

ಪುಟ್ಟಾಚಾರಿಯ ಕಾಡುಕೋಳಿ—ಕುವೆಂಪು
ಗೋಪಾಲಕೃಷ್ಣ ಗೋಖಲೆ—ಡಾ॥ ದೇ. ಜವರೇಗೌಡ
ಗುರುದೇವ ರವೀಂದ್ರರು—ಡಾ॥ ಹಾ. ಮಾ. ನಾಯಕ
ಮಾನೌವಿ ಪದಗಳು—ಕೆ. ಆರ್. ಲಿಂಗಪ್ಪ
ಡಾ॥ ಜಾಕೀರ್ ಹುಸೇನ್—ಭಾರತೀಸುತ
ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರ ಭಟ್ಟ
ಪುಟಾಣಿಗಳ ರಾಜ್ಯ—ಎಸ್. ಅನಂತನಾರಾಯಣ
ನಂಬಿಕೆಯ ನಂಟು—ದೇವನೂರು ಮಹಾದೇವ
ನಾಗಮಹಾಶಯ—ಉ. ಕಾ. ಸುಬ್ಬರಾಯಾಚಾರ್
ತಿರುವಲ್ಲವರ್—ಸಿಂಪಿ ಲಿಂಗಣ್ಣ
ಸೀತಾ ವನವಾಸ—ತ. ಸು. ಶಾಮರಾವ್
ದ್ರೌಪದಿಯ ಭಂಗ—ಕೂಡಲಿ ಚಿದಂಬರಂ
ಬೆಳಗೊಳದ ಗೊಮ್ಮಟೇಶ—ಜೀ. ಶಂ. ಪರಮಶಿವಯ್ಯ
ಬದುಕು ಬಂಗಾರ—ಕ್ಯಾತನಹಳ್ಳಿ ರಾಮಣ್ಣ
ಕೂಡಲ ಸಂಗಮ—ಈಶ್ವರಚಂದ್ರ ಚಿಂತಾಮಣಿ
ಜಪಾನ್—ಸಿಸು ಸಂಗಮೇಶ
ನನ್ನ ಮಗುವಿನ ಶಾಲೆ—ಮಿರ್ಜಿ ಅಣ್ಣಾರಾಯ
ನಾಗರಮರಿ—ತ.ರಾ.ಸು
ಅಲ್ಲಮ ಪ್ರಭು—ಡಾ॥ ಪ್ರಭುಶಂಕರ್
ಸಾಕ್ರೆಟೀಸ್—ಡಾ॥ ಸಿ. ಪಿ. ಕೃಷ್ಣಕುಮಾರ್
ಶಕುಂತಲೆ—ವಿ. ಸೀತಾರಾಮಯ್ಯ
ಮಾರಿಯ ಕಲ್ಲು—ಕೆ. ಎಸ್. ನರಸಿಂಹಸ್ವಾಮಿ
ಶಾಲುಸಾಬಿ—ಗೊರೂರು ರಾಮಸ್ವಾಮಿ ಅಯ್ಯಂಗಾರ್
ನಳಚರಿತ್ರೆಯ ಸಂಗ್ರಹ—ಎಚ್. ಎಂ. ಶಂಕರನಾರಾಯಣರಾವ್
ಮಕ್ಕಳ ಬೆಳವಣಿಗೆ—ಡಾ॥ ಬಿ. ಕುಪ್ಪುಸ್ವಾಮಿ

Edited by Chandrashekhararadhya, Printed by A. D. Nanjunda Swamy, Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone : 512485